# ಮಗುವಿನ ಭಾಷೆ ಮತ್ತು ಶಿಕ್ಷಕರು

## ಒಂದು ಕೈಪಿಡಿ

ಕೃಷ್ಣಕುಮಾರ್

(ಸಂಯುಕ್ತ ರಾಷ್ಟ್ರಗಳ ಮಕ್ಕಳ ನಿಧಿ, 1986)

**ಪರಿವಿಡಿ**

**ಅಧ್ಯಾಯ 1**

ಭಾಷೆ ಎಂದರೇನು?

ಭಾಷೆ ಮತ್ತು ಕ್ರಿಯೆ

ಭಾಷೆಯೊಂದಿಗಿನ ಕ್ರಿಯೆಗಳು

ತಮ್ಮದೇ ಚಟುವಟಿಕೆಗಳನ್ನು ನಿರ್ದೇಶಿಸುವುದು:

ಇತರರ ಚಟುವಟಿಕೆಗಳನ್ನು ನಿರ್ದೇಶಿಸುವುದು ಮತ್ತು ಗಮನ ಸೆಳೆಯುವುದು:

ಆಟವಾಡುವುದು:

ವಿವರಿಸುವುದು:

ಬದುಕನ್ನು ನಿರೂಪಿಸುವುದು:

ಸಂಬಂಧ ಕಲ್ಪಿಸುವುದು :

ನಿರೀಕ್ಷಿಸುವುದು:

ವಿಚಾರ ಮಾಡುವುದು ಹಾಗೂ ತರ್ಕಿಸುವುದು

ನಮ್ಮ ನುಡಿ ನಮ್ಮನ್ನು ಪ್ರಭಾವಿಸುತ್ತದೆ

**ಅಧ್ಯಾಯ 2**

ಮಾತನಾಡುವುದು

ತಮ್ಮ ಬಗ್ಗೆ ಮಾತಾಡಲು ಅವಕಾಶಗಳು

ವಸ್ತುಗಳು ಹಾಗೂ ಶಾಲೆಯ ಅನುಭವಗಳ ಬಗೆಗೆ ಮಾತಾಡಲು ಅವಕಾಶಗಳು

ಚಿತ್ರಗಳ ಬಗೆಗೆ ಮಾತನಾಡುವುದು

ಕತೆಗಳನ್ನು ಕೇಳುವುದು ಮತ್ತು ಅವುಗಳ ಬಗೆಗೆ ಮಾತನಾಡುವುದು

ಅಭಿನಯಿಸುವುದು

ಶಿಕ್ಷಕರ ಪ್ರತಿಕ್ರಿಯೆ

ಕೆಲವು ಚಟುವಟಿಕೆಗಳು

ನೀವು ಏನನ್ನು ನೋಡಿದಿರಿ?

ಅನ್ವೇಷಕರನ್ನು ಕೇಳುವುದು

ನಾನೇನು ನೋಡಿದೆ ಊಹಿಸಿ

ಹೇಳಿದ್ದನ್ನು ಮಾಡುವುದು

ಹೋಲಿಸುವುದು

ಅದನ್ನು ಹೇಗೆ ಮಾಡಿದೆ?

ಅಭಿನಯಿಸುವುದು

ಒಂದು ಚಿತ್ರವನ್ನು ವಿಶ್ಲೇಷಿಸುವುದು

ಸರಿಯಾದ ಚಿತ್ರವನ್ನು ಊಹಿಸುವುದು

ಕತೆ ಕಟ್ಟುವುದು

ನೀವು ಎಲ್ಲಿ ವಾಸಿಸುತ್ತೀರಿ?

ನಾವು ಏನನ್ನು ಸಾಧಿಸುತ್ತೇವೆ?

**ಅಧ್ಯಾಯ 3**

ಓದುವುದು

ವಸ್ತುಗಳು ಇರುವಂತೆ

ಪುಸ್ತಕಗಳೊಂದಿಗೆ ಪ್ರಾರಂಭಿಸುವುದು

ಮಕ್ಕಳಿಗೆ ಪುಸ್ತಕವನ್ನು ಓದುವುದು

ಪದ್ಯಗಳನ್ನು ಹಾಡುವುದು

ಪುಸ್ತಕಗಳನ್ನು  ರಚಿಸುವುದು

ಕೆಲವು ಚಟುವಟಿಕೆಗಳು

ನೆಲವೇ ಒಂದು ನಕ್ಷೆಯಾಗಿ

ಅಕ್ಷರಗಳನ್ನು  ವಿಂಗಡಿಸುವುದು

ವಿಜ್ಞಾನವನ್ನು ಓದುವುದು

ಪದಗಳೊಂದಿಗೆ ಆಟ

ನೀವು ಓದಿದ್ದನ್ನು ಮಾಡುವುದು

ಕೊನೆಯ ಪದ, ಮುಂದಿನ ಪದ

ಮೂರು ಪ್ರಶ್ನೆಗಳು

ಪದ್ಯದ ಚಮತ್ಕಾರ

ಸ್ಪಂದಿಸುವುದು

ಪ್ರಾರಂಭಿಸುವುದು

**ಅಧ್ಯಾಯ 4**

ಬರೆಯುವುದು

ಮಾತು-ಬರಹಗಳ ನಡುವೆ

ಬರೆಯಲು ಪ್ರಾರಂಭಿಸುವುದು

ಪ್ರಾರಂಭದಿಂದಾಚೆಗೆ

ಶಿಕ್ಷಕರ  ಪ್ರತಿಕ್ರಿಯೆ

ಕೆಲವು ಚಟುವಟಿಕೆಗಳು

**ಅಧ್ಯಾಯ 5**

ಪಠ್ಯಪುಸ್ತಕಗಳು, ಸ್ಥಳಾವಕಾಶಗಳು ಮತ್ತು ಪರೀಕ್ಷೆಗಳು

## ಅಧ್ಯಾಯ ೧

### ಭಾಷೆ ಎಂದರೇನು?

ಭಾಷೆಯನ್ನು ಸಂವಹನದ ಒಂದು ಮಾಧ್ಯಮವೆಂದು ವ್ಯಾಖ್ಯಾನಿಸುವುದು ನಮ್ಮಲ್ಲಿ ಬಹುತೇಕರಿಗೆ ಎಷ್ಟು ಅಭ್ಯಾಸವಾಗಿ ಹೋಗಿದೆ ಎಂದರೆ ಯೋಚಿಸುವ, ಭಾವಿಸುವ, ಪ್ರತಿಕ್ರಿಯಿಸುವ ಒಂದು ಸಾಧನವಾಗಿ ಅದರ ಉಪಯುಕ್ತತೆ ಏನೆಂಬುದನ್ನು ಎಷ್ಟೋ ಸಲ ನಾವು ಮರೆತೇ ಬಿಡುತ್ತೇವೆ. ಚಿಕ್ಕಮಕ್ಕಳಿಗೆ ಕಲಿಸುವವರಿಗೆ ಭಾಷೆಯ ಈ ವ್ಯಾಪಕ ಬಳಕೆ ತಿಳಿದಿರಬೇಕಾದುದು ಬಹಳ ಮುಖ್ಯ, ಏಕೆಂದರೆ ಮಗುವಿನ ವ್ಯಕ್ತಿತ್ವ ಮತ್ತು ಸಾಮರ್ಥ್ಯಗಳ ಬೆಳವಣಿಗೆಯಲ್ಲಿ ಭಾಷೆ ನಿರ್ಣಾಯಕ ಪಾತ್ರ ವಹಿಸುತ್ತದೆ. ಮಗುವಿನ ಪ್ರಪಂಚ, ಆಸಕ್ತಿಗಳು, ಸಾಮರ್ಥ್ಯಗಳು, ಮಾತ್ರವಲ್ಲ ಮೌಲ್ಯಗಳು ಹಾಗೂ ಧೋರಣೆಗಳ ಗ್ರಹಿಕೆಯನ್ನು ರೂಪಿಸುವಲ್ಲಿ ಇದು ಸೂಕ್ಷ್ಮವಾದ, ಆದರೆ ಪ್ರಬಲವಾದ, ಶಕ್ತಿಯಾಗಿ ಕೆಲಸ ಮಾಡುತ್ತದೆ. ಅದು ಹೇಗೆ ಎಂಬುದನ್ನು ಈ ಕೈಪಿಡಿ, ನಿರ್ದಿಷ್ಟವಾಗಿ ಈ ಅಧ್ಯಾಯವು, ವಿವರಿಸುತ್ತದೆ.

ಮೊದಲಿಗೆ, ಸಾಮಾನ್ಯವಾಗಿ ಬೇಡದ ವಿವಾದ ಸೃಷ್ಟಿಸುವ ಕೆಲವು ಸಂಗತಿಗಳ ಬಗೆಗೆ ನಮಗೆ ಸ್ಪಷ್ಟತೆ ಇರಬೇಕು. ಶಾಲಾ ಶಿಕ್ಷಕರು 'ಹಿಂದಿ', 'ಇಂಗ್ಲಿಷ್' ಅಥವಾ ಯಾವುದೇ ಇತರ ಭಾಷೆಯನ್ನು ಶಾಲಾ ವಿಷಯ ಎಂದು ಭಾವಿಸುತ್ತಾರೆ; ಆದಕಾರಣ ಈ ಪುಸ್ತಕವು ಒಂದು ನಿರ್ದಿಷ್ಟ ಭಾಷೆಯನ್ನು ಬೋಧಿಸುವುದರ ಕುರಿತಾಗಿರಬಹುದು ಎಂದು ಅವರು ನಿರೀಕ್ಷಿಸುತ್ತಾರೆ. ತಜ್ಞ ಪರಿಣತರುಗಳಾದರೂ ಮಗುವಿನ ಪ್ರಥಮ ಭಾಷೆ, ದ್ವಿತೀಯ ಭಾಷೆ ಮುಂತಾದವುಗಳ ನಡುವೆ ಸ್ಪಷ್ಟ ವಿಂಗಡಣೆ ಮಾಡಬಲ್ಲವರಾಗಿರುತ್ತಾರೆ. ಶಿಕ್ಷಕರು ಮತ್ತು ತಜ್ಞ ಪರಿಣತರು ಇಬ್ಬರೂ ಸಹ ಭಾಷಾ ಬೋಧನೆಯ ಪುಸ್ತಕದಲ್ಲಿ ಆ ನಿರ್ದಿಷ್ಟ ಭಾಷೆಯ ನಿಯಮಗಳು, ಸಾಮಾನ್ಯ ರಚನೆ, ಶಬ್ದಸಂಪತ್ತು ಮುಂತಾದವುಗಳ ವರ್ಣನೆ ಇರತಕ್ಕದ್ದು ಎಂದು ಅಪೇಕ್ಷಿಸುತ್ತಾರೆ.

ಈ ಪುಸ್ತಕ ಅಂತಹ ಯಾವುದನ್ನೂ ಮಾಡುವುದಿಲ್ಲ. ಇದು ಖಂಡಿತವಾಗಿ ಯಾವುದೇ ನಿರ್ದಿಷ್ಟ ಭಾಷೆಯ ಬೋಧನೆಯನ್ನು ಕಲಿಸುವ ಒಂದು ಮಾರ್ಗಸೂಚಿಯಲ್ಲ. ಇದು ಯಾವುದೇ ಭಾಷೆಯು ಮಕ್ಕಳ ಬದುಕಿನಲ್ಲಿ ಯಾವ ರೀತಿಯಾಗಿ ಕಾರ್ಯನಿರ್ವಹಿಸುತ್ತದೆ ಎಂಬುದರ ಕುರಿತಾದ ಪುಸ್ತಕವಾಗಿದೆ. ಪ್ರಪಂಚದಲ್ಲಿ ಪ್ರತಿಯೊಂದು ಮಗುವೂ ನಿರ್ದಿಷ್ಟವಾದ ಒಂದು ತುರ್ತು ಉದ್ದೇಶವನ್ನು ಈಡೇರಿಸಿಕೊಳ್ಳಲು ಭಾಷೆಯನ್ನು - ಮಗುವಿನ ಮಾತೃಭಾಷೆ ಯಾವುದೇ ಇರಲಿ - ಬಳಸುತ್ತದೆ. ಒಂದು ಮುಖ್ಯ ಉದ್ದೇಶವೆಂದರೆ ಪ್ರಪಂಚವನ್ನು ಅರ್ಥ ಮಾಡಿಕೊಳ್ಳುವಂಥದ್ದು, ಈ ಉದ್ದೇಶದ ಈಡೇರಿಕೆಗೆ ಭಾಷೆಯು ಅದ್ಭುತವಾದ ಸಾಧನವಾಗಿ ಒದಗಿ ಬರುತ್ತದೆ. ಮಗುವಿನ ದೃಷ್ಟಿಕೋನವನ್ನು ಪರಿಗಣಿಸಿ ಮಗುವಿನ ಬದುಕಿನಲ್ಲಿ ಭಾಷೆ ಯಾವ ರೀತಿ ಕೆಲಸ ಮಾಡುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳದೇ ಹೋದರೆ ಶಿಕ್ಷಕರಾಗಿ, ಆರೈಕೆದಾರರಾಗಿ ಅಥವಾ ಪೋಷಕರಾಗಿ ನಮ್ಮ ಪಾತ್ರ ಏನೆಂಬುದನ್ನು ನಿರ್ಧರಿಸಿಕೊಳ್ಳಲು ನಮಗೆ ಸಾಧ್ಯವಾಗುವುದಿಲ್ಲ.

### ಭಾಷೆ ಮತ್ತು ಕ್ರಿಯೆ

ಮಕ್ಕಳ ಭಾಷಾ ಬಳಕೆಯು ಕೈಗಳ ಮೂಲಕ, ಶರೀರದ ಅವಯವಗಳ ಮೂಲಕ ಮತ್ತು ಅವರು ಸಂಪರ್ಕಕ್ಕೆ ಬರುವ ವಸ್ತುಗಳ ಮೂಲಕ ಅವರು ಮಾಡುವ ಕ್ರಿಯೆಗಳೊಂದಿಗೆ ನೇರ ಸಂಬಂಧ ಹೊಂದಿರುತ್ತದೆ. ಬಾಲ್ಯದಲ್ಲಿ ಪದಗಳು ಮತ್ತು ಕ್ರಿಯೆಗಳು ಜೊತೆಯಾಗಿಯೇ ಸಾಗುತ್ತವೆ. ಕ್ರಿಯೆಗಳು ಮತ್ತು ಅನುಭವಗಳು ಪದಗಳ ಅಗತ್ಯವನ್ನು ಸೃಷ್ಟಿಸುತ್ತವೆ ಮತ್ತು ಪದಗಳು ಅನುಭವವಾದ ಬಳಿಕ ಆ ಅನುಭವದೊಂದಿಗೆ ಸಂಪರ್ಕ ಹೊಂದಲು ನೆರವಿಗೆ ಬರುತ್ತವೆ. ಪದಗಳ ನೆರವಿನಿಂದ ಮಕ್ಕಳು ತಮ್ಮ ಸಂಪರ್ಕಕ್ಕೆ ಬರುವ ವಸ್ತುಗಳೊಂದಿಗಿನ ತಮ್ಮ ಸಂಬಂಧವನ್ನು ಸಮೃದ್ಧಿಗೊಳಿಸಿಕೊಳ್ಳುತ್ತಾರೆ. ಹಾಗಲ್ಲದೆ ಕ್ರಿಯೆ ಇಲ್ಲದ, ವಸ್ತುಗಳೊಂದಿಗೆ ಸಂಪರ್ಕ ಹೊಂದಿರದ ಕೇವಲ ಪದಗಳು ಮಗುವಿನ ಪಾಲಿಗೆ ಅರ್ಥವಿಲ್ಲದ ಖಾಲಿ ಶಬ್ದಗಳಾಗಿ ಉಳಿದುಬಿಡುತ್ತವೆ. 'ಬೆಕ್ಕು', 'ಓಡು', 'ಬೀಳು', 'ನೀಲಿ', 'ನದಿ', 'ಒರಟು' ಮುಂತಾದ ವಸ್ತುಗಳೊಂದಿಗೆ ಅಥವಾ ಕ್ರಿಯೆಗಳೊಂದಿಗೆ ಮಗು ಸಕ್ರಿಯವಾಗಿ ತೊಡಗಿಕೊಳ್ಳದ ಹೊರತು ಆ ಪದಗಳು ಮಗುವಿನ ಪಾಲಿಗೆ ಗೌಣವಾಗುತ್ತವೆ. ಈ ಬಗೆಯ ತೊಡಗುವಿಕೆಯಿಂದ ಮಾತ್ರ ಈ ಪದಗಳು ಆ ಚಿತ್ರಗಳೊಂದಿಗೆ ಸಂಬಂಧ ಏರ್ಪಡಿಸಿಕೊಂಡು ಭವಿಷ್ಯದಲ್ಲಿ ಅದರ ಅರ್ಥಪೂರ್ಣ ಬಳಕೆಗೆ ಲಭ್ಯವಾಗುತ್ತವೆ.

ಪದಗಳು ಹಾಗೂ ಮಗುವಿನ ದೈಹಿಕ ಅನುಭವಗಳ ನಡುವಿನ ಸಂಬಂಧವು ವಯಸ್ಕರಿಗೆ, ವಿಶೇಷವಾಗಿ ಶಿಕ್ಷಕರಿಗೆ ಒಂದು ವಿಶಿಷ್ಟ ಹೊಣೆಗಾರಿಕೆಯನ್ನು ನೀಡುತ್ತದೆ. ನಿಮ್ಮ ಆರೈಕೆಗೆ ಒಪ್ಪಿಸಲಾದ ಮಕ್ಕಳಿಗೆ ಅವರ ಪೋಷಕರು ಈಗಾಗಲೇ ವಿವಿಧ ಅನುಭವಗಳನ್ನು ಒದಗಿಸಿ ಕಳುಹಿಸಿದ್ದಾರೆ ಎಂದು ಒಬ್ಬ ಶಿಕ್ಷಕರಾಗಿ ನೀವು ನಿರೀಕ್ಷಿಸಬಹುದು. ಆದರೆ ಬಹುತೇಕ ಪೋಷಕರ ವಿಷಯದಲ್ಲಿ ಈ ನಿರೀಕ್ಷೆ ನಿಜವಾಗಿರುವುದಿಲ್ಲ. ಬಾಲ್ಯದಲ್ಲಿ ಮಕ್ಕಳನ್ನು ಈ ವಿವಿಧ ಬಗೆಯ ವಸ್ತು ವಿಷಯಗಳ ಸಂಪರ್ಕಕ್ಕೆ ತರಬಲ್ಲ ಆತ್ಮವಿಶ್ವಾಸ ಬಹಳ ಪೋಷಕರಿಗೆ ಇರುವುದಿಲ್ಲ. ಇದ್ದರೂ ನಿಧಾನವಾಗಿ ನೋಡಿ, ಮಾಡಿ ಕಲಿಯಲು ಮಕ್ಕಳಿಗೆ ಅಗತ್ಯವಿರುವಷ್ಟು ಸಮಯ ಕೊಡುವ ವ್ಯವಧಾನ ಅವರಿಗಿರುವುದಿಲ್ಲ. ಎಷ್ಟೋ ಸಲ ಮಕ್ಕಳು ನಲ್ಲಿಯಿಂದ ಹರಿದು ಬರುವ ನೀರಿನಲ್ಲಿ ಬೆರಳಾಡಿಸುತ್ತ ಗಂಟೆಗಟ್ಟಲೆ ನಿಂತಾಗ ಅಥವಾ ಪಾತ್ರೆಗಳನ್ನು ಚೆಲ್ಲಾಪಿಲ್ಲಿಯಾಗಿ ನೆಲದ ಮೇಲೆ ಹರಡಿಕೊಂಡಾಗ ಅಥವಾ ಛತ್ರಿಯನ್ನು ಲೆಕ್ಕವಿಲ್ಲದಷ್ಟು ಬಾರಿ ಬಿಚ್ಚುವ ಮುಚ್ಚುವ ಆಟವಾಡತೊಡಗಿದಾಗ ದೊಡ್ಡವರಿಗೆ ಕಿರಿಕಿರಿಯಾಗುತ್ತದೆ. ಅಂತಹ ವಸ್ತುಗಳಿಗೆ ಹಾನಿಯಾಗಬಾರದೆಂದೋ ಅಥವಾ ಅಂತಹ ವಸ್ತುಗಳಿಂದ ಮಗುವಿಗೆ ಏನಾದರೂ ಹೆಚ್ಚುಕಡಿಮೆ ಆಗಬಾರದೆಂದೋ ದೊಡ್ಡವರು ಮಕ್ಕಳನ್ನು ಇಂತಹ ಚಟುವಟಿಕೆಗಳಿಂದ ನಿರ್ಬಂಧಿಸಿ ಮಕ್ಕಳ ಅನುಭವವನ್ನು ಸೀಮಿತಗೊಳಿಸುತ್ತಾರೆ.

ಪೋಷಕರು ಮಾಡಲಿ ಬಿಡಲಿ, ಶಿಕ್ಷಕರ ಕೆಲಸವಂತೂ ಸುಸ್ಪಷ್ಟ. ಮಗು ಜೀವನದ ಅನುಭವಗಳೊಂದಿಗೆ, ವಸ್ತುಗಳೊಂದಿಗೆ ಭಾಷಾ ಬಳಕೆಯನ್ನು ನಿರಂತರವಾಗಿ ಜೋಡಿಸಿಕೊಳ್ಳಲು ಅನುಕೂಲವಾಗುವಂತಹ ವಾತಾವರಣವನ್ನು ಶಿಕ್ಷಕರಾದವರು ಕಲ್ಪಿಸಿಕೊಡಬೇಕು. ಈ ಕೆಳಗಿನವುಗಳನ್ನು ಮಾಡುವುದರ ಮೂಲಕ ಅದನ್ನು ಖಾತರಿಗೊಳಿಸಬಹುದು:

* ಮಕ್ಕಳು ವಿವಿಧ ಬಗೆಯ ವಸ್ತುಗಳನ್ನು (ಎಲೆಗಳು, ಕಲ್ಲುಗಳು, ಗರಿಗಳು, ಕಡ್ಡಿಗಳು, ಮುರಿದ ವಸ್ತುಗಳು ಇತ್ಯಾದಿ) ಶಾಲೆಗೆ ತಂದು ಅವುಗಳ ಬಗೆಗೆ ಮಾತನಾಡುವುದು, ಓದುವುದು, ಬರೆಯುವುದು ಮಾಡುವುದು;

* ಶಾಲೆಯಿಂದ ಹೊರಗೆ ಪಡೆದುಕೊಂಡ ಅನುಭವಗಳ ಬಗೆಗೆ ಮಾತನಾಡಲು, ಬರೆಯಲು ಮತ್ತು ಓದಲು ಮಕ್ಕಳಿಗೆ ಸೂಚಿಸುವುದು;

* ಶಾಲೆಯ ಸುತ್ತಲಿನ ಪ್ರಪಂಚವನ್ನು ನೋಡಲು, ಸಾಮಾನ್ಯ ವಸ್ತುಗಳನ್ನೂ (ಕುಸಿದ ಸೇತುವೆಗಳು, ಮಣ್ಣಿನ ಗುಂಡಿ, ಸತ್ತ ಕೀಟಗಳು, ಮೊಟ್ಟೆ ಇರುವ ಹಕ್ಕಿ ಗೂಡು ಮುಂತಾದವುಗಳನ್ನು ) ಸಹ ಜಾಗರೂಕತೆಯಿಂದ ಪರಿಶೀಲಿಸಲು ಮತ್ತು ಅವುಗಳ ಬಗೆಗೆ ಮಾತನಾಡಲು ಮಕ್ಕಳನ್ನು ತರಗತಿ ಕೋಣೆಯಿಂದ ಹೊರಗೆ ಕರೆದೊಯ್ಯುವುದು, ಶಾಲೆಯ ಸುತ್ತಮುತ್ತಲಿನ ಇಂತಹ ಅಧ್ಯಯನಾ ಭೇಟಿಗಳು ಭಾಷಾ ಕಲಿಕೆಗೆ ಬೆಲೆಬಾಳುವ ಸಂಪನ್ಮೂಲವಾಗಿ ಒದಗಿ ಬರುತ್ತವೆ. ಅದನ್ನು ಮುಂದಿನ ಪುಟಗಳಲ್ಲಿ ಈ ಕೈಪಿಡಿಯು ತೋರಿಸಿಕೊಡುತ್ತದೆ.

ಮಕ್ಕಳು ತಮ್ಮ ಕೈಯಾರೆ ವಿವಿಧ ಬಗೆಯ ಚಟುವಟಿಕೆಗಳನ್ನು ಮಾಡದಿರುವ, ಬಹುತೇಕ ಸಂದರ್ಭದಲ್ಲಿ ಸುಮ್ಮನೆ ಕೂತು ಶಿಕ್ಷಕರ ಮಾತುಗಳನ್ನು ಕೇಳುವ, ಸ್ಪರ್ಶಿಸಲು, ಬಳಸಲು, ಮುರಿಯಲು, ಮುರಿದು ಕಟ್ಟಲು ಅಗತ್ಯವಿರುವ ವಸ್ತುಗಳಿಲ್ಲದ ಶಾಲೆಯು, ಭಾಷಾ ಕೌಶಲವನ್ನು ಬೆಳೆಸಿಕೊಳ್ಳಲು ಉತ್ತಮ ಜಾಗವೆನಿಸಿಕೊಳ್ಳದು.

**ಭಾಷೆಯಿಂದ ಮಕ್ಕಳು ಮಾಡುವ ಕ್ರಿಯೆಗಳು**

ಮಕ್ಕಳು ಮಾತನಾಡಲು ಅಗತ್ಯವಿರುವ ಮೂಲಭೂತ ಸಾಮರ್ಥ್ಯವನ್ನು ಕರಗತ ಮಾಡಿಕೊಂಡ ಕೂಡಲೆ ಭಾಷೆಯನ್ನು ವೈವಿಧ್ಯಮಯ ಉದ್ದೇಶಗಳಿಗೆ ಆಶ್ಚರ್ಯಕರವಾದ ರೀತಿಯಲ್ಲಿ ಬಳಸಲಾರಂಭಿಸುತ್ತಾರೆ ಎಂದು ಮಕ್ಕಳ ಭಾಷೆಯನ್ನು ಅಧ್ಯಯನ ಮಾಡಿರುವವರು ಹೇಳುತ್ತಾರೆ. ಏನಾಗುತ್ತದೆಂದರೆ, ಉದ್ದೇಶಗಳನ್ನಿಟ್ಟುಕೊಂಡು ಸಂಭಾಷಣೆ ನಡೆಸುತ್ತಾರೆ.

**ತಮ್ಮದೇ ಚಟುವಟಿಕೆಗಳನ್ನು ನಿರ್ದೇಶಿಸುವುದು:**

ಸಾಮಾನ್ಯವಾಗಿ ಮಕ್ಕಳು ಯಾವುದಾದರೂ ಚಟುವಟಿಕೆಯಲ್ಲಿ ತೊಡಗಿಕೊಂಡಿರುವಾಗ ತಮ್ಮಷ್ಟಕ್ಕೇ ತಾವೇ ಮಾತನಾಡಿಕೊಳ್ಳುತ್ತಿರುತ್ತಾರೆ, ಇದು ಒಂದು ರೀತಿಯಲ್ಲಿ ಅವರು ಮಾಡುತ್ತಿರುವ ಕೆಲಸದ ವೀಕ್ಷಕ ವಿವರಣೆಯಂತಿರುತ್ತದೆ. ಆ ಚಟುವಟಿಕೆಯನ್ನು ಇನ್ನಷ್ಟು ಸುದೀರ್ಘ ಕಾಲದವರೆಗೆ ಮುಂದುವರಿಸಿಕೊಂಡು ಹೋಗಲು ಮತ್ತು ಆ ಚಟುವಟಿಕೆಯ ಮೇಲಿನ ಆಸಕ್ತಿಯನ್ನು ಉಳಿಸಿಕೊಳ್ಳಲು ಇದು ಅವರಿಗೆ ನೆರವಾಗುತ್ತದೆ. ಆ ವಿವರಣೆಯನ್ನು ಯಾರಾದರೂ ಕೇಳಿಸಿಕೊಳ್ಳುತ್ತಾರೋ ಇಲ್ಲವೋ ಎಂಬುದು ಮುಖ್ಯವಲ್ಲ. ಉದಾಹರಣೆಗೆ, ಹಸಿ ಮರಳಿನಲ್ಲಿ ಮನೆಯನ್ನೋ, ಗುಡ್ಡವನ್ನೋ ಕಟ್ಟುವ ಚಿಕ್ಕಮಕ್ಕಳ ಒಂದು ಗುಂಪಿನಲ್ಲಿ ಪ್ರತಿಯೊಂದು ಮಗುವೂ ಒಂದು ಪ್ರತ್ಯೇಕ ವಿವರಣೆಯನ್ನು ಕೊಡಬಹುದು. ಎಷ್ಟೋ ಸಲ ಇದು ಅಸ್ಪಷ್ಟ ಗೊಣಗುಟ್ಟುವಿಕೆಯಾಗಿಯೂ ಕೇಳಿಸಬಹುದು.

ಒಂದು ಮಗು (3 ರಿಂದ 8 ರ ವಯಸ್ಸಿನ ಯಾವುದೇ ಮಗು) ಯಾವುದಾದರೂ -ಆಟವಾಡುತ್ತಿರುವಾಗ ಕೂಡ- ಚಟುವಟಿಕೆಯಲ್ಲಿ ತೊಡಗಿಕೊಂಡಿರುವಾಗ ಅದನ್ನು ಗಮನಿಸಿ. ಅದರ ಮಾತುಗಳನ್ನು ಕಿವಿಗೊಟ್ಟು ಕೇಳಿ. ಇದೇ ರೀತಿ ಹಲವು ಮಕ್ಕಳನ್ನು -ವಿವಿಧ ವಯೋಮಾನದ ಗಂಡು ಹಾಗೂ ಹೆಣ್ಣುಮಕ್ಕಳನ್ನು- ಗಮನಿಸಿ ನೋಡಿ.

ಅವರ ಸ್ವಗತದ 'ಮಾತು'ಗಳಲ್ಲಿ ವ್ಯಕ್ತಿಗತ ವ್ಯತ್ಯಾಸಗಳನ್ನು ಗುರುತಿಸಬಲ್ಲಿರಾ? ಒಂದು ಚಟುವಟಿಕೆಯಲ್ಲಿ ತೊಡಗಿದ್ದಾಗ ಮಗುವಿನ ಆ 'ಮಾತು' ಮಗುವಿನ ಆಸಕ್ತಿಯನ್ನು ಕಾಯ್ದುಕೊಳ್ಳಲು ನೆರವಾಗುತ್ತದೆಯೇ? ಏಕೆ?

**ಇತರರ ಚಟುವಟಿಕೆಗಳನ್ನು ನಿರ್ದೇಶಿಸುವುದುಮತ್ತು ಗಮನ ಸೆಳೆಯುವುದು**

ಪೋಷಕರಾಗಿ ಹಾಗೂ ಶಿಕ್ಷಕರಾಗಿ ಮಕ್ಕಳ ಬೇಡಿಕೆಗಳನ್ನು ಈಡೇರಿಸುವಲ್ಲಿ ನಾವು ನಮ್ಮ ಸಾಕಷ್ಟು ಸಮಯವನ್ನು ಕಳೆದಿರುವುದರಿಂದ ಭಾಷೆಯ ಈ ಬಳಕೆ ನಮಗೆ ಚೆನ್ನಾಗೇ ಗೊತ್ತಿರುತ್ತದೆ. ಸಾಮಾನ್ಯವಾಗಿ ನಮಗೆ ಭೌತಿಕ ರೂಪದ ಬೇಡಿಕೆಗಳ ಅರಿವಿರುತ್ತದೆ, ಆದರೆ ಇತರ ಹಲವು ರೀತಿಯ ಬೇಡಿಕೆಗಳೂ ಅಷ್ಟೇ ಮುಖ್ಯ. ಈ ಇತರ ಬಗೆಯ ಬೇಡಿಕೆಗಳು ಬೌದ್ಧಿಕವಾದವುಗಳಾಗಿರಬಹುದು ಅಥವಾ ಭಾವನಾತ್ಮಕವಾದುವುಗಳಾಗಿರಬಹುದು. ಮಕ್ಕಳು ತಮಗೆ ಕುತೂಹಲಕರವಾಗಿಯೋ, ಆಕರ್ಷಕವಾಗಿಯೋ ಕಂಡುದರ ಕಡೆಗೆ ಗಮನ ಸೆಳೆಯಲು ಭಾಷೆಯನ್ನು ಬಳಸಬಹುದು. ಮಕ್ಕಳಿಗೆ ಯಾವುದು ತಮ್ಮ ಗಮನ ಸೆಳೆದಿರುತ್ತದೋ ಅದರ ಕಡೆಗೆ ಕೇಳುಗರೂ ಆಸಕ್ತಿ ತೋರಿಸಬೇಕೆಂದು ನಿರೀಕ್ಷಿಸುತ್ತಾರೆ.

ಮಕ್ಕಳು ಗುಂಪಿನಲ್ಲಿದ್ದಾಗ, ಪ್ರತಿಯೊಂದು ಮಗುವೂ ಯಾವುದಾದರೂ ಒಂದು ವಸ್ತುವನ್ನು ಇಲ್ಲವೇ ಆ ವಸ್ತುವಿನ ವಿಶಿಷ್ಟತೆಯನ್ನು ಮತ್ತೊಬ್ಬರು ಗುರುತಿಸದೇ ಹೋಗಿದ್ದಾರೆ ಎಂದು ಭಾವಿಸಿ ಅವರ ಗಮನ ಸೆಳೆಯುವುದನ್ನು ನೀವು ಗಮನಿಸಬಹುದು. ಮಗು ವ್ಯಕ್ತಪಡಿಸುವ ತನ್ನ ನಿರೀಕ್ಷೆಯಲ್ಲಿ ಭಾಷೆಯ ಈ ಬಳಕೆಯ ಉಪಯುಕ್ತತೆ ಹುದುಗಿದೆ. ಆ ನಿರೀಕ್ಷೆ 'ನಾನು ಗಮನಿಸಿರುವುದನ್ನು ಇತರರೂ ನೋಡಲು ಬಯಸುತ್ತಾರೆ' ಎಂಬುದಾಗಿರುತ್ತದೆ. ಮನುಷ್ಯ ಸಂಬಂಧಗಳು ಮತ್ತು ಸಂತಸಮಯವಾದ ಸಹಬಾಳ್ವೆಗಳಿಗೆ ಸಂಬಂಧಿಸಿದ ಗಹನವಾದ ನಂಬಿಕೆಯಲ್ಲಿ ಈ ನಿರೀಕ್ಷೆಯ ಬೇರುಗಳಿರುತ್ತವೆ. ಒಬ್ಬ ವ್ಯಕ್ತಿಗೆ ಗಮನ ಹರಿಸಲು ಸೂಚಿಸಿದಾಗ್ಯೂ ಆ ವ್ಯಕ್ತಿ ಆ ನಿರೀಕ್ಷೆಯನ್ನು ಪೂರೈಸದೇ ಹೋದಾಗ ಭಾಷೆಯನ್ನು ಅಭಿವೃದ್ಧಿಪಡಿಸಿಕೊಳ್ಳುವುದರ ಮೂಲಭೂತ ಉದ್ದೇಶಕ್ಕೆ ಧಕ್ಕೆ ಉಂಟಾಗುತ್ತದೆ.

**ಆಟವಾಡುವುದು**

ಎರಡೂವರೆ ವರ್ಷಕ್ಕಿಂತ ಮೇಲ್ಪಟ್ಟ ವಯೋಮಾನದ ಬಹುತೇಕ ಮಕ್ಕಳಿಗೆ, ಪದಗಳು ಆಟಕ್ಕೆ ಮತ್ತು ಮನರಂಜನೆಗೆ ಒಂದು ದೊಡ್ಡ ಸಂಪನ್ಮೂಲವಾಗಿರುತ್ತವೆ. ಅವರು ಪದಗಳನ್ನು ವಿವಿಧ ಧ್ವನಿಗಳಲ್ಲಿ ಪುನರುಚ್ಚರಿಸುತ್ತಾರೆ, ವಿರೂಪಗೊಳಿಸುತ್ತಾರೆ, ಚಿತ್ರ ವಿಚಿತ್ರವಾಗಿ ಸಂಯೋಜಿಸುತ್ತಾರೆ ಮತ್ತು ಈ ಎಲ್ಲ ಪ್ರಕ್ರಿಯೆಗಳನ್ನು ಆನಂದಿಸುತ್ತಾರೆ. ಕೆಲವು ಪದಗಳನ್ನು ಉಚಿತವಲ್ಲ ಎನಿಸುವ ಕಡೆಗಳಲ್ಲಿಯೂ ಅವರು ಬಳಸಲು ಬಯಸುತ್ತಾರೆ. ಪದಗಳನ್ನು ಹೀಗೆ ವಿರೂಪಗೊಳಿಸುವಂತಹ ಪದ್ಯಗಳನ್ನು ಅವರು ಸುಲಭವಾಗಿ ಕಲಿಯುತ್ತಾರೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಚಿಕ್ಕ ಮಕ್ಕಳು ಪದಗಳನ್ನು ಆಟದ ವಸ್ತುಗಳಂತೆ ನಡೆಸಿಕೊಳ್ಳುತ್ತಾರೆ. ಪದಗಳೊಂದಿಗಿನ ಈ ಆಟ ಅವರೊಳಗಿನ ಸೃಜನಶೀಲತೆಗೆ ಮತ್ತು ಚೈತನ್ಯಕ್ಕೆ ಒಂದು ಮುಖ್ಯವಾದ ಹೊರದಾರಿಯಾಗಿದೆ.

ಮಕ್ಕಳು ಒಬ್ಬರೇ ಅಥವಾ ಗುಂಪಿನಲ್ಲಿ, ಮನೆಯೊಳಗೋ, ಬೀದಿಯಲ್ಲೋ, ಹಗ್ಗದಾಟವನ್ನೋ, ಓಡುವ ಜಿಗಿಯುವ ಆಟವನ್ನೋ, ಚೆಂಡಾಟವನ್ನೋ ಆಡುವಾಗ ಅವರು ಪ್ರಾಸಬದ್ಧವಾಗಿ ಹಾಡುವ ಹಾಡನ್ನು ಕೇಳಿ. ನೀವು ಗಮನಬಿಟ್ಟು ಕೇಳಿದರೆ ಸಾಂಪ್ರದಾಯಿಕ ಮಕ್ಕಳ ಶಿಶುಗೀತೆಗಳ ಒಂದು ಕಿರು ಸಂಗ್ರಹವನ್ನೇ ಮಾಡಿಕೊಳ್ಳಬಹುದು. ಆಧುನಿಕ ಮಾಧ್ಯಮಗಳ ಭರಾಟೆ ಹಾಗೂ ಪೇಲವವಾದ ಭಾಷಾ ಬೋಧನೆಯ ನಡುವೆಯೂ ಅವು ಇಂದಿಗೂ ಜೀವಂತವಾಗಿವೆ.

ನಿಮಗೆ ಸಿಗುವ ಶಿಶುಗೀತೆಗಳನ್ನು ವ್ಯವಸ್ಥಿತ ರೀತಿಯಲ್ಲಿ ಬರೆದುಕೊಳ್ಳಿ. ಅವುಗಳ ವಿಭಿನ್ನ ರೂಪಗಳು ಸಿಕ್ಕರೆ ಅವುಗಳನ್ನೂ ಸಂಗ್ರಹಿಸಿ. ಅವು ವ್ಯಾಕರಣ ದೋಷಗಳಿಂದ ಕೂಡಿದ್ದರೆ ವಿರೂಪಗೊಂಡ ಪದಗಳಿದ್ದರೂ ಅವುಗಳನ್ನು ಸರಿಪಡಿಸಬಾರದು.

ಈ ಮಕ್ಕಳಾಟದ ಪ್ರಾಸಬದ್ಧ ಪದ್ಯಗಳು ಒಂದು ಭಾಷೆಯ ಅತ್ಯಂತ ಸೃಜನಶೀಲವಾದ, ಚೈತನ್ಯಮಯವಾದ, ಅಪರೂಪದ ಸಂಪನ್ಮೂಲಗಳಾಗಿವೆ. ಓದುವಿಕೆಯಂತಹ ಭಾಷೆಯ ಕೆಲವು ಮೂಲಭೂತ ಕೌಶಲಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಅವು ಅತ್ಯಂತ ಪರಿಣಾಮಕಾರಿಯಾದ, ಉಪಯುಕ್ತವಾದ ಸಾಧನಗಳಾಗಿವೆ. ಅವುಗಳಲ್ಲಿ ಬರುವ ಪದಗಳ ಜೋಡಣೆಯೇ ಮಕ್ಕಳಿಗೆ ಬಹು ಆಕರ್ಷಕ!

ಅವನ್ನು ಹೇಗೆ ಬಳಸಬೇಕು ಎಂಬುದರ ಕುರಿತಾದ ಸಲಹೆಗಳಿಗೆ ಮುಂದಿನ ಅಧ್ಯಾಯವನ್ನು ನೋಡಿ.

ಈ ಕೆಳಗಿನ ಉದಾಹರಣೆಗಳು ಎರಡು ಭಾಷೆಗಳಲ್ಲಿ ಕಂಡುಬರುವ ಸಾಂಪ್ರದಾಯಿಕ ಮಕ್ಕಳ ಪ್ರಾಸಬದ್ಧ ಪದ್ಯಗಳಿಗೆ ಉದಾಹರಣೆಗಳಾಗಿವೆ:

'I am a gold lock'.

'I am a gold key.'

'I am a silver lock'.

'I am a silver key'.

'I am a brass lock'.

'I am a brass key'.

'I am a monk lock.'

'I am a monkey'.

No school today, half holiday.

When we get our holiday we'll all run away.

Where will we run to? Down the slippy lane.

Who will run after us? The teacher with the cane.

*****

**ಶಿಶು ಗೀತೆ[*] 1**

ಕೊಕ್ಕೋ ಕೋಳಿ

ಬೆಳಗಾಯ್ತು ಏಳಿ

ಬೌ ಬೌ ನಾಯಿ

ಸಾಕು ಮುಚ್ಚು ಬಾಯಿ

ಮಿಂಯಾ ಮಿಂಯಾ ಬೆಕ್ಕೇ

ಕದ್ದು ಹಾಲು ನೆಕ್ಕೇ

ಅಂಬಾ ಅಂಬಾ ಕರುವೆ

ಹುಲ್ಲು ಹೊತ್ತು ತರುವೆ

ಚಿ ಚಿ ಇಲಿ

ಮಾಡಿಯಿಂದ ಇಳಿ

ಕಾ ಕಾ ಕಾಗೆ

ಅರಚಬೇಡ ಹೀಗೆ!

**ವಿವರಿಸುವುದು**

ಒಂದು ಘಟನೆ 'ಹೇಗೆ' ನಡೆಯಿತು ಎಂಬುದನ್ನು ತಿಳಿಸಲು ಮಕ್ಕಳು ಅದರ ಬಗೆಗೆ ಮಾತನಾಡುತ್ತಾರೆ. ಉದಾಹರಣೆಗೆ, ಮೂರು ವರ್ಷದ ಒಂದು ಮಗುವನ್ನು ನೀವು ಮಳೆ ಹೇಗೆ ಸುರಿಯಿತು ಎಂದು ಕೇಳಿದರೆ, ಆ ಮಗು ಪ್ರಾಯಶಃ ನಿಮಗೆ ಹೀಗೆ ಹೇಳಬಹುದು: "ಆಕಾಶದ ತುಂಬ ಕಪ್ಪು ಮೋಡಗಳು ತುಂಬಿಕೊಂಡಿದ್ದವು, ಆಮೇಲೆ ಸಣ್ಣ ಸಣ್ಣ ಹನಿಗಳು ಬಿದ್ದವು, ಆಮೇಲೆ ಇನ್ನೂ ಜೋರಾಗಿ ಮಳೆ ಸುರಿಯಿತು, ಎಷ್ಟು ಜೋರಾಗಿ ಅಂದರೆ ನಮಗೆ ಏನೂ ಕಾಣಿಸುತ್ತಿರಲಿಲ್ಲ.." ಇತ್ಯಾದಿ. ಈ ಉದಾಹರಣೆಯಲ್ಲಿ, ಘಟನಾವಳಿಗಳನ್ನು ನಿರೂಪಿಸುವಾಗ ಒಂದು ಪ್ರಮುಖವಾದ ಘಟನೆ ಹೇಗೆ ನಡೆಯಿತು

---

[*] ಈ ಪುಸ್ತಕದಲ್ಲಿದ್ದ ಹಿಂದಿ ಉದಾಹರಣೆ ಮತ್ತು ಹಿಂದಿ ಮಕ್ಕಳ ಪದ್ಯಗಳಿಗೆ ಬದಲಾಗಿ ಕನ್ನಡ ಉದಾಹರಣೆ, ಕನ್ನಡ ಶಿಶು ಗೀತೆಗಳನ್ನು ಸಂಗ್ರಹಿಸಿ ನೀಡಿದ್ದಾರೆ: ಕಾಪಿ ಎಡಿಟರ್, ನಾಗಮಣಿ ಎಸ್.ಎನ್.

ಎಂಬುದನ್ನು ಮಗುವು  ವಿವರಿಸುತ್ತಿರುತ್ತದೆ. ಭಾಷೆಯ ಈ ಬಗೆಯ ಬಳಕೆಯಿಂದ ಕತೆಗಳು ಹುಟ್ಟುತ್ತವೆ; ಈ ಅರ್ಥದಲ್ಲಿ ಎಲ್ಲಾ ಕತೆಗಳೂ ಘಟನೆಯ ವಿವರಣೆಗಳಾಗಿವೆ. ನಿಜ, ಎಲ್ಲ ಕತೆಗಳೂ ಘಟನೆಗಳ ವಿಶ್ವಾಸಾರ್ಹವಾದ ಅಥವಾ ವೈಜ್ಞಾನಿಕವಾದ ವಿವರಣೆಗಳನ್ನು ಒದಗಿಸದಿರಬಹುದು. ಆದರೆ ಬದುಕನ್ನು ವ್ಯಾಖ್ಯಾನಿಸುವ ನಮ್ಮ ಆಕಾಂಕ್ಷೆಯನ್ನು ಅವು ಸೂಚಿಸುತ್ತವೆ. ದೊಡ್ಡವರಾದ ನಾವು ಹೊರಗಿನ ಪ್ರಪಂಚದಲ್ಲಿ ಅಥವಾ ರಾಜಕೀಯ ಕ್ಷೇತ್ರದಲ್ಲಿ ನಡೆಯುವ ಘಟನೆಗಳನ್ನು ವಿವರಿಸಲು ಬಯಸುವಂತೆ ಚಿಕ್ಕ ಮಕ್ಕಳು ತಮ್ಮ ಬದುಕಿನ ಘಟನೆಗಳನ್ನು ವ್ಯಾಖ್ಯಾನಿಸಲು ಬಯಸುತ್ತಾರೆ.

ಘಟನೆಯನ್ನು ವಿವರಿಸುವ ಕತೆಗಳನ್ನು ಸಂಗ್ರಹಿಸಿ. ಮಳೆ ಹೇಗೆ ಸುರಿಯುತ್ತದೆ, ಮನುಷ್ಯ ಬೆಂಕಿಯನ್ನು ಹೇಗೆ ಕಂಡು ಹಿಡಿದ ಇವೇ ಮುಂತಾದ ರೀತಿಯ ಹಲವಾರು ಕತೆಗಳು ನಿಮಗೆ ಸ್ಥಳೀಯ ಜಾನಪದ ಕತೆಗಳಲ್ಲಿ ಸಿಗಬಹುದು. ಅಂತಹ ಒಂದು ಕತೆಗೆ  ಉದಾಹರಣೆ,  ಆನೆಗಳು ತಮ್ಮ ಹಾರಾಡುವ ಸಾಮರ್ಥ್ಯವನ್ನು ಹೇಗೆ ಕಳೆದುಕೊಂಡವು ಎಂಬುದನ್ನು ವಿವರಿಸುವ ಕತೆಯನ್ನು  ಈ ಕೆಳಗಿನ 'ಬಾಕ್ಸ್'ನಲ್ಲಿ  ಗಮನಿಸಿ. ಭಾಷಾ ಬೋಧನೆಯಲ್ಲಿ ಇಂತಹ ಕತೆಗಳ ಬಳಕೆಯ ಕುರಿತಾದ ಸಲಹೆಗಳಿಗೆ ಮೇಲಿನ ಮಾತು ಮತ್ತು ಓದುವುದು ಅಧ್ಯಾಯಗಳನ್ನು  ನೋಡಿ.

ಆಕಾಶದಲ್ಲಿ ಆನೆಗಳು

ಬಹಳ ಹಿಂದೆ, ಒಂದಾನೊಂದು ಕಾಲದಲ್ಲಿ, ಭಾರತದಲ್ಲಿ ವಾಸಿಸುತ್ತಿದ್ದ ಆನೆಗಳು ಹಾರಬಲ್ಲವಾಗಿದ್ದವು. ಇಂದು ಹೇಗೋ ಹಾಗೆಯೆ ಅಂದೂ ಕೂಡ ಆನೆಗಳು ತುಂಬಾ ದೊಡ್ಡವಾಗಿದ್ದವು. ಅವುಗಳ  ನೆಂಟರಾದ ಮೋಡಗಳ ಹಾಗೆ ಅವೂ ಕೂಡ ಬೂದು ಬಣ್ಣದವಾಗಿದ್ದವು. ಆ ಮೋಡಗಳಂತೆ ಆನೆಗಳೂ ಸುಮ್ಮನೆ ತಮ್ಮ ಕಿವಿಗಳನ್ನು ಬೀಸುವ ಮೂಲಕ ಆಕಾಶದಲ್ಲಿ ಹಾರಾಡುತ್ತಿದ್ದವು. ಮೋಡಗಳು ತಮ್ಮ ಆಕಾರ ಬದಲಾಯಿಸುತ್ತವೆ, ಅದೇ ರೀತಿ ಆನೆಗಳೂ ಸಹ ತಮ್ಮ ಆಕಾರ ಬದಲಾಯಿಸಬಲ್ಲವಾಗಿದ್ದವು. ತಮಗೆ ಇಷ್ಟ ಬಂದ ರೂಪ ತಳೆಯಬಲ್ಲವಾಗಿದ್ದವು. ಡ್ರ್ಯಾಗನಂತೆಯೋ ಇಲ್ಲವೇ ಬೃಹತ್  ಚೆಕ್ಕಿನ ಮರಿಯಂತೆಯೋ ಕಾಣಿಸಬಲ್ಲ ರೂಪ ತಳೆಯುತ್ತಿದ್ದವು. ಕೋಟೆಯ ಆಕಾರದಲ್ಲಿ, ಪರ್ವತಾಕಾರದಲ್ಲಿ ಇಲ್ಲವೇ ಓಡುತ್ತಿರುವ ನಾಯಿಯ ಆಕಾರದಲ್ಲಿ, ಯಾವ ಆಕಾರದಲ್ಲಿ ಬೇಕಾದರೂ ಕಾಣಿಸಿಕೊಳ್ಳಬಲ್ಲವಾಗಿದ್ದವು.

ಒಂದು ಬೇಸಿಗೆಯ ದಿವಸ ಹೊಳೆಯುವ ಕೆಲವು ಬೂದು ಬಣ್ಣದ ಆನೆಗಳು ಬಿಸಿಲಿನಲ್ಲಿ ಹಾರಾಡುತ್ತಿದ್ದವು. ಅವು ಒಂದು ಹಳ್ಳಿಯ ಮೇಲೆ ಹಾರಿ ಹೋಗುವಾಗ ಕೆಳಗೆ ಕೆಲವು ಮಕ್ಕಳು ಆಟವಾಡುತ್ತಿದ್ದವು, ಒಬ್ಬ ರೈತ ಹೊಲದಲ್ಲಿ ಉಳುಮೆ ಮಾಡುತ್ತಿದ್ದ, ನದಿಯಲ್ಲಿ ಬಾಲಕನೊಬ್ಬ ಕಪ್ಪು ಬಣ್ಣದ ಎಮ್ಮೆಗಳ ಮೈತೊಳೆಯುತ್ತಿದ್ದ, ಕಾಡಿನಲ್ಲಿ ಕೋತಿಗಳು ಒಂದೇ ಸಮನೆ  ಕಿರುಚಾಡುತ್ತಿದ್ದವು. ಆದರೆ ಮೇಲೆ ಗಗನದಲ್ಲಿ ಬಿಸಿಗಾಳಿ ಬಿರುಸಾಗಿ ಒಂದೇ ಸಮನೆ ಬೀಸುತ್ತಿತ್ತು. ಅದು ಹಾರುತ್ತಿದ್ದ ಈ ಆನೆಗಳನ್ನು ನೋಡಿತು. ಒಡನೆಯೇ ಅವುಗಳ ಸೊಂಡಿಲುಗಳೊಳಗೆ ಹೊಕ್ಕಿತು. ಆನೆಗಳಿಗೆ ಮೂಗಿನೊಳಗೆ ಮೆಣಸಿನಪುಡಿ ಹಾಕಿದಂತಾಯಿತು!

ಆನೆಗಳು ಕ್ರರ್ ಫರ್'ರ್'ರ್ ಆ...ಕ್ಷೀ..ಕ್ಷೀ... ಎಂದು ಜೋರಾಗಿ ಸೀನಲಾರಂಭಿಸಿದವು. ಈ ಬಿಸಿಗಾಳಿಯಿಂದ ದೂರಕ್ಕೆ ಹೋಗಲು ಸೂಕ್ತವಾದ ಜಾಗವನ್ನು ಹುಡುಕತೊಡಗಿದವು. ಕೆಳಗೆ ದೊಡ್ಡದಾದ ಕೆಲವು ಮಾವಿನ ಮರಗಳು ಕಾಣಿಸಿದವು, ತಂಪಾದ ನೆರಳಿನೊಂದಿಗೆ ಪರಿಮಳಭರಿತವಾಗಿದ್ದವು. ಆನೆಗಳು ಹಾರುತ್ತ ನಿಧಾನವಾಗಿ

ಕೆಳಗಿಳಿದವು, ಬಿಸಿಗಾಳಿಯಿಂದ ದೂರಕ್ಕೆ ಸಾಗಿ ಬಂದು ದೊಡ್ಡ ಗಾತ್ರದ ಮಾವಿನ ಮರದ ಒಂದು ರೆಂಬೆಯ ಮೇಲೆ ಕುಳಿತವು.

ಅದೇ ಹೊತ್ತಿಗೆ ಆ ಮರದಡಿಯಲ್ಲಿ ಒಬ್ಬ ಶಿಕ್ಷಕರು ಮತ್ತು ಕೆಲವು ವಿದ್ಯಾರ್ಥಿಗಳು ಕುಳಿತಿದ್ದರು. ಆ ದಿವಸ ಶಾಲೆಯ ಒಳಗೆ ವಿಪರೀತ ಸೆಕೆ ಇತ್ತು. ಶಿಕ್ಷಕರು ಬಳಲಿದ್ದರು, ವಿದ್ಯಾರ್ಥಿಗಳೂ ಆಯಾಸಗೊಂಡಿದ್ದರು.ಅವರು ಪೆನ್ಸಿಲ್‌ಗಳನ್ನು ಮುರಿದರು. ತಪ್ಪು ಉತ್ತರಗಳನ್ನು ಬರೆದರು. ಪುಟ್ಟ ಇಲಿ ಮರಿಗಳಂತೆ ಪಿಸಪಿಸನೆ ಪಿಸುಗುಟ್ಟಿದರು, ಮಿಸುಕಾಡಿದರು, ಸುಮ್ಮನೆ ಕೂರಲು ಅವರಿಂದಾಗಲಿಲ್ಲ.

ಶಿಕ್ಷಕರಿಗೆ ಕಿರಿಕಿರಿಯಾಗತೊಡಗಿತು, ಕಾಲನ್ನು ನೆಲಕ್ಕೆ ಬಲವಾಗಿ ಬಡಿದರು, ಬೆತ್ತವನ್ನು ಝಳಪಿಸುತ್ತ ಮಕ್ಕಳ ಮೇಲೆ ಕೂಗಾಡಿದರು. ಬಳಿಕ ತಮಗೆ ತಾವೇ ಅಂದುಕೊಂಡರು "ಈ ಮಕ್ಕಳು ಸುಮ್ಮನೆ ಕೂರದಿದ್ದರೆ ನನ್ನ ಮಂತ್ರಬಲದಿಂದ ಇವರೆಲ್ಲರನ್ನೂ ಪುಟ್ಟ ಮೊಲಗಳನ್ನಾಗಿ ಮಾಡಿಬಿಡುತ್ತೇನೆ". ಅವರು ಮಕ್ಕಳ ಬಳಿಸಾರಿ ಅವರ ಪೈಕಿ ಅತ್ಯಂತ ತುಂಟನಾಗಿದ್ದ ಹುಡುಗನನ್ನು ಹಿಡಿದುಕೊಂಡರು. ಅದೇ ಗಳಿಗೆಯಲ್ಲಿ ಆನೆಗಳು ಆಕಾಶದಿಂದ ಧರೆಗಿಳಿದು ಬಂದು ಶಿಕ್ಷಕರ ತಲೆಯ ಮೇಲಿದ್ದ ರೆಂಬೆಯ ಮೇಲೆ ಕುಳಿತವು.

ಕ್ರ್.ರ್..ರ್...ಕ್ರೀಕ್.. ಕ್ರ್.ರ್..ರ್...ಕ್ರೀಕ್.. ದಢಾರ್!

ರೆಂಬೆ ಮುರಿದು ಕೆಳಗಿದ್ದ ಶಿಕ್ಷಕರ ಮೇಲೇ ಬಿತ್ತು! ಶಿಕ್ಷಕರು ಸಹ ಕೆಳಗೆ ಬಿದ್ದರು. ಆದರೆ ಆನೆಗಳು ಅದಕ್ಕೆ ತಲೆ ಕೆಡಿಸಿಕೊಳ್ಳದೆ ತಮ್ಮ ಪಾಡಿಗೆ ತಾವು ಕಿವಿಗಳನ್ನು ಬೀಸುತ್ತ ಮತ್ತೊಂದು ಮರಕ್ಕೆ ಹಾರಿದವು. ಆಗ ಶಿಕ್ಷಕರಿಗೆ ಬಹಳ ಕೋಪ ಬಂತು, ಅವರು ಎದ್ದು ನಿಂತು ಆನೆಗಳತ್ತ ನೋಡಿ "ಎಲೈ ದುಷ್ಟ ಆನೆಗಳೇ! ನಿಮಗೆ ತಕ್ಕ ಶಾಸ್ತಿ ಮಾಡುತ್ತೇನೆ! ನನ್ನನ್ನೇ ಬೀಳಿಸುವಿರಾ? ನಿಮಗೆ ಸರಿಯಾದ ಪಾಠ ಕಲಿಸುತ್ತೇನೆ!" ಎಂದು ಕಿರುಚಿದರು. ತಮ್ಮ ಬೆತ್ತವನ್ನು ಆನೆಗಳ ಕಡೆಗೆ ತಿರುಗಿಸುತ್ತ ಯಾವುದೋ ಮಂತ್ರವನ್ನು ಉಚ್ಚರಿಸಿದರು.

ಆನೆಗಳು ನಿಧಾನವಾಗಿ ಕೆಳಗಿಳಿದವು. ಅಲ್ಲಿಂದಾಚೆಗೆ ಅವುಗಳಿಗೆ ಹಾರಲಾಗಲಿಲ್ಲ. ಅಂದಿನಿಂದ ಆನೆಗಳು ನೆಲದ ಮೇಲೆ ನಡೆಯಲಾರಂಭಿಸಿದವು. ಆನೆಗಳು ತಲೆ ಮೇಲೆತ್ತಿ ಆಕಾಶದಲ್ಲಿ ಸಂಚರಿಸುವ ಮೋಡಗಳನ್ನು ನೋಡಿದಾಗಲೆಲ್ಲ ಅವು ತಾವೂ ಕೂಡ ಹಾರಾಡುತ್ತಿದ್ದ, ಇಷ್ಟ ಬಂದ ಆಕಾರ ತಳೆಯುತ್ತಿದ್ದ, ಇಷ್ಟ ಬಂದ ಜಾಗಕ್ಕೆ ಹೋಗುತ್ತಿದ್ದ ದಿನಗಳನ್ನು ನೆನಪಿಸಿಕೊಳ್ಳುತ್ತವೆ.

*ಫ್ರಾನ್ಸಿಸ್ ಕುಮಾರ್ ಅವರು ನಿರೂಪಿಸಿದ ಪ್ರಾಚೀನ ಭಾರತೀಯ ಪುರಾಣ ಕಥೆ*

**ಬದುಕನ್ನು ನಿರೂಪಿಸುವುದು**

ಭಾಷೆಯ ಇತರ ಎಲ್ಲ ಬಳಕೆಗಳಲ್ಲಿ ಈ ಬಳಕೆಯೂ ಸೇರಿರುತ್ತದೆ, ಆದರೆ ಅದನ್ನು ನಾವು ಪ್ರತ್ಯೇಕವಾಗಿ ಅಧ್ಯಯನ ಮಾಡಬೇಕಾಗುತ್ತದೆ. ಇಲ್ಲವಾದಲ್ಲಿ ಅದು ನಮ್ಮ ಗಮನಕ್ಕೆ ಬಾರದೇ ಹೋಗುತ್ತದೆ. ದೊಡ್ಡವರಂತೆಯೇ ಮಕ್ಕಳೂ ಸಹ ಹಳೆಯದನ್ನು ನೆನಪಿಸಿಕೊಳ್ಳಲು, ಒಂದು ಘಟನೆಯನ್ನು, ಓರ್ವ ವ್ಯಕ್ತಿಯನ್ನು ಅಥವಾ ಒಂದು ಸಣ್ಣ ವಸ್ತುವನ್ನು ಜ್ಞಾಪಿಸಿಕೊಳ್ಳಲು ಭಾಷೆಯನ್ನು ಬಳಸುವುದುಂಟು. ನಮ್ಮ ಸುತ್ತ ಇಲ್ಲದಿರುವ ಯಾವುದೋ ಒಂದನ್ನು ಮರುಸೃಷ್ಟಿಸಲು

ಪದಗಳು ನಮಗೆ ನೆರವಾಗುತ್ತವೆ, ಎಷ್ಟೋ ಸಲ ಹೀಗೆ ಮರುಸೃಷ್ಟಿಗೊಂಡುದು ಎಷ್ಟು ನೈಜವಾಗಿ ಭಾಸವಾಗುವುದೆಂದರೆ ಆ ಕುರಿತು ನಾವು ಕೊನೆಯಿರದಂತೆ ಮಾತನಾಡುತ್ತಲೇ ಇರುತ್ತೇವೆ.

ಮಕ್ಕಳು ವಸ್ತುಗಳಿಗೆ ಹಾಗೂ ಅನುಭವಗಳಿಗೆ ಇನ್ನಷ್ಟು ಸಮೀಪರಾಗುವ ಸಲುವಾಗಿ, ಆ ಮೂಲಕ ಒಂದು ಸಂಗತಿಯನ್ನು ಭಾವನಾತ್ಮಕ ಹಂತದಲ್ಲಿ ಸ್ವೀಕರಿಸುವ ಸಲುವಾಗಿ ಅವನ್ನು ನಿರೂಪಿಸುತ್ತಾರೆ. ಯಾವುದೋ ಒಂದನ್ನು ಕಂಡು ಹೆದರಿರುವ ಒಂದು ಮಗು ಅದನ್ನು ಕುರಿತು ಹಲವು ಬಾರಿ, ಅದಕ್ಕೆ ಹೊಂದಿಕೊಳ್ಳುವವರೆಗೂ, ಮಾತನಾಡುತ್ತಿರುತ್ತದೆ. ವಿಶೇಷವಾಗಿ ಮಗುವಿನೆದುರು ಬದುಕಿನ ಅಚ್ಚರಿಗಳು ಅನಾವರಣವಾದಾಗ ಆ ಅಚ್ಚರಿಯಿಂದ (ಅದರ ಎಲ್ಲ ಅನಿಶ್ಚಿತತೆ, ಗೊಂದಲ, ಕೆಲವೊಮ್ಮೆ ಭಯವನ್ನೂ ಒಳಗೊಂಡಂತೆ ಅದರಿಂದ) ಹೊರಬರುವ ಸಲುವಾಗಿ ಮಗು ಪದಗಳ ನೆರವಿನಿಂದ ಮತ್ತೆ ಮತ್ತೆ ಆ ಘಟನೆಯನ್ನು, ಅದು ಚಿರಪರಿಚಿತವಾಗುವವರೆಗೂ, ಮರುಸೃಷ್ಟಿಸುತ್ತಲೇ ಇರುತ್ತದೆ.

**ಸಂಬಂಧ ಕಲ್ಪಿಸುವುದು**

ಯಾರಾದರೂ ತಮ್ಮ ಅಥವಾ ಇತರರ ಅನುಭವದ ಬಗೆಗೆ ಹೇಳುವ ಕತೆ ಕೇಳುವಾಗ ನಾವು ಅದರಲ್ಲಿ ವರ್ಣಿಸಿರುವ ಪಾತ್ರಗಳು ಹಾಗೂ ಘಟನಾವಳಿಗಳೊಂದಿಗೆ ಸಂಬಂಧ ಕಲ್ಪಿಸಿಕೊಂಡು ಸ್ಪಂದಿಸುತ್ತೇವೆ. ಹಾಗೆ ಸಂಬಂಧ ಹೊಂದುವ ಸಲುವಾಗಿ ನಮ್ಮ ಸದ್ಯದ ಬದುಕಿನಿಂದಾಚೆಗೆ, ಸೀಮಿತವಾದ ಗತಕಾಲದ ಅನುಭವಗಳಿಂದಾಚೆಗೆ ನಮ್ಮನ್ನು ನಾವು ಅದರೊಂದಿಗೆ ಜೋಡಿಸಿಕೊಳ್ಳುತ್ತೇವೆ. ಒಂದು ಮಗು ಒಂದು ಬೊಂಬೆಯ ಭಾವನೆಗಳನ್ನು ಕುರಿತು ಮಾತನಾಡುವಾಗ ಅದು ತನ್ನನ್ನು ತಾನೇ ಬೊಂಬೆಯಂತೆ ಕಲ್ಪಿಸಿಕೊಳ್ಳುತ್ತದೆ. ಭಾಷೆಯಿಂದ ಮತ್ತೊಬ್ಬರೊಂದಿಗೆ ಸಂಬಂಧ ಕಲ್ಪಿಸಿಕೊಂಡು ತಾದಾತ್ಮ್ಯ ಹೊಂದಿ ಅನುಭವಿಸಲು ಸಾಧ್ಯವಾಗುತ್ತದೆ.

**ನಿರೀಕ್ಷಿಸುವುದು**

ಸಂಭವಿಸಿರದ ಘಟನೆಗಳು, ಸಂಭವಿಸಲಾರದ ಕೆಲವು ಘಟನೆಗಳು ಮಾತಿಗೆ ವಿಷಯವಾಗುತ್ತವೆ. ಮಕ್ಕಳು ಸಾಧಾರಣವಾಗಿ ತಮ್ಮ ಭಯವನ್ನು, ಯೋಜನೆಗಳನ್ನು, ನಿರೀಕ್ಷೆಗಳನ್ನು, ಮತ್ತು ವಿಚಿತ್ರ ಸನ್ನಿವೇಶಗಳಲ್ಲಿ ಏನಾಗಬಹುದು ಎಂಬುದನ್ನು ವ್ಯಕ್ತಪಡಿಸುತ್ತವೆ. ಪದಗಳು ಭವಿಷ್ಯದ ಒಂದು ಕಲ್ಪನೆಯನ್ನು ಸೃಷ್ಟಿಸಿಕೊಳ್ಳಲು ಅವರಿಗೆ ನೆರವಾಗುತ್ತವೆ. ಕೆಲವು ಸಲ ಅಂತಹ ಕಲ್ಪನೆ ಭವಿಷ್ಯದಲ್ಲಿ ಸಾಕಾರಗೊಳ್ಳಲು ಸಹ ನೆರವಾಗಬಲ್ಲವು; ಮತ್ತೆ ಕೆಲವು ಸಲ ಭವಿಷ್ಯ ಹೇಗೆ ಬಂದೆರಗುತ್ತದೋ ಅದೇ ರೀತಿಯಲ್ಲಿ ಅದನ್ನು ಸ್ವೀಕರಿಸಲು ನೆರವಾಗುತ್ತದೆ.

**ವಿಚಾರ ಮಾಡುವುದು ಹಾಗೂ ತರ್ಕಿಸುವುದು**

ಯಾವುದೇ ಒಂದು ಸನ್ನಿವೇಶ ಮಗುವಿನ ಮುಂದೆ ಒಂದು 'ಸಮಸ್ಯೆ'ಯನ್ನು ಮುಂದೊಡ್ಡಿ ಅದು 'ಏಕೆ' ಹಾಗೆ ಎಂಬುದನ್ನು ಕಂಡುಕೊಳ್ಳುವ ಮೂಲಕ ಅದನ್ನು ಪರಿಹರಿಸಿಕೊಳ್ಳುವಂತೆ ಮಾಡುತ್ತದೆ. ಬಹುತೇಕ ಸಮಸ್ಯೆಗಳು ಪುಟ್ಟ ಮಗುವು ಯಶಸ್ವಿಯಾಗಿ ಪರಿಹರಿಸಿಕೊಳ್ಳಬಲ್ಲ ತರಹದ್ದಾಗಿರುತ್ತವೆ. ಉದಾಹರಣೆಗೆ, ಬಸ್ಸು ಇದ್ದಕ್ಕಿದ್ದಂತೆ ಏಕೆ ನಿಂತುಬಿಟ್ಟಿತು,

ಅಥವಾ ಸ್ನಾನ ಮಾಡುವಾಗ ತನ್ನ ತಲೆಯ ಮೇಲೆ ನೀರು ಸುರಿಯುವುದನ್ನು ಏಕೆ ಇಷ್ಟ ಪಡುವುದಿಲ್ಲ ಮುಂತಾದವು. ಮೂರು ವರ್ಷದ ಒಂದು ಪುಟ್ಟ ಮಗು ಈ 'ಸಮಸ್ಯೆ'ಗಳನ್ನು ಅರ್ಥ ಮಾಡಿಕೊಳ್ಳಬಲ್ಲುದಾದರೂ ಎಲ್ಲ ಮಕ್ಕಳೂ ಅದರ ಹಿಂದಿನ ಕಾರಣವನ್ನು ಮಾತಿನಲ್ಲಿ ಯಥಾವತ್ತಾಗಿ ವಿವರಿಸಲಾರರು. ಒಂದು ವಿಷಯದ ಬಗೆಗೆ ದೊಡ್ಡವರು ವಿಚಾರ ಮಾಡುವಾಗ ಅಥವಾ ವಾದಿಸುವಾಗ ಬಳಸುವ ಭಾಷೆಯನ್ನು ಕೇಳಿದ ಕೆಲವು ಮಕ್ಕಳು ಅಥವಾ ತಾವೇ ಸ್ವತಃ ಹಾಗೆ ಮಾಡುವಂತೆ ಪ್ರೋತ್ಸಾಹ ಪಡೆದ ಮಕ್ಕಳು ಅದನ್ನು ವಿವರಿಸಬಲ್ಲವು.

ಮೇಲೆ ತಿಳಿಸಲಾದ 'ಸಮಸ್ಯೆ'ಗಳಿಗಿಂತ ಭಿನ್ನವಾದ ಇತರ ಕೆಲವು ಸಂಗತಿಗಳನ್ನು ಸಣ್ಣ ಮಕ್ಕಳು 'ವೈಜ್ಞಾನಿಕ' ದೃಷ್ಟಿಯಿಂದ ಗ್ರಹಿಸಲಾರವು. ಉದಾಹರಣೆಗೆ, 'ಮಳೆ ಏಕೆ ಬೀಳುತ್ತದೆ' ಅಥವಾ ' ಜೋರಾಗಿ ಗಾಳಿ ಬೀಸಿದಾಗ ಮರ ಏಕೆ ಬೀಳುತ್ತದೆ' ಮುಂತಾದವುಗಳ ನಿಜವಾದ ಕಾರಣ ನಾಲ್ಕು ಅಥವಾ ಐದು ವರ್ಷದ ಮಗುವಿನ ಬುದ್ಧಿಗೆ ನಿಲುಕದ ಸಂಗತಿಗಳಾಗಿವೆ. ಆದಾಗ್ಯೂ ಇಂತಹ ಸಮಸ್ಯೆಗಳು ಕೂಡ ಭಾಷೆಯನ್ನು ತರ್ಕದ ಒಂದು ಮಾಧ್ಯಮವನ್ನಾಗಿ ಬಳಸಲು ಅದ್ಭುತವಾದ ಅವಕಾಶಗಳಾಗಿ ಒದಗಿ ಬರುತ್ತವೆ. ಈ ತರ್ಕವು ಕರಾರುವಕ್ಕಾಗಿದೆಯೋ ಇಲ್ಲವೋ ಎಂಬುದು ಮುಖ್ಯವಲ್ಲ. ಮಗುವು ತನಗೆ ತಿಳಿಯದುದರ ಬಗೆಗೆ ವಿಚಾರ ಮಾಡಲು ಮತ್ತು ತರ್ಕ ಮಾಡಲು ಭಾಷೆಯನ್ನು ಬಳಸುತ್ತದೆ ಎಂಬುದಷ್ಟೇ ಇಲ್ಲಿ ಮುಖ್ಯ. ಮಗು ಈ ಕಾರ್ಯಚಟುವಟಿಕೆಗಾಗಿ ದೊಡ್ಡವರ ಭಾಷಾ ಬಳಕೆಯನ್ನು ಹೆಚ್ಚು ಹೆಚ್ಚು ಕೇಳಿದಷ್ಟೂ ಭಾಷೆಯ ಈ ಕಾರ್ಯವು ಮಗುವಿಗೆ ಹೆಚ್ಚು ಹೆಚ್ಚು ಒಗ್ಗಿಕೊಳ್ಳುತ್ತ ಹೋಗುತ್ತದೆ.

ನಾವು ಚರ್ಚಿಸಿದಂತೆ ಮಗುವಿನ ಬದುಕಿನಲ್ಲಿ ಭಾಷೆಯ ಎಂಟು ವಿವಿಧ ಕಾರ್ಯಗಳನ್ನು ನೀವು ಗುರುತಿಸಬಲ್ಲಿರಾ ಎಂದು ತಿಳಿಯಲು ಇದೊಂದು ಕಿರು ಅಭ್ಯಾಸವಾಗಿದೆ. ಇಲ್ಲಿ ಮಕ್ಕಳ ಮಾತಿನ ಎಂಟು ಉದಾಹರಣೆಗಳಿವೆ. ಇವುಗಳನ್ನು ಭಾಷೆಯ ಎಂಟು ಬಗೆಯ ಕಾರ್ಯಗಳಿಗೆ ಹೊಂದಿಸಿರಿ.

1. "ಮೋಡಗಳು ಹೊರಟು ಹೋದವು, ಮಳೆ ನಿಂತಿತು"
2. "ನಾನು ಜಕ್ಕೂರಿಗೆ ಹೋಗಿ ಬಕ್ಕೂರನನ್ನು ಭೇಟಿ ಮಾಡುತ್ತೇನೆ"
3. "ಅದನ್ನು ಹಾಗೆ ಮಾಡಬೇಡ. ನೋಡು, ಇಲ್ಲಿ ತಿರುಪು ಇದೆ"
4. "ಪ್ರತಿದಿನ ಬೆಳಗ್ಗೆ ನೀರು ಹೇಗೆ ಎಲ್ಲರ ಮನೆಗಳಿಗೂ ತಲುಪುತ್ತದೆ?"
5. "ನಾನು ಈ ಲೋಟವನ್ನು ಸುಮ್ಮನೆ ಇಲ್ಲಿಡುತ್ತೇನೆ ಮತ್ತು ರಾಮುವನ್ನು ಕರೆಯುತ್ತೇನೆ"
6. "ಈ ಸಿಹಿ ತಿಂಡಿಗಳು ಅವತ್ತು ಚಿಕ್ಕಪ್ಪ ತಂದಿದ್ದ ಸಿಹಿ ತಿಂಡಿಯಂತೆಯೇ ಇವೆ"
7. "ದೀಪಾವಳಿಗೆ ನನಗೆ ಹೊಸ ಅಂಗಿ ಸಿಗುತ್ತದೆ"
8. "ಅದೊಂದು ಸಂತೆಯಂತಿತ್ತು. ಎಷ್ಟೊಂದು ಬಾತುಕೋಳಿಗಳಿದ್ದವು, ಅವು ಎಷ್ಟು ಗಲಾಟೆ ಮಾಡುತ್ತಿದ್ದವು"

**ಸುಳಿವು:** 1. ವಿವರಿಸುವುದು 2. ಆಟ 3. ಮತ್ತೊಬ್ಬರ ಗಮನವನ್ನು ಸೆಳೆಯುವುದು 4. ವಿಚಾರಣೆ 5. ತನ್ನ ಚಟುವಟಿಕೆಯನ್ನು ತಾನೇ ನಿರ್ದೇಶಿಸಿಕೊಳ್ಳುವುದು 6. ಹೋಲಿಸುವುದು 7. ನಿರೀಕ್ಷಿಸುವುದು; 8. ಬದುಕನ್ನು ನಿರೂಪಿಸುವುದು.

**ನಾವು ನುಡಿವ ಮಾತು ನಮ್ಮನ್ನು ಪ್ರಭಾವಿಸುತ್ತದೆ**

ಮಕ್ಕಳ ಬದುಕಿನಲ್ಲಿ ಭಾಷೆಯ ವಿವಿಧ ಕಾರ್ಯಗಳಿಗೆ ಸಂಬಂಧಿಸಿದ ಈ ಚರ್ಚೆಯಲ್ಲಿ ನಾವು ಕಲಿತ ಒಂದು ಸಂಗತಿ ಏನೆಂದರೆ ಭಾಷೆ ಅತ್ಯಂತ ನಮ್ಯವಾದ, ಬೇಕಾದಂತೆ ಒಗ್ಗಿಕೊಳ್ಳಬಲ್ಲ ಮಾಧ್ಯಮವಾಗಿದೆ ಎಂಬುದು. ಬದುಕಿನ ಯಾವುದೇ ಸನ್ನಿವೇಶಕ್ಕೆ ಬೇಕಾದರೂ ಅದನ್ನು ಹೊಂದಿಸಿಕೊಳ್ಳಬಹುದು ಸಂದರ್ಭದ ಅಗತ್ಯಕ್ಕೆ ಅನುಗುಣವಾಗಿ ಅದನ್ನು ಹೊಂದಿಸುವ ಮೂಲಕ ನಾವು ಸ್ವತಃ ಸಂದರ್ಭಕ್ಕೆ ತಕ್ಕಂತೆ ಹೊಂದಾಣಿಕೆಯಾಗುವ ಗುಣವನ್ನು ಬೆಳೆಸಿಕೊಳ್ಳುತ್ತೇವೆ. ದೈನಂದಿನ ಬದುಕು ಈ ಪ್ರಕ್ರಿಯೆಗೆ ಅಸಂಖ್ಯ ಉದಾಹರಣೆಗಳನ್ನು ಒದಗಿಸುತ್ತದೆ. ಯಾರಾದರೂ ನಮ್ಮ ಮೇಲೆ ಕೋಪಗೊಂಡಿದ್ದಾರೆ ಎಂಬುದು ನಮಗೆ ಗೊತ್ತಾದಾಗ ನಮ್ಮ ಬಯಕೆ ಅಥವಾ ಉದ್ದೇಶಕ್ಕೆ ಅನುಗುಣವಾಗಿ ಸನ್ನಿವೇಶವನ್ನು ರೂಪಿಸಿಕೊಳ್ಳಲು ಅನುಕೂಲವಾಗಬಲ್ಲ ಪದಗಳನ್ನು ಹಾಗೂ ಧ್ವನಿಯನ್ನು (ಎಷ್ಟೋ ಸಲ ಅಪ್ರಜ್ಞಾಪೂರ್ವಕವಾಗಿ) ಆಯ್ಕೆ ಮಾಡಿಕೊಳ್ಳುವ ಮೂಲಕ ನಾವು ಅವರ ಕೋಪಕ್ಕೆ ಸ್ಪಂದಿಸುತ್ತೇವೆ. ಉದಾಹರಣೆಗೆ, ಅವರೊಂದಿಗೆ ಘರ್ಷಣೆಗೆ ಇಳಿಯಬೇಕೆಂದು ಬಯಸಿದಾಗ ಕಠೋರವಾದ ಪದಗಳನ್ನು ಬಳಸುತ್ತೇವೆ ಅಥವಾ ಸಂದರ್ಭವನ್ನು ತಿಳಿಗೊಳಿಸುವ ಬಯಕೆ ಇದ್ದಾಗ ಸೌಮ್ಯವಾದ ಪದಗಳನ್ನು ಹಾಗೂ ಧ್ವನಿಯನ್ನು ಬಳಸುತ್ತೇವೆ.

ಭಾಷೆಯನ್ನು ನಮ್ಯವಾಗಿ, ಅನುಕೂಲಕರವಾಗಿ ಬಳಸುವ ನಮ್ಮ ಸಾಮರ್ಥ್ಯವು ಬದುಕಿನಲ್ಲಿ ಎದುರಾಗುವ ವೈವಿಧ್ಯಮಯವಾದ ಮಹತ್ವದ ಸನ್ನಿವೇಶಗಳಿಗೆ ಮುಖಾಮುಖಿಯಾಗುವ ಅವಕಾಶವನ್ನು ಬಹುಮಟ್ಟಿಗೆ ನಿರ್ಧರಿಸುತ್ತದೆ ಎಂದು ಹೇಳಬಹುದು. ಒಂದು ಹಂತದಲ್ಲಿ ನಮ್ಮ ಭಾಷೆ ಒಂದು ಸನ್ನಿವೇಶಕ್ಕೆ ನಾವು ನೀಡುವ ಪ್ರತಿಕ್ರಿಯೆಯನ್ನು ತೋರಿಸುತ್ತದೆ ಅಥವಾ ವ್ಯಕ್ತಪಡಿಸುತ್ತದೆ. ಭಾಷೆ ನಮ್ಮ ಸುತ್ತ ಯಾವಾಗಲೂ ಸಂಭವಿಸುತ್ತಿರುವ ಸಂಗತಿಗಳೊಂದಿಗೆ ಹೊಂದಿಕೊಳ್ಳಲು ನೆರವಾಗುತ್ತದೆ. ಈ ರೀತಿಯಲ್ಲಿ ಅದು ನಮಗೆ ಆ ಘಟನಾವಳಿಗಳಲ್ಲಿ ನಾವು ದೈಹಿಕವಾಗಿ ಪಾಲ್ಗೊಳ್ಳಲಿ ಅಥವಾ ಸುಮ್ಮನೆ ಅದರ ಕುರಿತು ಯೋಚಿಸುತ್ತಿರಲಿ, ಸಹಾಯಕ್ಕೆ ಬರುತ್ತದೆ.

ಒಂದು ಘಟನೆಯನ್ನು ನಾವು ಖುದ್ದಾಗಿ ನೋಡಿರಬಹುದು ಅಥವಾ ನೋಡಿಲ್ಲದಿರಬಹುದು, ಅದನ್ನು ಮರು ನಿರೂಪಿಸುವ ಭಾಷೆಯು ಅದಕ್ಕೆ ನಾವು ನೀಡುವ ಪ್ರತಿಕ್ರಿಯೆಯ ಮೇಲೆ ಪರಿಣಾಮ ಬೀರುತ್ತದೆ. ನಮ್ಮಿಂದ ಬಹುದೂರವಿರುವ ಸ್ಥಳಗಳಲ್ಲಿ ಪ್ರತಿನಿತ್ಯ ಸಾವಿರಾರು ಘಟನೆಗಳು ನಡೆಯುತ್ತವೆ. ಆ ಘಟನೆಗಳು ಸುದ್ದಿಪತ್ರಿಕೆಯಲ್ಲಿ ನಿರೂಪಣೆಗಳಾಗಿ ನಮ್ಮನ್ನು ತಲುಪುತ್ತವೆ. ಈ ಅರ್ಥದಲ್ಲಿ ಸುದ್ದಿಪತ್ರಿಕೆಗಳು ನಮಗೆ ಒಂದು ಘಟನೆಯ ಚಿತ್ರವನ್ನು ಸೃಷ್ಟಿಸಿಕೊಳ್ಳಲು ಅನುವು ಮಾಡಿಕೊಡುತ್ತವೆ. ಒಂದು ಮಗು ರಸ್ತೆಯಲ್ಲಿ ಕಂಡ ಯಾವುದೋ ಘಟನೆಯನ್ನು ತನ್ನ ತಾಯಿಗೆ ಹೇಳುವುದೂ ಇದೇ ಆಗಿದೆ. ಘಟನೆಯನ್ನು ನಿರೂಪಿಸಲು ಬಳಸುವ ಭಾಷೆ ಎಷ್ಟು ಖಚಿತವಾಗಿರುತ್ತದೆಯೋ, ಸುದ್ದಿಪತ್ರಿಕೆಯಿಂದ ಅಥವಾ

ಮಗುವಿನಿಂದ ಸೃಷ್ಟಿಯಾದ ಚಿತ್ರವೂ ಅಷ್ಟೇ ಖಚಿತವಾಗಿರುತ್ತದೆ. ಖಚಿತತೆ ಎಂದಿಗೂ ಸಾಪೇಕ್ಷವಾದ ಸಂಗತಿಯಾಗಿದೆ. ಏಕೆಂದರೆ ಯಾವುದೇ ಭಾಷಾ ಬಳಕೆಯು ನಿರೂಪಕರ ಉದ್ದೇಶವನ್ನು ವ್ಯಕ್ತಪಡಿಸುತ್ತದೆ. ಅಪಘಾತವನ್ನು ಕಂಡು ಹೆದರಿದ ಒಂದು ಮಗು ಅದನ್ನು ಒಂದು ಬಗೆಯ ಉತ್ಪ್ರೇಕ್ಷೆ ಎನ್ನಬಹುದಾದ ರೀತಿಯಲ್ಲಿ ನಿರೂಪಿಸುತ್ತದೆ. ಹಾಗೆ ಉತ್ಪ್ರೇಕ್ಷಿಸುವ ಮೂಲಕ ಅದು ತನ್ನ ಭಯವನ್ನು ಸಮರ್ಥಿಸಿಕೊಳ್ಳುತ್ತದೆ, ತತ್ಪರಿಣಾಮವಾಗಿ ತಾನು ಕಂಡ ದೃಶ್ಯದೊಂದಿಗೆ ಹೊಂದಾಣಿಕೆ ಮಾಡಿಕೊಂಡ ನೆಮ್ಮದಿಯ ಭಾವವನ್ನು ಅನುಭವಿಸುತ್ತದೆ.

ಕೊನೆಯದಾಗಿ, ಭಾಷೆ ನಮ್ಮ ನಿರೀಕ್ಷೆಗಳಿಗೆ ರೂಪ ನೀಡುತ್ತದೆ. ಒಂದು ಸಂಗತಿಯನ್ನು ತಾಳ್ಮೆಯಿಂದ, ವ್ಯವಸ್ಥಿತವಾಗಿ ವಿವರಿಸುವುದನ್ನು ಇಷ್ಟಪಡುವವರು ಇತರರೂ ಹಾಗೆಯೇ ವಿವರಿಸಬೇಕೆಂದು ನಿರೀಕ್ಷಿಸುವರು. ಅದೇ ರೀತಿ, ಒಂದು ಸಂಗತಿಯನ್ನು ಕುರಿತು ಆಳವಾಗಿ ಪರಿಶೀಲನೆ ಮಾಡುವವರು ಆ ತರಹದ ಪರಿಶೀಲನೆಯಲ್ಲಿ ಇತರರೂ ಸಹ ಆಸಕ್ತರಾಗಿರುತ್ತಾರೆ ಎಂದು ತಮಗರಿವಿಲ್ಲದೆಯೇ ನಿರೀಕ್ಷಿಸುವರು. ವಿವರಿಸಲು ಅಥವಾ ಪರಿಶೀಲಿಸಲು ಭಾಷೆಯನ್ನು ಬಳಸುವ ಮೂಲಕ ಅಂತವರು ವಿವರಣೆ ಹಾಗೂ ಪರಿಶೀಲನೆಗಳ ಪ್ರಾಮುಖ್ಯತೆಯನ್ನು ಅರ್ಥ ಮಾಡಿಕೊಳ್ಳುವಂತಹ ವಾತಾವರಣವನ್ನು ನಿರ್ಮಿಸುವರು. ಹಾಗಲ್ಲದೆ, ಇಂತಹ ಉದ್ದೇಶಗಳಿಗೆ ಭಾಷೆಯನ್ನು ಬಳಸದ ಸಮುದಾಯದಲ್ಲಿ ಅಥವಾ ಸಂಸ್ಥೆಯಲ್ಲಿ ಬೆಳೆಯುವ ಮಕ್ಕಳು ಜಾಗರೂಕತೆಯಿಂದ ಕೂಡಿದ ನಿರೂಪಣೆಯನ್ನು ಅಥವಾ ತಾಳ್ಮೆಯಿಂದ ಕೂಡಿದ ಸಂವಾದವನ್ನು ರೂಢಿಸಿಕೊಳ್ಳಲಾರರು. ಪೋಷಕರು ಹಾಗೂ ಶಿಕ್ಷಕರು, ಭಾಷೆಯನ್ನು ಮುಖ್ಯವಾಗಿ ಮಕ್ಕಳನ್ನು ನಿಯಂತ್ರಣದಲ್ಲಿಡಲು ಬಳಸಿದಲ್ಲಿ ಮಕ್ಕಳೂ ಸಹ ಅನ್ಯರನ್ನು ನಿಯಂತ್ರಣದಲ್ಲಿಡುವ ಒಂದು ಸಾಧನವನ್ನಾಗಿ ಭಾಷೆಯನ್ನು ನೋಡುತ್ತಾರೆ. ಅಂತಹ ಮಕ್ಕಳು ಬೆಳೆದು ದೊಡ್ಡವರಾದ ಮೇಲೆ ಆದೇಶವನ್ನು ಪಡೆಯದ ಹೊರತು ಯಾವುದೇ ಕೆಲಸವನ್ನು ಮಾಡದಿರುವ ಸ್ವಭಾವವನ್ನು ರೂಢಿಸಿಕೊಳ್ಳಬಹುದು.

ಭಾಷೆ ಮಗುವಿನ ಗ್ರಹಿಕೆ, ಸಾಮರ್ಥ್ಯ, ಧೋರಣೆ, ಆಸಕ್ತಿಗಳು, ಮೌಲ್ಯಗಳನ್ನೂ ಒಳಗೊಂಡಂತೆ ಮಗುವಿನ ವ್ಯಕ್ತಿತ್ವವನ್ನು ಹೇಗೆ ರೂಪಿಸುತ್ತದೆ ಎಂಬ ಪಶ್ನೆಯೊಂದಿಗೆ ನಾವು ಈ ಅಧ್ಯಾಯವನ್ನು ಪ್ರಾರಂಭಿಸಿದೆವು. ಈಗ ನಾವು ಈ ಪ್ರಶ್ನೆಗೆ, ಒಂದು ಮಗುವು ಭಾಷೆ ನಿರ್ಮಿಸುವ ಒಂದು ವಾತಾವರಣದಲ್ಲಿ ಬದುಕುತ್ತದೆ ಹಾಗೂ ಬೆಳೆಯುತ್ತದೆಯಾದ್ದರಿಂದ ಭಾಷೆಯು ಮಗುವಿನ ವ್ಯಕ್ತಿತ್ವವನ್ನು ರೂಪಿಸುತ್ತದೆ ಎಂಬ ಉತ್ತರ ನೀಡಬಹುದು. ಇಂತಹುದೊಂದು ವಾತಾವರಣಕ್ಕೆ ಶಿಕ್ಷಕರಾದವರು ಬಹಳ ಪ್ರಮುಖವಾದ ಕೊಡುಗೆ ನೀಡುತ್ತಾರೆ. ಒಂದು ಮಗುವಿನ ಬದುಕಿನಲ್ಲಿ ಭಾಷೆ ನಿರ್ವಹಿಸುವ ವಿವಿಧ ಕಾರ್ಯಚಟುವಟಿಕೆಗಳಿಗೆ ಸಂವೇದನಾಶೀಲರಾಗಿರುವ ಶಿಕ್ಷಕರು ಮಗುವಿನ ಬೌದ್ಧಿಕ ಹಾಗೂ ಭಾವನಾತ್ಮಕ ಅಗತ್ಯಗಳಿಗೆ ಸ್ಪಂದಿಸಬಲ್ಲರು. ವಿವಿಧ ಸಂದರ್ಭಗಳಲ್ಲಿ ಮಗುವಿನ ಭಾಷಾ ಬಳಕೆಗೆ ಶಿಕ್ಷಕರು ನೀಡುವ ಪ್ರತಿಕ್ರಿಯೆಗಳು ಬಹಳ ಮುಖ್ಯವಾದುದು. ಭಾಷೆಯನ್ನು ಒಂದು ನಿರ್ದಿಷ್ಟ ಮಾರ್ಗದಲ್ಲಿ ಬಳಸುವ ಮಗುವಿನ ಉದ್ದೇಶ ಏನೆಂಬುದು ಶಿಕ್ಷಕರಿಗೆ ಅರ್ಥವಾಗಿದೆ ಎಂಬುದನ್ನು ಅವರ ಪ್ರತಿಕ್ರಿಯೆ ವ್ಯಕ್ತಪಡಿಸಿದರೆ ಆ ಪ್ರತಿಕ್ರಿಯೆಯು ಮಗುವಿಗೆ ಆ ಮಾರ್ಗದಲ್ಲಿ ಭಾಷೆಯನ್ನು ಬಳಸುವುದಕ್ಕೆ ಪ್ರೇರೇಪಿಸುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಶಿಕ್ಷಕರ ಪ್ರತಿಕ್ರಿಯೆಯು ಯಾವುದು ಸೂಕ್ತ ಅಥವಾ ಸರಿ ಎಂಬ

ಪೂರ್ವಸಿದ್ಧ ಕಲ್ಪನೆಯನ್ನು ಆಧರಿಸಿದ್ದಲ್ಲಿ. ಅಂತಹ ಪ್ರತಿಕ್ರಿಯೆಯು ಮಗುವಿನ ಸ್ವತಂತ್ರವಾದ ಅಭಿವ್ಯಕ್ತಿ ಹಾಗೂ ಸಂವಹನಗಳಿಗೆ ಅಡಚಣೆ ಉಂಟು ಮಾಡುತ್ತದೆ.

---

**ಅಧ್ಯಾಯ 2**

**ಮಾತು**

ನಮ್ಮ ಶಾಲೆಗಳಲ್ಲಿ ಸಾಮಾನ್ಯವಾಗಿ ಮಾತನಾಡುವುದನ್ನು ಕೆಟ್ಟದು ಎಂದೇ ಭಾವಿಸಲಾಗುತ್ತದೆ. ಯಾರಾದರೂ ಮಾತನಾಡುತ್ತಿದ್ದರೆ ಹೆಚ್ಚಿನ ಕಲಿಕೆಯ ಅಗತ್ಯಕ್ಕೆ ಅವರು ಗಮನ ಕೊಡಲಾರರು ಎಂದೇ ಭಾವಿಸಲಾಗಿದೆ. ಹಾಗಾಗಿ ಮಕ್ಕಳು ಮಾತಿನಲ್ಲಿ ತೊಡಗಿರುವುದನ್ನು ಕಂಡ ಕೂಡಲೆ ಮಾತನ್ನು ನಿಲ್ಲಿಸಬೇಕು ಎನ್ನುವುದೇ ಶಿಕ್ಷಕರ ಮೊದಲ ಪ್ರತಿಕ್ರಿಯೆಯಾಗಿರುತ್ತದೆ. ವಿರಾಮದ ವೇಳೆಯಲ್ಲಿ ಇಲ್ಲವೇ ಶಿಕ್ಷಕರು ಮುಖ್ಯವಾದ ವಿಷಯವನ್ನು ಹೇಳುತ್ತಿಲ್ಲದ ಸಮಯದಲ್ಲಿ ಮಕ್ಕಳಿಗೆ ಮಾತನಾಡಲು ಅನುಮತಿ ಇರುತ್ತದೆ.

ಮಾತಿನ ಕುರಿತ ಈ ಧೋರಣೆಯು ಕಲಿಕೆಯ ಮೂಲವಾಗಿ ಮಾತಿನ ಅಗಾಧ ಬಳಕೆಯನ್ನು ನಾವು ನಿರ್ಲಕ್ಷಿಸುವಂತೆ ಮಾಡಿದೆ. ಕಲಿಕೆಯ ಎಲ್ಲಾ ಹಂತಗಳಲ್ಲೂ ಇದು ಸತ್ಯ. ಅದರಲ್ಲೂ ಪ್ರಾಥಮಿಕ ಹಂತದ ಕಲಿಕೆಯ ವಿಷಯದಲ್ಲಿ ಇದು ಸತ್ಯಸ್ಯ ಸತ್ಯವಾಗಿದೆ. ಪ್ರಾಥಮಿಕ ಅಥವಾ ಪೂರ್ವ ಪ್ರಾಥಮಿಕ ಶಾಲಾ ವಯಸ್ಸಿನ ಚಿಕ್ಕ ಮಕ್ಕಳಿಗೆ ಮಾತೆಂಬುದು ಕಲಿಕೆಗೆ ಮತ್ತು ತಾವು ಕಲಿತುದರ ಕ್ರೋಢೀಕರಣಕ್ಕೆ ಮೂಲ ಸಾಧನವಾಗಿದೆ. *ಪುಟ್ಟ ಮಕ್ಕಳಿಗೆ ಸ್ವತಂತ್ರವಾಗಿ ಮಾತನಾಡಲು ಅವಕಾಶವಿಲ್ಲದ ಶಾಲೆಯು ಒಂದು ನಿರುಪಯುಕ್ತ ಶಾಲೆಯಾಗಿದೆ.* ತಮ್ಮ ಮಕ್ಕಳಿಗೆ ಮಾತನಾಡಲು ಬಿಡದ ಶಿಕ್ಷಕರು ಪುಸ್ತಕಗಳನ್ನು ಖರೀದಿಸುವುದಕ್ಕೆ ಅಥವಾ ಇತರೆ ಸಂಪನ್ಮೂಲಗಳಿಗೆ ಅನುದಾನದ ಕೊರತೆ ಇದೆ ಎಂದು ಗೊಣಗುವುದರಲ್ಲಿ ಅರ್ಥವಿಲ್ಲ; ಅವರು ಈಗಾಗಲೇ ಖರ್ಚಿನ ಬಾಬತ್ತೇ ಇಲ್ಲದ ಅತ್ಯಂತ ಬೆಲೆ ಬಾಳುವ ಸಂಪನ್ಮೂಲವನ್ನು ವ್ಯರ್ಥ ಮಾಡುತ್ತಿದ್ದಾರೆ.

ನಿಜ, ಮಕ್ಕಳು ಹಲವು ಬಗೆಯ ಉದ್ದೇಶಗಳಿಂದ ಮಾತನಾಡುವರು, ಆ ಎಲ್ಲ ಉದ್ದೇಶಗಳು ಶಿಕ್ಷಕರಿಗೆ ಪ್ರಯೋಜನಕಾರಿ ಅಲ್ಲದಿರಬಹುದು. ಉದಾಹರಣೆಗೆ, ಸುಮ್ಮನೆ ಬೇಸರ ಕಳೆಯುವ ಸಲುವಾಗಿ ಮಾತನಾಡುವುದಕ್ಕೂ ನಾವು ಗುರುತಿಸಿದ ಯಾವುದೋ ಸಂಗತಿಯತ್ತ ಮತ್ತೊಬ್ಬರ ಗಮನ ಸೆಳೆಯುವ ಸಲುವಾಗಿ ಮಾತನಾಡುವುದಕ್ಕೂ ವ್ಯತ್ಯಾಸವಿದೆ. ಎರಡನೆಯ ಬಗೆಯ ಮಾತು ನಮ್ಮ ಕಲಿಕೆಯ ಕ್ರೋಢೀಕರಣದ ಸಾಧನವಾಗಿ ಬಹಳ ಪ್ರಮುಖವಾದ

ಕಾರ್ಯಚಟುವಟಿಕೆಯಾಗಿದೆ. ಈ ಕೆಳಗಿನ ಸಂಭಾಷಣೆಯಲ್ಲಿ ಇಬ್ಬರು ಮಕ್ಕಳು ಪಿಸುದನಿಯಲ್ಲಿ ಸಂಭಾಷಿಸುತ್ತ ಶಿಕ್ಷಕಿಯ ಡೆಸ್ಕ್ ಬಳಿ ಕಾಯುತ್ತಿದ್ದಾರೆ. ಶಿಕ್ಷಕಿ ತನ್ನ ರಿಜಿಸ್ಟರ್ ಭರ್ತಿ ಮಾಡುವ ಕೆಲಸದಲ್ಲಿ ಮುಳುಗಿದ್ದಾರೆ:

ಮಗು 1: 'ಅವರು  ಉಂಗುರ ಧರಿಸಿದ್ದಾರೆ'

ಮಗು 2: 'ಅದನ್ನು ನೀನು ಈ ಮೊದಲು ನೋಡಿರಲಿಲ್ಲವೇ?'

ಮಗು 1: 'ಇಲ್ಲ,.. ಹೌದು ಹೌದು, ಈ ಮೊದಲು ನೋಡಿದ್ದೆ'

ಮಗು 2: 'ಓ,  ಇದು ಬೇರೆ ಉಂಗುರ'

ಮಗು 1: 'ಅವರು ಹೊಸ ಉಂಗುರ ಹಾಕಿಕೊಂಡು ಬಂದಿದ್ದಾರೆ, ಇದು ಇನ್ನೂ ಚಿಕ್ಕದು'

ಮಗು 2: ' ಅಲ್ಲ, ಇದು ಇನ್ನೂ ತೆಳ್ಳಗಿದೆ'

ಮಕ್ಕಳ ನಡುವಿನ ಈ ಪುಟ್ಟ ಸಂಭಾಷಣೆಯನ್ನು ನೀವು ವಿಶ್ಲೇಷಿಸಿ ನೋಡಿದರೆ, ಅವರಿಬ್ಬರು ಮಾತನಾಡುತ್ತಿದ್ದ ಕಾರಣದಿಂದಾಗಿ ಅವರಿಗೆ ಕಲಿಕೆಯ ಒಂದು ಅವಕಾಶ ದೊರೆತಿರುವುದನ್ನು ನೀವು ಗಮನಿಸಬಹುದು. ಒಂದು ವೇಳೆ ಮಗು 1 ಶಿಕ್ಷಕರ ಬೆರಳಿನ ಉಂಗುರವನ್ನು ನೋಡದೇ ಹೋಗಿದ್ದರೆ ಅದು ಉಂಗುರದ ಬಗ್ಗೆ ಮಾತನಾಡುತ್ತಲೇ ಇರಲಿಲ್ಲ. ಇನ್ನು ಸಂಭಾಷಣೆ ನಡೆಯದೇ ಹೋಗಿದ್ದರೆ ಮಗು 2 ನೆಯದಕ್ಕೆ ಹಳೆಯ ಮತ್ತು ಹೊಸ ಉಂಗುರಗಳ ನಡುವಿನ ವ್ಯತ್ಯಾಸವನ್ನು ಗಮನಿಸುವ ಅವಕಾಶವೇ ಸಿಗುತ್ತಿರಲಿಲ್ಲ, ಚಿಕ್ಕದಕ್ಕೂ ತೆಳ್ಳಗಿರುವುದಕ್ಕೂ ನಡುವಿನ ಸೂಕ್ಷ್ಮ ವ್ಯತ್ಯಾಸವನ್ನು ಅರ್ಥ ಮಾಡಿಕೊಳ್ಳಲೂ ಆಗುತ್ತಿರಲಿಲ್ಲ.

ಮಾತಿನ ಈ ವಿವಿಧ ಕಾರ್ಯಗಳ ಅರಿವನ್ನು ಪಡೆದುಕೊಳ್ಳಬೇಕೆಂದರೆ ಮಕ್ಕಳ ಮಾತಿಗೆ  ಕಿವಿಗೊಡುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕಾಗುತ್ತದೆ. ಅದು ಮೇಲ್ನೋಟಕ್ಕೆ ಸರಳವಾಗಿ ತೋರಬಹುದು, ಆದರೆ ಅದು ಬಹಳ ಕಷ್ಟದ ಕೆಲಸವಾಗಿದೆ. ಏಕೆಂದರೆ ಮಕ್ಕಳಿಗೆ ಏನು ಮಾಡಬೇಕು ಎಂದು ಹೇಳುವುದು ತಮ್ಮ ಕರ್ತವ್ಯ ಮತ್ತು ತಾವು ಹೇಳಿದ ಮಾತನ್ನು ಕೇಳಬೇಕಾದುದು ಮಕ್ಕಳ ಕರ್ತವ್ಯ ಎಂದು ನಾವು ದೊಡ್ಡವರು ಭಾವಿಸುತ್ತೇವೆ.  ಈ ತರಹದ ನಂಬಿಕೆಗಳು ಮಕ್ಕಳ ಮಾತುಗಳಿಗೆ ಒಳ್ಳೆಯ ಕೇಳುಗರಾಗದಂತೆ ನಮ್ಮನ್ನು ತಡೆಯುತ್ತವೆ. ಇಲ್ಲಿ 'ಒಳ್ಳೆಯ ಕೇಳುಗ' ಎಂದರೆ, ಯಾವ ಉದ್ದೇಶಕ್ಕಾಗಿ ಮಾತು ಪ್ರಾರಂಭವಾಗಿದೆ ಎಂಬುದನ್ನು ಮತ್ತು ಆ ಮಾತುಕತೆಯಿಂದ ತೆರೆದುಕೊಳ್ಳುತ್ತಿರುವ ಕಲಿಕೆಯ ಸಾಧ್ಯತೆಗಳನ್ನು ತಾಳ್ಮೆಯಿಂದ ಗಮನಿಸಬಲ್ಲವರು  ಎಂದರ್ಥ.

ಯಾವುದೇ ಸಾಮಾನ್ಯ ಸನ್ನಿವೇಶದಲ್ಲಿ ಇಬ್ಬರು ಮಕ್ಕಳು ಮಾತುಕತೆ ನಡೆಸುವಾಗ ಆ ಮಾತುಕತೆಯು  ಈ ಕೆಳಗಿನ ಸಂಗತಿಗಳನ್ನು  ಕುರಿತಾಗಿರಬಹುದು:

1. ಇಷ್ಟು ದಿನ ಅವರು ನಿರ್ಲಕ್ಷಿಸಿದ್ದ ಸಂಗತಿಗಳ ಕಡೆಗೆ ಅವರು ಗಮನ ಹರಿಸುತ್ತಿರಬಹುದು

2. ಅದನ್ನು ಸಹಜವಾಗಿ ಅಥವಾ ಎಚ್ಚರಿಕೆಯಿಂದ ಗಮನಿಸುತ್ತಿರಬಹುದು
3. ತಾವು ಗಮನಿಸಿದ್ದನ್ನು ಹೇಳಿಕೊಳ್ಳುತ್ತಿರಬಹುದು ಅಥವಾ ಪರಸ್ಪರ ಹಂಚಿಕೊಳ್ಳುತ್ತಿರಬಹುದು
4. ತಾವು ಗಮನಿಸಿದ್ದನ್ನು ಒಂದು ನಿರ್ದಿಷ್ಟ ವಿಧಾನದಲ್ಲಿ ಜೋಡಿಸಿಕೊಳ್ಳುತ್ತಿರಬಹುದು
5. ಪರಸ್ಪರರ ಗಮನಿಸುವಿಕೆಗಳಿಗೆ ಸವಾಲೆಸೆಯುತ್ತಿರಬಹುದು
6. ಗಮನಿಸಿದ್ದರ ಆಧಾರದ ಮೇಲೆ ವಾಗ್ವಾದ ನಡೆಸುತ್ತಿರಬಹುದು
7. ಒಂದು ಮುನ್ಸೂಚನೆ ನೀಡುತ್ತಿರಬಹುದು
8. ಹಿಂದಿನ ಅನುಭವ ನೆನಪಿಸಿಕೊಳ್ಳುತ್ತಿರಬಹುದು
9. ಮತ್ತೊಬ್ಬರ ಭಾವನೆಗಳನ್ನು ಅಥವಾ ಅನುಭವಗಳನ್ನು ಕಲ್ಪಿಸಿಕೊಳ್ಳುತ್ತಿರಬಹುದು
10. ಒಂದು ಕಾಲ್ಪನಿಕ ಸನ್ನಿವೇಶದಲ್ಲಿ ತಮ್ಮದೇ ಭಾವನೆಗಳನ್ನು ಕಲ್ಪಿಸಿಕೊಳ್ಳುತ್ತಿರಬಹುದು

ಮಕ್ಕಳ ಮಾತುಗಳನ್ನು ಎಚ್ಚರಿಕೆಯಿಂದ ಕೇಳುವ ಅಭ್ಯಾಸ ಬೆಳೆಸಿಕೊಂಡಲ್ಲಿ, ನಿಮಗೆ ಇವನ್ನು ಮತ್ತು ಇಂತಹ ಹಲವು ಕಾರ್ಯಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಈ ಕಾರ್ಯಗಳು ವಿಶ್ಲೇಷಣೆ ಹಾಗೂ ಆಲೋಚನಾ ಕೌಶಲದಂತಹ ಬೌದ್ಧಿಕ ಕೌಶಲಗಳ ಬಳಕೆ ಹಾಗೂ ಅದನ್ನು ಅಭಿವೃದ್ಧಿಪಡಿಸಿಕೊಳ್ಳುವುದನ್ನು ಒಳಗೊಂಡಿರುತ್ತವೆ ಎಂಬುದನ್ನು ಸಹ ನೀವು ಕಾಣುವಿರಿ. ಈ ಅಧ್ಯಾಯದಲ್ಲಿ ನೀಡಿರುವ ಚಟುವಟಿಕೆಗಳು ಮಾತಿನ ಮೂಲಕ ಇಂತಹ ಕೌಶಲಗಳನ್ನು ಅಭಿವೃದ್ಧಿ ಪಡಿಸಲು ತಕ್ಕ ಸನ್ನಿವೇಶಗಳನ್ನು ಸೃಷ್ಟಿಸಿಕೊಳ್ಳಲು ನಿಮಗೆ ನೆರವಾಗುತ್ತವೆ.

ಮಕ್ಕಳ ಮಾತುಕತೆಯನ್ನೇ ತರಗತಿಯ ಸಂಪನ್ಮೂಲವನ್ನಾಗಿ ಬಳಸಲು ಬಯಸುವ ಶಿಕ್ಷಕರು ಮಾತುಕತೆಗೆ ಸೂಕ್ತವಾದ, ಸಕಾರಾತ್ಮಕವಾದ ಒಂದು ವಾತಾವರಣವನ್ನು ನಿರ್ಮಿಸಬೇಕಾಗುತ್ತದೆ. ತಮ್ಮ ನಡವಳಿಕೆಯಿಂದ ಮತ್ತು ಮಕ್ಕಳ ಮಾತಿಗೆ ಸ್ಪಂದಿಸುವುದರಿಂದ ಮಕ್ಕಳು ಮಾತನಾಡಲು ಸ್ವತಂತ್ರರು ಎಂಬುದನ್ನು ಶಿಕ್ಷಕರು ಮಕ್ಕಳಿಗೆ ಮನವರಿಕೆ ಮಾಡಿಕೊಡಬೇಕು. ಇದರರ್ಥ ತರಗತಿಯಲ್ಲಿ ಗಲಾಟೆಗೆ ಆಸ್ಪದ ನೀಡಬೇಕೆಂದಲ್ಲ. ಬದಲಾಗಿ ನಾವು ಏನೇ ಮಾತನಾಡಿದರೂ ಆ ಮಾತುಗಳಿಗೆ ಕಿವಿಗೊಡಲಾಗುತ್ತದೆ ಮತ್ತು ನಾವು ಮಾತನಾಡಬೇಕೆಂದು ಶಿಕ್ಷಕರು ಬಯಸುತ್ತಾರೆ ಎಂಬ ಭಾವನೆ ಪ್ರತಿಯೊಂದು ಮಗುವಿನಲ್ಲೂ ಮೂಡುವಂತೆ ಮಾಡಬೇಕು.

ತರಗತಿಯಲ್ಲಿ ಮಕ್ಕಳಿಗೆ ಮಾತನಾಡಲು ಉತ್ತೇಜಿಸುವಂತೆ ಶಿಕ್ಷಕರು ಸೃಷ್ಟಿಸಬಹುದಾದ ಐದು ಬಗೆಯ ಅವಕಾಶಗಳನ್ನು ಗುರುತಿಸಬಹುದು:

**ಅವರ ಬಗ್ಗೆ ಅವರೇ ಮಾತನಾಡಲು ಅವಕಾಶಗಳು**

ಅವಕಾಶ ಮತ್ತು ಸ್ವಾತಂತ್ರ್ಯ ದೊರೆತರೆ ಎಲ್ಲ ಮಕ್ಕಳೂ ತಮ್ಮ ಬದುಕಿನ ಬಗೆಗೆ, ಬದುಕಿನಲ್ಲಿ ಏನೆಲ್ಲ ನಡೆದವು ಮತ್ತು ಏನೆಲ್ಲ ನಡೆಯಬೇಕೆಂಬ ನಿರೀಕ್ಷೆ ಇದೆ ಎಂಬ ಬಗೆಗೆ ಮಾತನಾಡಲು ಬಯಸುತ್ತಾರೆ. ಶಾಲೆಯಲ್ಲಿನ ಕಲಿಕೆಗೆ ಮಕ್ಕಳ ವೈಯಕ್ತಿಕ ಬದುಕು ಅಪ್ರಸ್ತುತ ಎಂಬಂತೆ ಕೆಲವು ಶಿಕ್ಷಕರು ನಡೆದುಕೊಳ್ಳುತ್ತಾರೆ. ಅಂತಹ ಶಿಕ್ಷಕರು ತರಗತಿಯಲ್ಲಿ

ವೈಯಕ್ತಿಕವಲ್ಲದ ಸಂಗತಿಗಳನ್ನು, ಅಂದರೆ ಪಠ್ಯಪುಸ್ತಕದಲ್ಲಿ ನೀಡಲಾಗಿರುವ ವಿಷಯಗಳನ್ನು ಮಾತ್ರ ಚರ್ಚಿಸತಕ್ಕದ್ದು ಎಂದು ಮಕ್ಕಳಿಗೆ ಆಗ್ರಹಿಸುತ್ತಾರೆ. ಇಂತಹ ಒತ್ತಾಯದಿಂದಾಗಿ ಅದೆಷ್ಟೋ ಮಕ್ಕಳಿಗೆ ತರಗತಿಯೊಳಗೆ ಯಾವುದೇ ರೀತಿಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದೇ ಹೋಗುತ್ತದೆ. ಶಿಕ್ಷಕರು ಚರ್ಚಿಸುವ ವೈಯಕ್ತಿಕವಲ್ಲದ ಸಂಗತಿಗಳು ಅವರಿಗೆ ಆಸಕ್ತಿ ಹುಟ್ಟಿಸುವುದಿಲ್ಲ ಮತ್ತು ಅವರ ವೈಯಕ್ತಿಕ ಸಂಗತಿಗಳು (ಅಂದರೆ ಇತ್ತೀಚೆಗೆ ಭೇಟಿ ನೀಡಿದ್ದ ಸಂಬಂಧಿಕರು, ಜೋರುಮಳೆ ಬಂದು ಮನೆಯಲ್ಲಿ ಏನೆಲ್ಲ ಆಯಿತು ಅಥವಾ ಕಾಯಿಲೆ ಬಂದಿದ್ದು ಇತ್ಯಾದಿ) ಶಿಕ್ಷಕರಲ್ಲಿ ಆಸಕ್ತಿ ಹುಟ್ಟಿಸುವುದಿಲ್ಲ.

ಇಂತಹ ಸನ್ನಿವೇಶವು ಮಕ್ಕಳು ಪಠ್ಯಕ್ರಮದಿಂದ ಸಂಪೂರ್ಣ ದೂರ ಸರಿಯುವಂತೆ ಮಾಡುತ್ತದೆ. ಶಿಕ್ಷಕರಾದವರು ಮಕ್ಕಳಿಗೆ ತಮ್ಮ ಮನೆಯಲ್ಲಿ ಏನೆಲ್ಲ ಸಂಭವಿಸುತ್ತಿದೆ, ಈ ಹಿಂದೆ ಏನೆಲ್ಲ ಸಂಭವಿಸಿತ್ತು ಎಂಬುದನ್ನು ಇತರರಿಗೆ ತಿಳಿಸುವ ಅವಕಾಶ ಕಲ್ಪಿಸಿಕೊಡುವ ಮೂಲಕ ಮಕ್ಕಳು ಪಠ್ಯಕ್ರಮದಿಂದ ದೂರ ಸರಿಯದಂತೆ ಮಾಡಬಹುದು. ಮಕ್ಕಳಿಗೆ ಇಂತಹ ವಿಷಯಗಳ ಬಗೆಗೆ ಮಾತನಾಡಲು ಉತ್ತೇಜನ ದೊರೆತಲ್ಲಿ ಕ್ರಮೇಣ ಹಲವಾರು ಬಗೆಯ ಅನುಭವಗಳ ಬಗ್ಗೆ ತಮ್ಮ ಭಾವನೆಗಳನ್ನು, ಆಲೋಚನೆಗಳನ್ನು ವ್ಯಕ್ತಪಡಿಸಲು ಮಕ್ಕಳಿಗೆ ಸಾಧ್ಯವಾಗುತ್ತದೆ. ಮಾತ್ರವಲ್ಲ, ಶಾಲೆಯಲ್ಲಿ ಕಲಿಸುವ ವಿಜ್ಞಾನ, ಭೂಗೋಳ, ಪೌರನೀತಿ ಮುಂತಾದ ವಿಷಯಗಳ ಜ್ಞಾನವನ್ನು ಇನ್ನೂ ಆಳವಾಗಿ, ವೈಯಕ್ತಿಕ ಹಂತದಲ್ಲಿ ಅರ್ಥ ಮಾಡಿಕೊಳ್ಳುವುದನ್ನು ನಿಧಾನವಾಗಿ ಅವರು ರೂಢಿಸಿಕೊಳ್ಳುತ್ತಾರೆ.

**ವಸ್ತುಗಳು ಹಾಗೂ ಶಾಲೆಯ ಅನುಭವಗಳ ಬಗ್ಗೆ ಮಾತನಾಡಲು ಅವಕಾಶಗಳು**

ಶಾಲೆಯ ಸುತ್ತಲಿನ ಪ್ರದೇಶವು ಪರಿಶೋಧನೆಗೆ ಹಾಗೂ ಗಮನಿಸುವಿಕೆಗೆ ಅದ್ಭುತವಾದ ಸಂಪನ್ಮೂಲವಾಗಿದೆ. ಶಾಲೆ ಯಾವ ಸ್ಥಳದಲ್ಲೇ ಇರಲಿ, ಸುತ್ತ ಮುತ್ತಲಿನ ಸಣ್ಣ ಪುಟ್ಟ ವಸ್ತುಗಳು ವ್ಯಾಪಕ ಪರಿಶೋಧನೆಗೆ ಹಾಗೂ ಚರ್ಚೆಗೆ ಸರಕನ್ನು ಒದಗಿಸಬಲ್ಲವು. ಶಾಲೆಯ ಅಕ್ಕಪಕ್ಕದಲ್ಲಿ ಈ ಕೆಳಗಿನ ಯಾವುದೇ ಮನೆ/ಅಂಗಡಿ, ವಸ್ತುಗಳು ಇರಬಹುದು - ಅಂಗಡಿಗಳು, ಮರಗಳು, ಕಲ್ಲುಗಳು, ಮನೆಗಳು, ಪಾಳುಬಿದ್ದ ಮನೆ, ಬೀದಿ, ಬೇಲಿ, ಮಣ್ಣು, ಗುಡಿಸಲುಗಳು, ಹಕ್ಕಿಗೂಡುಗಳು, ಜೇನುಗೂಡು, ಹೂವುಗಳು, ಚಿಟ್ಟೆಗಳು, ತೆರೆದ ಚರಂಡಿ, ನಲ್ಲಿ ಇತ್ಯಾದಿ. ನಿಖರವಾಗಿ ಗಮನಿಸಲು, ಗಮನಿಸಿದ್ದನ್ನು ಚರ್ಚಿಸಲು, ಸತ್ಯವನ್ನು ಕಂಡುಕೊಳ್ಳಲು, ಇತರ ವಸ್ತುಗಳೊಂದಿಗಿನ ಅವುಗಳ ಸಂಬಂಧವನ್ನು ಪರಿಶೋಧಿಸಲು ಇವುಗಳಲ್ಲಿ ಯಾವುದೇ ಒಂದನ್ನು ವಿಷಯವನ್ನಾಗಿ ಬಳಸಿಕೊಳ್ಳಬಹುದಾಗಿದೆ.

ಪುಟ್ಟ ಮಕ್ಕಳೊಂದಿಗೆ ಇದನ್ನೆಲ್ಲ ಮಾಡಲು ಮಾತು ಒಂದು ಅದ್ಭುತವಾದ ಸಾಧನವಾಗಿದೆ. ಈ ಕೆಳಗೆ ಕೊಟ್ಟಿರುವ ಕೆಲವು ಚಟುವಟಿಕೆಗಳು ಇದನ್ನು ತೋರಿಸಿಕೊಡುತ್ತವೆ. ಒಂದು ಔಪಚಾರಿಕ ಪ್ರವಾಸಕ್ಕೋ, ಹೊರ ಸಂಚಾರಕ್ಕೋ ಹೊರಟಾಗ ಶಿಕ್ಷಕರಾದವರು ಮಕ್ಕಳ ಒಂದು ದೊಡ್ಡ ಗುಂಪನ್ನು ಕರೆದೊಯ್ಯಬೇಕು, ಇಲ್ಲಿ ಹಾಗೇನೂ ಮಾಡಬೇಕಾಗಿಲ್ಲ. ಒಂದು ಸಲಕ್ಕೆ ಯಾವುದಾದರೂ ಒಂದು ವಿಷಯದ ಬಗೆಗೆ ತಿಳಿದುಕೊಂಡು ಬಂದು ವರದಿ ಮಾಡಲು ಮೂವರೋ ನಾಲ್ವರೋ ವಿದ್ಯಾರ್ಥಿಗಳನ್ನು ಕಳುಹಿಸಿದರೂ ಸಾಕು. ಪ್ರವಾಸ ನಿಜಕ್ಕೂ ಒಂದು ಅದ್ಭುತ ಅನುಭವವಾಗಿದೆ, ಮಕ್ಕಳನ್ನು

ಶಾಲೆಯಿಂದ ದೂರದಲ್ಲಿರುವ ಜಾಗಗಳಿಗೆ ಕರೆದೊಯ್ಯಲು ಸಾಧ್ಯವಿರುವ ಶಿಕ್ಷಕರು ಅಗತ್ಯವಾಗಿ ಹಾಗೆ ಕರೆದೊಯ್ಯತಕ್ಕದ್ದು. ಆದರೆ ಮಕ್ಕಳನ್ನು ವಸ್ತು ಸಂಗ್ರಹಾಲಯಕ್ಕೋ, ಅಂಚೆ ಕಚೇರಿಗೋ ಕರೆದೊಯ್ಯಲೂ ಸಹ ಸಾಧ್ಯವಾಗದ ಶಿಕ್ಷಕರು ಶಾಲೆಯ ಹೊರಗಿನ ಒಂದು ಮುರಿದ ಸೇತುವೆಯನ್ನೋ ಅಥವಾ ಶಾಲೆಯ ಹಿಂಬದಿಯ ಚರಂಡಿಯನ್ನೋ ತೋರಿಸಲೂ ಸಹ ತಮಗೆ ಸಾಧ್ಯವಾಗಲಿಲ್ಲ ಎಂದು ನೆವ ಹೇಳಬಾರದು. ಪ್ರವಾಸಕ್ಕೆ ಹೋದಾಗ ತಾವು ಏನೇನು ಕಂಡೆವು ಎಂಬುದರ ಕುರಿತು ಎಲ್ಲ ಮಕ್ಕಳಿಗೂ ಮಾತನಾಡಲು ಧಾರಾಳವಾಗಿ ಅವಕಾಶ ಒದಗಿಸಬೇಕಾದುದಷ್ಟೇ ಇಲ್ಲಿ ಮುಖ್ಯ.

**ಚಿತ್ರಗಳನ್ನು ಕುರಿತು ಮಾತನಾಡುವುದು**

ಸೃಜನಶೀಲವಾದ ವಿಶ್ಲೇಷಣಾತ್ಮಕವಾದ ಮಾತುಕತೆಗೆ ಚಿತ್ರಗಳು ಬಹುದೊಡ್ಡ ಸಂಪನ್ಮೂಲಗಳಾಗಿವೆ. ಸುಮ್ಮನೆ, ಯಾವುದೇ ರೀತಿಯ ಚಿತ್ರಗಳನ್ನಾದರೂ ಇದಕ್ಕೆ ಬಳಸಿಕೊಳ್ಳಬಹುದು. ದಿನಪತ್ರಿಕೆ ಮತ್ತು ವಾರ ಪತ್ರಿಕೆಗಳಲ್ಲಿ ಸುದ್ದಿ ಹಾಗೂ ಜಾಹಿರಾತಿನ ಭಾಗವಾಗಿ ಮುದ್ರಣಗೊಂಡ ಚಿತ್ರಗಳನ್ನು ಕಾಣಬಹುದು ಅವುಗಳು, ಕ್ಯಾಲೆಂಡರ್, ಅಂಚೆ ಚೀಟಿ, ಲೇಬಲ್, ಪೋಸ್ಟರ್ ಮುಂತಾದವು ಇತರ ಸಂಪನ್ಮೂಲಗಳಾಗಿದ್ದು ಇವು ಎಲ್ಲಿ ಬೇಕಾದರೂ ಸಿಗುತ್ತವೆ, ಒಂದು ಪುಟ್ಟ ಹಳ್ಳಿಯಲ್ಲೂ ಇವು ಸಿಗುತ್ತವೆ. ಶಿಕ್ಷಕರು ವರ್ಷ ವರ್ಷವೂ ತರಗತಿಯಲ್ಲಿ ಬಳಸಲು ಅಂತಹ ಸಂಪನ್ಮೂಲಗಳ ಸಂಗ್ರಹವನ್ನು ಮಾಡಿಡಬಹುದು.

ಮೇಲೆ ತಿಳಿಸಲಾದ ಸಂಪನ್ಮೂಲಗಳಲ್ಲದೆ ಶಾಲೆಗಳು ಸ್ವಲ್ಪ ಹೆಚ್ಚುವರಿ ಖರ್ಚನ್ನು ನಿಭಾಯಿಸಬಲ್ಲವಾದರೆ ಚಿತ್ರಕಥಾ ಪುಸ್ತಕಗಳನ್ನೂ ಮುಖ್ಯವಾಗಿ ಪರಿಗಣಿಸಬೇಕು. ಅನುಬಂಧ 1 ರಲ್ಲಿ ಪುಸ್ತಕಗಳ ಒಂದು ಪಟ್ಟಿ ನೀಡಲಾಗಿದ್ದು ಅದರಲ್ಲಿ ಬಹುತೇಕ ಪುಸ್ತಕಗಳು ಚಿತ್ರಕಥಾ ಪುಸ್ತಕಗಳಾಗಿವೆ. ಒಮ್ಮೆ ಖರೀದಿಸಿ ಜೋಪಾನವಾಗಿ ಇರಿಸಿಕೊಂಡು ಬಳಸುತ್ತಿದ್ದರೆ ಬಹುದೀರ್ಘಕಾಲದವರೆಗೆ ಬಾಳಿಕೆ ಬರುತ್ತವೆ. ಚಿತ್ರಕಥಾ ಪುಸ್ತಕಗಳನ್ನು ಬಳಸಲು ಬಯಸುವ ಶಿಕ್ಷಕರು ಮಕ್ಕಳನ್ನು ಪುಸ್ತಕಗಳನ್ನು ನಿರ್ವಹಿಸುವಲ್ಲಿ ತೊಡಗಿಸಬೇಕಾಗುತ್ತದೆ, ಅದಕ್ಕಾಗಿ ತರಬೇತಿ ನೀಡಬೇಕಾಗುತ್ತದೆ. ಈ ತರಬೇತಿಯಲ್ಲಿ ಪುಸ್ತಕದ ಅಂಚು ಹಾಳಾಗದಂತೆ ಪುಟವನ್ನು ತಿರುಗಿಸುವುದು ಹೇಗೆ ಎಂಬಂತಹ ಸಣ್ಣ ಪುಟ್ಟ ವಿಷಯಗಳೂ ಕೂಡ ಮಹತ್ವದ ವಿಷಯಗಳಾಗಿರುತ್ತವೆ. ಚಿತ್ರಕಥಾ ಪುಸ್ತಕಗಳು ಸಹ ಕಲಿಕೆಗೆ ಮಹತ್ವದ ಸಂಪನ್ಮೂಲಗಳಾಗಬಲ್ಲವು ಎಂಬ ವಿಚಾರವನ್ನು ಮಕ್ಕಳು ಬೆಳೆಸಿಕೊಳ್ಳುವಲ್ಲಿ ಇಂತಹ ಸಣ್ಣ ಪುಟ್ಟ ಸಂಗತಿಗಳೂ ಬಹಳ ಮುಖ್ಯವಾದ ಪಾತ್ರ ವಹಿಸುತ್ತವೆ.

ಮಕ್ಕಳ ಒಂದು ಗುಂಪಿನೊಂದಿಗೆ ಚಿತ್ರದ ಬಗೆಗೆ ಅನೌಪಚಾರಿಕವಾಗಿ, ಸಹಜವಾಗಿ ಮಾತನಾಡುವುದೂ ಸಹ ಪ್ರಯೋಜನಕಾರಿಯಾಗುತ್ತದೆ. ಪ್ರತಿಕ್ರಿಯೆಯ ವಿವಿಧ ಆಯಾಮಗಳ ಬಗೆಗೆ ತಿಳುವಳಿಕೆ ಹೊಂದುವ ಮೂಲಕ ಮಕ್ಕಳ ಭಾಷೆಯ ಅಭಿವೃದ್ಧಿಯ ನಿಟ್ಟಿನಲ್ಲಿ ನೋಡಿದಾಗ ಅಂತಹ ಮಾತುಕತೆಯನ್ನು ಇನ್ನೂ ಹೆಚ್ಚು ಫಲಪ್ರದವಾಗಿಸಬಹುದು. ಶಿಕ್ಷಕರು ಮಗುವಿನ ಮುಂದಿಡುವ ಒಂದೊಂದು ಪ್ರಶ್ನೆಯೂ ಮಗುವಿನ ಪ್ರತಿಕ್ರಿಯೆಯನ್ನು ಒಂದು ನಿರ್ದಿಷ್ಟ ರೀತಿಯಲ್ಲಿ ನಿರ್ದೇಶಿಸುತ್ತದೆ. ಮಗುವಿನ ಗ್ರಹಿಕೆ ಹಾಗೂ ಪ್ರತಿಕ್ರಿಯೆಯನ್ನು ಉತ್ಕೃಷ್ಟಗೊಳಿಸಲು ಪ್ರಶ್ನೆಗಳನ್ನು ಅತ್ಯಂತ ಸಮರ್ಪಕ

ರೀತಿಯಲ್ಲಿ ಬಳಸಿಕೊಳ್ಳುವ ಬಗೆ ಹೇಗೆ? ಈ ಕೆಳಗಿನ ಪ್ರಶ್ನೆಗಳ ನೆರವಿನಿಂದ ಮಕ್ಕಳನ್ನು ನಿರ್ದೇಶಿಸಬಲ್ಲ ಪ್ರತಿಕ್ರಿಯೆಯ ವಿವಿಧ ಹಂತಗಳಾಗಿವೆ:

**ಎ. ಹುಡುಕುವುದು:** ಈ ಹಂತದಲ್ಲಿ ಚಿತ್ರದಲ್ಲಿರುವ ವಸ್ತುಗಳನ್ನು ಹುಡುಕಬೇಕೆಂದು ಮಕ್ಕಳಿಗೆ ಹೇಳಬೇಕಾಗುತ್ತದೆ. ಈ ರೀತಿಯ ಪ್ರಶ್ನೆಗಳನ್ನು ಕೇಳಬಹುದಾಗಿದೆ: "ಈ ಚಿತ್ರದಲ್ಲಿ ಏನಾಗುತ್ತಿದೆ?" "ಅಲ್ಲಿ ಇಲಿ ಇದೆಯೇ?" "ಸೈಕಲ್ ಮೇಲೆ ಕುಳಿತಿರುವವರು ಯಾರು?" "ಆ ಹುಡುಗ ಎಷ್ಟು ದೊಡ್ಡವನು?"

**ಬಿ. ತರ್ಕಿಸುವುದು:** ಈ ಹಂತದಲ್ಲಿ ಪ್ರತಿಕ್ರಿಯೆಯು ತರ್ಕಿಸುವ ಅಥವಾ ಮೂಲ ಕಾರಣಗಳನ್ನು ಹುಡುಕುವ ಸಾಮರ್ಥ್ಯಕ್ಕೆ ಸಂಬಂಧ ಪಟ್ಟುದಾಗಿದೆ. ಚಿತ್ರದಲ್ಲಿ ತೋರಿಸುವ ಯಾವುದಾದರೂ ಒಂದು ಸಂಗತಿಗೆ ಮಗು ನೀಡುವ ಯಾವುದೇ ತರ್ಕವನ್ನು ಶಿಕ್ಷಕರು ಸ್ವೀಕರಿಸಬೇಕಾಗುತ್ತದೆ. ಶಿಕ್ಷಕರು ತಮ್ಮದೇ ಆದ ತರ್ಕವನ್ನು ನೀಡಬಹುದು, ಆದರೆ ಇದು ಮತ್ತೊಂದು ಸಾಧ್ಯತೆ ಎಂಬಂತೆ ನೀಡಬೇಕಾಗುತ್ತದೆ. ಮಾದರಿ ಪ್ರಶ್ನೆಗಳು: "ಪುಟ್ಟ ಹುಡುಗಿ ಏಕೆ ಅಳುತ್ತಿದ್ದಾಳೆ?" "ಮೋಟಾರ್ ಸೈಕಲ್ಲಿನ ಹಿಂಬದಿ ಏಕೆ ಕಾಣಿಸುವುದಿಲ್ಲ?" "ಇಲಿ ಏಕೆ ಅಡಗಿಕೊಂಡಿದೆ?"

**ಸಿ. ಕಲ್ಪಿಸಿಕೊಳ್ಳುವುದು:** ಈ ಹಂತದಲ್ಲಿ ಚಿತ್ರದಲ್ಲಿ ತನ್ನನ್ನೇ ಇರಿಸಿಕೊಂಡು ಸಂಬಂಧ ಕಲ್ಪಿಸಿಕೊಳ್ಳಲು ಸೂಚಿಸಬೇಕಾಗುತ್ತದೆ. ಮಗು ಒಂದು ಕಾಲ್ಪನಿಕ ಸನ್ನಿವೇಶದಲ್ಲಿ ತನ್ನನ್ನು ಗುರುತಿಸಿಕೊಂಡು ಯಾರು ಏನನ್ನು ಹೇಳುತ್ತಾರೆ, ಅವರಿಗೆ ಏನು ಅನ್ನಿಸುತ್ತದೆ ಎಂಬಿತ್ಯಾದಿ ಕಲ್ಪನೆಗಳನ್ನು ಪ್ರೋತ್ಸಾಹಿಸುವುದು ಈ ಪ್ರಶ್ನೆಗಳ ಉದ್ದೇಶವಾಗಿರುತ್ತದೆ. ಮಾದರಿ ಪ್ರಶ್ನೆಗಳು: "ನೀನು ಈ ಮರದ ಮೇಲೆ ಕುಳಿತಿದ್ದರೆ ಏನನ್ನು ನೋಡುತ್ತಿದ್ದೆ?" "ಸೈಕಲ್ ಮೇಲೆ ಕೂತಿರುವ ವ್ಯಕ್ತಿಗೆ ಆ ಪುಟ್ಟ ಹುಡುಗಿ ಏನು ಹೇಳುತ್ತಿದ್ದಾಳೆ?" "ಆ ಪುಟ್ಟ ಇಲಿ ಏನು ಯೋಚಿಸುತ್ತಿರಬಹುದು?".

**ಡಿ. ಊಹಿಸುವುದು:** ಈ ಹಂತವು ಭವಿಷ್ಯದ ಘಟನಾವಳಿಗಳನ್ನು ಊಹಿಸುವ ಸಾಮರ್ಥ್ಯಕ್ಕೆ ಸಂಬಂಧ ಪಟ್ಟುದಾಗಿದೆ. ಮುಂದೇನಾಗಬಹುದು ಎಂದು ಊಹಿಸಿ ಮಾತನಾಡಲು ಮಕ್ಕಳನ್ನು ಪ್ರೋತ್ಸಾಹಿಸಲಾಗುತ್ತದೆ. ಮಾದರಿ ಪ್ರಶ್ನೆಗಳು: "ಈ ವ್ಯಕ್ತಿ ಇಲ್ಲಿಂದ ಎಲ್ಲಿಗೆ ಹೋಗುತ್ತಾನೆ?" "ಪುಟ್ಟ ಬಾಲಕಿ ಮನೆಯಲ್ಲಿ ಏನು ಮಾಡುತ್ತಾಳೆ?" "ಅವಳು ಮನೆಗೆ ಹೇಗೆ ತಲುಪುತ್ತಾಳೆ?"

**ಇ. ಸಂಬಂಧ ಕಲ್ಪಿಸುವುದು:** ಚಿತ್ರದಲ್ಲಿ ತೋರಿಸಿರುವಂತಹ ಸನ್ನಿವೇಶಕ್ಕೆ ಸಂಬಂಧಪಟ್ಟ ಮಗುವಿನ ಸ್ವಂತ ಬದುಕಿನ ಸನ್ನಿವೇಶವನ್ನು ಕುರಿತು ಯೋಚಿಸುವ ಸಾಮರ್ಥ್ಯವನ್ನು ಮಗುವಿನಲ್ಲಿ ಬೆಳೆಸುವಂತಹ ಪ್ರಶ್ನೆಗಳನ್ನು ಕೇಳಬಹುದು. ಮಾದರಿ ಪ್ರಶ್ನೆಗಳು: "ನೀನು ಎಂದಾದರೂ ಮೋಟಾರ್ ಸೈಕಲ್ ಮೇಲೆ ಕೂತಿರುವೆಯಾ - ಹೇಗನ್ನಿಸಿತು?" "ಯಾವತ್ತಾದರೂ ನಿನಗೆ ಗುರುತು ಪರಿಚಯವಿರದ ವ್ಯಕ್ತಿಯ ಜೊತೆ ಇದ್ದೆಯಾ? ಆಗ ಏನಾಯಿತು?"

**ಕಥೆಗಳನ್ನು ಆಲಿಸುವುದು ಮತ್ತು ಅವುಗಳ ಬಗ್ಗೆ ಮಾತನಾಡುವುದು**

ನಾವು ಕತೆ ಕೇಳುವಾಗ ನಮ್ಮ ಮನಸ್ಸು ಅದರಲ್ಲಿ ಚಿತ್ರಿಸಲಾದ ಘಟನಾವಳಿಗಳು ಮತ್ತು ಪಾತ್ರಗಳ ಬೆನ್ನೇರಿ ಓಡುತ್ತವೆ. ಎಷ್ಟೋ ಕತೆಗಳು ನಾವು ನಮ್ಮ ಬದುಕಿನಲ್ಲಿ ಕಂಡರಿಯದಿದ್ದರೂ ನಾವು ಕಲ್ಪಿಸಿಕೊಳ್ಳಬಹುದಾದ ಘಟನಾವಳಿಗಳ ಕುರಿತಾಗಿರುತ್ತವೆ. ಇದೇ ರೀತಿ, ನಾವು ಈ ಪಾತ್ರಗಳಂತಹ ವ್ಯಕ್ತಿಗಳನ್ನು ಎಂದೂ ನೋಡಿರದಿದ್ದರೂ ಇಂತಹ ಪಾತ್ರಗಳನ್ನು ನಾವು ಕಲ್ಪಿಸಿಕೊಳ್ಳಬಹುದಾಗಿದೆ. ಈ ರೀತಿ ಅಪರಿಚಿತ ವ್ಯಕ್ತಿಗಳು ಹಾಗೂ ಘಟನೆಗಳು ನಮ್ಮ ಪ್ರಪಂಚದ ನಕ್ಷೆಯ ಒಂದು ಅವಿಭಾಜ್ಯ ಅಂಗವಾಗಿಬಿಡುತ್ತವೆ. ಬಳಿಕ ನಮ್ಮ ವಾಸ್ತವ ಬದುಕಿನಲ್ಲಿ ಸಂಭವಿಸಿದ ಘಟನೆಗಳ ಬಗ್ಗೆ ಮಾತನಾಡುವಂತೆ ಅಲ್ಲಿಯ ಘಟನೆಗಳ ಕುರಿತೂ ಮಾತನಾಡತೊಡಗುತ್ತೇವೆ. ಜನ ಸಿನಿಮಾಗಳು, ಪುಸ್ತಕಗಳು ಮತ್ತು ದಿನಪತ್ರಿಕೆಯಲ್ಲಿ ಪ್ರಕಟವಾದ ಬಹುತೇಕ ಸುದ್ದಿಗಳ ಚರ್ಚೆ ಮಾಡುವುದು ಹೀಗೆಯೇ. ಕತೆಗಳು -ಅವು ವಾಸ್ತವ ಘಟನೆಗಳಾಗಿರಲಿ ಅಥವಾ ಯಾರಾದರೂ ಕಲ್ಪಿಸಿಕೊಂಡ ಘಟನೆಗಳಾಗಿರಲಿ- ನಮ್ಮ ಆಸಕ್ತಿಗೆ ಹೊಸ ಸಾಮಗ್ರಿಗಳನ್ನು ತಂದು ಕೊಡುತ್ತವೆ, ಈ ಹೊಸ ಸಾಮಗ್ರಿಗಳಿಗೆ ಹೆಚ್ಚಿನ ಪರಿಶ್ರಮವಿಲ್ಲದೆ ಅಥವಾ ಕಷ್ಟವಿಲ್ಲದೆ ಹೊಂದಿಕೊಂಡುಬಿಡುತ್ತೇವೆ.

ನಾವು ಕತೆ ಕೇಳುವಾಗ ಘಟನೆಯ ಕ್ರಮವನ್ನು ಹಾಗೂ ಪಾತ್ರಗಳ ವರ್ತನೆಯನ್ನು ಕಲ್ಪಿಸಿಕೊಂಡು ಸ್ಪಂದಿಸುತ್ತೇವೆ. ಅದೇ ನಾವೇ ಸ್ವತಃ ಕತೆ ಹೇಳುವಾಗ ಕತೆ ರೂಪಿಸಬಲ್ಲ ಅನುಭವಗಳನ್ನು ಮರುಸಂಯೋಜನೆ ಮಾಡಿಕೊಳ್ಳುತ್ತೇವೆ. ಒಂದು ವೇಳೆ ಅದೊಂದು ನೈಜ ಅನುಭವವಾಗಿದ್ದರೆ ಸಣ್ಣ ಘಟನಾವಳಿಗಳನ್ನು ಅದೇ ಕ್ರಮದಲ್ಲಿ ಯಥಾವತ್ತಾಗಿ ನಿರೂಪಿಸುವುದರತ್ತ ನಾವು ಗಮನ ಕೊಡುತ್ತೇವೆ. ಆದಾಗ್ಯೂ ಒಂದು ಘಟನೆಯ ಕುರಿತು ಅದು ಹೇಗೆ ನಡೆಯಿತೋ ಹಾಗೆಯೇ ಮಾತನಾಡುವುದು ಯಾರಿಗೇ ಆದರೂ ಸುಲಭ ಸಾಧ್ಯವಲ್ಲ. ಅನುಭವದ ಕೆಲವು ಸಂಗತಿಗಳು ಬಹಳ ಮುಖ್ಯವೆಂದು ನಮಗೆ ತೋರುವ ಕಾರಣ ಸಣ್ಣ ಪುಟ್ಟ ವಿರೂಪಗಳಾಗುವುದುಂಟು. ಹಾಗಲ್ಲದೆ, ನಾವು ಹೇಳುವ ಕತೆ ವಾಸ್ತವ ಸಂಗತಿ ಅಲ್ಲದಿದ್ದರೆ, ಪ್ರಾಯಶಃ ನಮ್ಮ ಕೇಳುಗರ ಆಸಕ್ತಿ ಹೆಚ್ಚಿಸುವ ಉದ್ದೇಶದಿಂದಲೋ ಏನೋ ನಾವು ಸ್ವಲ್ಪ ಹೆಚ್ಚು ಸ್ವತಂತ್ರವಾಗಿ ಕತೆಯನ್ನು ಮರುಜೋಡಿಸಿಕೊಳ್ಳುತ್ತೇವೆ. ಅದೇನೆ ಇರಲಿ, ಈ ಎರಡೂ ಸಂದರ್ಭಗಳಲ್ಲಿ ಕತೆ ಹೇಳುವುದು (ಅ) ಬದುಕಿನ ಘಟನೆಗಳು, ಪಾತ್ರಗಳು ಇತ್ಯಾದಿಗಳ ಮರುಜೋಡಣೆ ಆಗಿರುತ್ತದೆ ಮತ್ತು (ಆ) ನಮ್ಮ ಕೇಳುಗರಿಗೆ ಕತೆಯನ್ನು ಆಸಕ್ತಿದಾಯಕವಾಗಿ ಮಾಡುವುದಾಗಿರುತ್ತದೆ. ಈ ಎರಡೂ ಸಹ ಭಾಷೆಯ ಸಮೃದ್ಧ ಬಳಕೆಯನ್ನು ಅಪೇಕ್ಷಿಸುತ್ತವೆ. ನಿಜವೇನೆಂದರೆ, ಯಾವುದೇ ಕತೆಯಲ್ಲಿ ನಾವು ಭಾಷೆಯನ್ನು ಸೃಜನಾತ್ಮಕವಾಗಿ ಕುಶಲತೆಯಿಂದ ನಿಭಾಯಿಸುತ್ತಿರುತ್ತೇವೆ ಮತ್ತು ಕತೆಯ ಕೇಳುವಿಕೆ ನಮಗೆ ಭಾಷೆಯ ಕೌಶಲಪೂರ್ಣ ಸೃಜನಾತ್ಮಕತೆಗೆ ನಿದರ್ಶನಗಳನ್ನು ಒದಗಿಸುತ್ತದೆ. ಆದ್ದರಿಂದ ಪುಟ್ಟ ಮಕ್ಕಳಿಗೆ ಪಾಠ ಕಲಿಸುವ ಶಿಕ್ಷಕರಿಗೆ ಕತೆ ಹೇಳುವುದು ಒಂದು ಬಹುದೊಡ್ಡ ಸಂಪನ್ಮೂಲವಾಗಿದೆ.

ಕಥೆ ಹೇಳುವುದು ಒಂದು ಕಲೆ ಎಂದು ಭಾವಿಸುವ ಕೆಲವು ಶಿಕ್ಷಕರು ಎಲ್ಲೋ ಕೆಲವು ಮಂದಿ ಮಾತ್ರ ಕಥೆ ಹೇಳುವ ಸಾಮರ್ಥ್ಯ ಹೊಂದಿರುತ್ತಾರೆ ಎಂದು ಭಾವಿಸುತ್ತಾರೆ. ಇದು ನಿಜಕ್ಕೂ ನಿರಾಶಾದಾಯಕವಾದ ಅಭಿಪ್ರಾಯವಾಗಿದೆ. ಏಕೆಂದರೆ ಇದು ಕಥೆ ಕೇಳುವ ಆನಂದವನ್ನೇ ಮಕ್ಕಳಿಂದ ಕಸಿದುಕೊಳ್ಳುವಂತಹ ಅಭಿಪ್ರಾಯವಾಗಿದೆ. ಕಥೆ ಚೆನ್ನಾಗಿದ್ದರೆ ಮಕ್ಕಳು ಅಂತಹ ಕಥೆಯನ್ನು ಆನಂದದಿಂದ ಕೇಳುತ್ತಾರೆ. ಕಥೆ ಹೇಳುತ್ತಾ ಹೇಳುತ್ತಾ ಸಮಯ ಸರಿದಂತೆ ಕಥೆ ಹೇಳುವ

ಕೌಶಲ ಬೆಳೆಯುತ್ತ ಹೋಗುತ್ತದೆ. ಉತ್ತಮ ಕಥೆಗಳನ್ನು ಆಯ್ಕೆ ಮಾಡಿ ಅವನ್ನು ಆಗಾಗ ಹೇಳುವುದು ಮುಖ್ಯವಾದುದು. ಒಂದು ಕಥೆಯನ್ನು ಒಂದು ಸಲ ಮಾತ್ರ ಹೇಳಬೇಕೆಂದೇನೂ ಇಲ್ಲ. ಉತ್ತಮ ಕಥೆಗಳನ್ನು ಮತ್ತೆ ಮತ್ತೆ ಹೇಳಬಹುದು.

ಕಥೆ ಹೇಳಿದ ಮೇಲೆ ಅದರ ಬಗೆಗೆ ಮಾತನಾಡುವುದು ಬಹಳ ಜಟಿಲವಾದ ವಿಷಯವಾಗಿದೆ. ಕಥೆಯ ನೀತಿಯ ಬಗ್ಗೆ ಮಾತನಾಡುವ ಬಹಳಷ್ಟು ಶಿಕ್ಷಕರನ್ನು ನಾನು ಕಂಡಿದ್ದೇನೆ. ಅವರು ಕಥೆ ಹೇಳಿ ಮುಗಿಸಿದ ಕೂಡಲೆ "ಈ ಕಥೆಯಿಂದ ನೀವು ಏನು ಕಲಿತಿರಿ?" ಎಂದು ಕೇಳುತ್ತಾರೆ. ಒಂದು ಅರ್ಥಪೂರ್ಣ ಸಂವಾದವನ್ನು ಪ್ರಾರಂಭಿಸಲು ಇದು ಅಷ್ಟೇನೂ ಮಹತ್ವದ್ದಲ್ಲದ ಪ್ರಶ್ನೆಯಾಗಿದೆ. ಮಕ್ಕಳು ಕಥೆಯ ನೈತಿಕ ಮೌಲ್ಯದ ಮೇಲೆ -ಕಥೆ ಅಂಥದೇನಾದರೂ ಮೌಲ್ಯ ಹೊಂದಿದ್ದರೆ- ಅಷ್ಟೇನೂ ವಿಶೇಷವಾಗಿ ಆಸಕ್ತರಾಗುವುದಿಲ್ಲ. ಅವರ ಪಾಲಿಗೆ ಕಥೆಯಷ್ಟೇ ಮುಖ್ಯ. ಕಥೆಯ ನೈತಿಕ ಮೌಲ್ಯದ ಬಗ್ಗೆ ಕೇಳುವ ಶಿಕ್ಷಕರು ತಮ್ಮದೇ ಶ್ರಮದ ಸಾಧನೆಯನ್ನು ಹಾಳು ಮಾಡುತ್ತಾರೆ. ಮಕ್ಕಳು ಕಥೆಯನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು ಎಂದು ಆಗ್ರಹಿಸುವ ಶಿಕ್ಷಕರ ಬೇಡಿಕೆಯೂ ಸಹ ಇಷ್ಟೇ ವ್ಯರ್ಥವಾದುದಾಗಿರುತ್ತದೆ. ಅಂತಹ ಶಿಕ್ಷಕರು ಕಥೆಯನ್ನು ಶಬ್ದಶಹ ಪುನರುಚ್ಚರಿಸಬೇಕು ಎಂದು ಬಯಸುತ್ತಾರೆ. ಅವರ ಇಂತಹ ಬೇಡಿಕೆ ಅದೆಷ್ಟು ನಿರೀಕ್ಷಿತವಾಗಿರುತ್ತದೆಂದರೆ ಮಕ್ಕಳು ಕಥೆ ಕೇಳಿ ಆನಂದಿಸುವುದಕ್ಕಿಂತ ಹೆಚ್ಚಾಗಿ ತಾವು ನೆರವೇರಿಸಿಕೊಡಬೇಕಾದ ಶಿಕ್ಷಕರ ಬೇಡಿಕೆಯತ್ತ ಹೆಚ್ಚು ಆತಂಕಿತರಾಗಿರುತ್ತಾರೆ.

ನಾವು ತಿಳಿಯಬೇಕಾದ ಬಹಳ ಮುಖ್ಯವಾದ ಸಂಗತಿಯೆಂದರೆ, ಕಥೆ ಕೇಳುವವರು ಕಥೆಯೊಂದಿಗೆ ಸಂಬಂಧ ಕಲ್ಪಿಸಿಕೊಳ್ಳಬೇಕಾದುದು ಬಹಳ ಮುಖ್ಯ, ಪ್ರತಿಯೊಂದು ಮಗುವೂ ಕಥೆಯೊಂದಿಗೆ ತನ್ನದೇ ರೀತಿಯಲ್ಲಿ ಸಂಬಂಧ ಏರ್ಪಡಿಸಿಕೊಳ್ಳುತ್ತದೆ. ಮಗುವಿನ ಸ್ವಂತ ವ್ಯಕ್ತಿತ್ವ ಮತ್ತು ಹಿಂದಿನ ಅನುಭವಗಳು ಕಥೆಗೆ ಮಗು ತೋರಿಸುವ ಪ್ರತಿಕ್ರಿಯೆಯನ್ನು ನಿರ್ಧರಿಸುತ್ತವೆ. ಕಥೆಯಲ್ಲಿ ಒಂದು ಪಾತ್ರ ಹೇಗೆ ವರ್ಣಿತವಾಗಿರುತ್ತದೋ ಅದಕ್ಕಿಂತ ಭಿನ್ನವಾಗಿ ಮಗು ಆ ಪಾತ್ರವನ್ನು ಕಲ್ಪಿಸಿಕೊಳ್ಳಬಹುದು. ಒಂದು ಘಟನೆ ಕಥೆಯ ಉಳಿದೆಲ್ಲ ಘಟನೆಗಳಿಗಿಂತಲೂ ಹೆಚ್ಚು ಅರ್ಥಪೂರ್ಣವೆಂದು ಭಾವನಾತ್ಮಕವಾಗಿ ಭಾವಿಸಿಕೊಳ್ಳಬಹುದು. ಒಂದು ಕಥೆ ಹಾಗೂ ಅದರ ಪಾತ್ರಗಳು ಮಗುವಿಗೆ ಯಾವ ರೀತಿಯಲ್ಲಿ ಅರ್ಥಪೂರ್ಣ ಎನಿಸುತ್ತವೋ ಆ ರೀತಿಯಲ್ಲಿ ಅದನ್ನು ಮರು ಸೃಷ್ಟಿಸಿಕೊಳ್ಳುವ ಸ್ವಾತಂತ್ರ್ಯ ಪ್ರತಿಯೊಂದು ಮಗುವಿಗೂ ಇರಬೇಕಾದ ಒಂದು ಹಕ್ಕಾಗಿದೆ. ಉದಾಹರಣೆಗೆ, ಪುಟ 12 ರಲ್ಲಿರುವ (ಆಕಾಶದಲ್ಲಿ ಆನೆಗಳು) ಕಥೆಯಲ್ಲಿ ಬರುವ ಶಿಕ್ಷಕರನ್ನು ಒಂದು ಮಗು ಓರ್ವ ಮಹಿಳೆಯಂತೆ ಕಲ್ಪಿಸಿಕೊಳ್ಳಬಹುದು. ಪಾತ್ರಗಳನ್ನು ಯಾವುದೇ ರೀತಿಯಲ್ಲಿ ಕಲ್ಪಿಸಿಕೊಳ್ಳುವ ಮಗುವಿನ ಸ್ವಾತಂತ್ರ್ಯದಲ್ಲಿ ನಂಬಿಕೆಯುಳ್ಳ ಶಿಕ್ಷಕರು ಮಗು ಕಥೆಯ ಕುರಿತು ತನ್ನಿಚ್ಛೆಯಂತೆ ಮಾತನಾಡುವ, ವಿರೂಪಗೊಳಿಸುವ, ವಿಸ್ತರಿಸುವ, ಪಾತ್ರಗಳನ್ನು ಬದಲಾಯಿಸುವ, ತನ್ನದೇ ಕಥೆ ಹೆಣೆಯುವ ಅವಕಾಶಗಳನ್ನು ಸೃಷ್ಟಿಸಲು ಬಯಸುತ್ತಾರೆ. ಇಂತಹ ಅವಕಾಶಗಳು ಕಥೆ ಹೇಳಿ ಮುಗಿಸಿದ ತಕ್ಷಣವೇ ಸಂಭವಿಸಬೇಕಾದ ಅವಶ್ಯಕತೆಯಿಲ್ಲ. ಹಾಗಾಗಿ ಕಥೆ ಹೇಳಿ ಮುಗಿಸಿದ ಮೇಲೆ ಸಂಪೂರ್ಣವಾಗಿ ಬೇರೆಯದೇ ಚಟುವಟಿಕೆಯನ್ನು ಪ್ರಾರಂಭಿಸುವುದು ಸೂಕ್ತ.

**ಅಭಿನಯಿಸುವುದು**

ಕಥೆಗೂ ನಾಟಕಕ್ಕೂ ಬಹು ಹತ್ತಿರದ ಸಂಬಂಧವಿದೆ. ಆಗಾಗ ಶಿಕ್ಷಕರು ಒಂದರಿಂದ ಮತ್ತೊಂದಕ್ಕೆ ಅತ್ಯಂತ ಯಶಸ್ವಿಯಾಗಿ ಚಲಿಸಬಹುದಾಗಿದೆ. ಏಕಾಗ್ರತೆಯಿಂದ ಕಥೆ ಕೇಳುವ ಮಗು ಕಥೆಯಲ್ಲಿ ಚಿತ್ರಿತವಾಗಿರುವ ವಿವಿಧ ಪಾತ್ರಗಳನ್ನು ಸದ್ದಿಲ್ಲದೆ ಧರಿಸುತ್ತಿರುತ್ತದೆ. ನಾಟಕದಲ್ಲೂ ಸಹ ಇದೇ ಸಂಭವಿಸುವುದು, ಆದರೆ ಇನ್ನೂ ಸ್ಪಷ್ಟವಾದ ರೀತಿಯಲ್ಲಿ ಸಂಭವಿಸುತ್ತದೆ ಅಷ್ಟೇ. ನಾಟಕದಲ್ಲಿ ಮಗುವಿಗೆ ಮಾತು ಮತ್ತು ಭೌತಿಕ ಚಲನೆ ಮತ್ತು ವಿವಿಧ ಆಂಗಿಕ ಭಂಗಿಗಳಿಂದ ವಿವಿಧ ಪಾತ್ರಗಳನ್ನು ಅಭಿನಯಿಸುವ ಅವಕಾಶ ದೊರೆಯುತ್ತದೆ. ಆದಾಗ್ಯೂ ಕಥೆ ಕೇಳುವವರು ಹೇಗೋ ಹಾಗೆ ಇಲ್ಲಿಯೂ ಸಹ ಮಕ್ಕಳು ತಮ್ಮನ್ನು ತಾವು ಬೇರೆಯವರಂತೆ ಕಲ್ಪಿಸಿಕೊಳ್ಳಬೇಕಾಗುತ್ತದೆ, ಮತ್ತೊಬ್ಬರ ದೃಷ್ಟಿಯಿಂದ ಸಂಗತಿಗಳನ್ನು ನೋಡಬೇಕಾಗುತ್ತದೆ. ಮುಖ್ಯ ಸಂಗತಿ ಎಂದರೆ, ನಾಟಕದಲ್ಲಿ ಒಬ್ಬ ವ್ಯಕ್ತಿ ಸಂಗತಿಗಳನ್ನು ಮತ್ತೊಬ್ಬನ ದೃಷ್ಟಿಯಿಂದ ಹೆಚ್ಚು ಕ್ರಿಯಾತ್ಮಕವಾಗಿ ನೋಡಬೇಕಾಗಿರುತ್ತದೆ. ಒಂದು ಕಲ್ಪಿತ ಸಂದರ್ಭಕ್ಕೆ ಹಾಗೂ ಕಲ್ಪಿತ ಪಾತ್ರಕ್ಕೆ ಸೂಕ್ತವಾದ ಪದಗಳು ಹಾಗೂ ಅಭಿನಯವನ್ನು ಹುಡುಕಿಕೊಳ್ಳಬೇಕಾಗುತ್ತದೆ. ನಾಟಕದಲ್ಲಿ ಸುಧಾರಿಸಿಕೊಳ್ಳಲು ಸಾಕಷ್ಟು ಅವಕಾಶವಿದ್ದು ನಾಟಕವನ್ನು ಮಾತಿನ ಒಂದು ವಿಸ್ತರಣೆಯಾಗಿಸಿಕೊಳ್ಳುವುದಕ್ಕೆ ಇದುವೆ ಕೀಲಿಕೈ ಆಗಿದೆ.

ದುರದೃಷ್ಟವಶಾತ್, ಶಾಲೆಗಳಲ್ಲಿ ನಡೆಯುವ ಬಹುತೇಕ ನಾಟಕದ ಚಟುವಟಿಕೆಗಳಲ್ಲಿ ಈ ಸುಧಾರಣೆಗೆ ಅವಕಾಶವೇ ಇರುವುದಿಲ್ಲ. ಮಕ್ಕಳಿಗೆ ಕೆಲವು ನಿರ್ದಿಷ್ಟ ಪಾತ್ರಗಳನ್ನು ವಹಿಸಿಕೊಟ್ಟು ಕಂಠಪಾಠ ಮಾಡಿಕೊಳ್ಳಲು ಒಂದಷ್ಟು ಸಂಭಾಷಣೆಯನ್ನು ಕೊಡಲಾಗುತ್ತದೆ. ಯಾವುದಾದರೂ ಉತ್ಸವವಿದ್ದಾಗ ಅಥವಾ ಯಾರಾದರೂ ಅತಿಥಿಗಳು ಬಂದಾಗಿನ ವಿಶೇಷ ಸಂದರ್ಭಕ್ಕೆ ನಾಟಕವನ್ನು ಬಳಸಿಕೊಳ್ಳಲಾಗುತ್ತದೆ. ನಾಟಕದ ಆ ಬಗೆಯ ಬಳಕೆಗೆ ಅದರದ್ದೇ ಆದ ಮಹತ್ವವಿರುತ್ತದೆ, ಆದರೆ ಮಕ್ಕಳ ಭಾಷಾ ಬಳಕೆಯ ವಿಸ್ತರಣೆಗೆ ಅದರಿಂದ ಅಲ್ಪ ಪ್ರಯೋಜನವಷ್ಟೇ ಆಗುತ್ತದೆ. ಅಂತಿಮ ಪ್ರದರ್ಶನದಲ್ಲಿ ಎಲ್ಲೋ ಕೆಲವು ಮಕ್ಕಳು ಭಾಗವಹಿಸಿ ಉಳಿದವರು ಸುಮ್ಮನೆ ನಾಟಕ ನೋಡುತ್ತಾರೆ. ನಾಟಕದ ಪೂರ್ವಸಿದ್ಧತೆಯಿಂದ ಹಿಡಿದು ಅಂತಿಮ ಪ್ರದರ್ಶನದವರೆಗೂ ಪ್ರತಿಯೊಬ್ಬರೂ ಏನಾದರೂ ತಪ್ಪುಗಳಾಗಿಬಿಡುತ್ತವೇನೋ ಎಂದು ಒಂದೇ ಸಮನೆ ತಲ್ಲಣಿಸುತ್ತಿರುತ್ತಾರೆ. ಇಂತಹ ಕಡೆ ಸ್ವಾತಂತ್ರ್ಯಕ್ಕಾಗಲಿ, ಮೋಜಿಗಾಗಲಿ ಅವಕಾಶವಿರುವುದಿಲ್ಲ. ನಾಟಕವನ್ನು ಒಂದು ಭಾಷಿಕ ಚಟುವಟಿಕೆಯನ್ನಾಗಿ ಬಳಸಿಕೊಳ್ಳಲು ಇವೆರಡು ಸಂಗತಿಗಳು, ಸ್ವಾತಂತ್ರ್ಯ ಮತ್ತು ಮೋಜು, ಬಹಳ ಮುಖ್ಯ.

ನಾಟಕವನ್ನು ತಮ್ಮ ಭಾಷಾ ಬೋಧನೆಯ ಒಂದು ಭಾಗವನ್ನಾಗಿ ಬಳಸಿಕೊಳ್ಳಲು ಬಯಸುವ ಶಿಕ್ಷಕರು ಯಾವಾಗಲೂ ಒಂದು ಸಂಗತಿಯನ್ನು ನೆನಪಿನಲ್ಲಿಡಬೇಕು; ಮಕ್ಕಳ ಪಾಲಿಗೆ ನಾಟಕ ಯಾವುದೋ ವಿಶೇಷವಾದ, ಅನನ್ಯವಾದ ಸಂಗತಿಯಲ್ಲ, ಅದು ಅವರ ದೈನಂದಿನ ಬದುಕಿನ ಅವಿಭಾಜ್ಯ ಅಂಗವೇ ಆಗಿದೆ. ಮಕ್ಕಳು ನಾಟಕದ ಅಂಶಗಳನ್ನು ಅಂದರೆ, ಅನುಕರಿಸುವುದು, ಉತ್ಪ್ರೇಕ್ಷಿಸುವುದು, ಸೋಗು ಹಾಕುವುದು ಮುಂತಾದವನ್ನು, ಯಾವಾಗಲೂ ಬಳಸುತ್ತಿರುತ್ತಾರೆ. ನಾಟಕ ಎಂದಿಗೂ ಮಕ್ಕಳದ್ದೇ ಆದ ಸಾಂಪ್ರದಾಯಿಕ ಆಟದ ಚಟುವಟಿಕೆಯ, ಆಟಗಳ ಒಂದು ಭಾಗವೇ ಆಗಿದೆ. ನಾಟಕೀಯ ಕೌಶಲಗಳನ್ನು ಹೊಂದಿರದ ಮಕ್ಕಳನ್ನು ಕಲ್ಪಿಸಿಕೊಳ್ಳಲೂ ಆಗುವುದಿಲ್ಲ. ಆದರೆ ಬಹುತೇಕ ಮಕ್ಕಳು ತರಗತಿಯಲ್ಲಿ ತಮ್ಮ ನಾಟಕೀಯ ಕೌಶಲಗಳನ್ನು ಬಳಸಲು ಇಷ್ಟ ಪಡುವುದಿಲ್ಲ. ತರಗತಿಯು ಆಟವಾಡಲು

ಸೂಕ್ತವಾದ ಜಾಗವಲ್ಲ ಎಂದು ಅವರು ಯೋಚಿಸಬಹುದು. ತರಗತಿಯಲ್ಲಿ ನಾಟಕವಾಡುವುದು ತಪ್ಪಲ್ಲ, ತರಗತಿಯೂ ಸಹ ನಾಟಕವಾಡಲು ಸೂಕ್ತವಾದ ಜಾಗ ಎಂಬ ನಂಬಿಕೆಯನ್ನು ಮೂಡಿಸುವ ಮೂಲಕ ಶಿಕ್ಷಕರು ತರಗತಿಯಲ್ಲಿ ಮಹತ್ವದ ಪರಿವರ್ತನೆ ತರಬಲ್ಲವರಾಗುತ್ತಾರೆ. ಇಂತಹ ನಂಬಿಕೆಗಳನ್ನು ಮೂಡಿಸಲು ಏಕಮಾತ್ರವಾದ ಒಂದು ತಂತ್ರ ಎಂಬುದಿರುವುದಿಲ್ಲ, ನಿಜ. ವಾಸ್ತವಿಕ ಬದುಕಿನ ಬಗೆಗೆ ಸ್ವಯಂಸ್ಫೂರ್ತಿಯಿಂದ ಮಾತನಾಡಲು ಉತ್ತೇಜಿಸುವ ಮೂಲಕ, ಮಕ್ಕಳ ಮಾತುಗಳತ್ತ ಗಮನ ಹರಿಸುವ ಮೂಲಕ, ಸೌಜನ್ಯಪೂರ್ಣವಾಗಿ ವರ್ತಿಸುವ ಮೂಲಕ ಅಂತಹ ತಂತ್ರವನ್ನು ಕ್ರಮೇಣ ರೂಪಿಸಿಕೊಳ್ಳಬಹುದಾಗಿದೆ.

ಎರಡನೆಯದಾಗಿ, ಪ್ರದರ್ಶನಕ್ಕಾಗಿ ಮಾಡುವ ನಾಟಕ ಮತ್ತು ದಿನಬಳಕೆಯಲ್ಲಿ ಮಾಡುವ ನಾಟಕ ಎರಡೂ ಒಂದೇ ಅಲ್ಲ ಎಂಬ ಅಂಶವನ್ನು ನೆನಪಿಡಬೇಕಾದುದು ಬಹಳ ಮುಖ್ಯ. ನಾವೀಗ ಎರಡನೆಯ ಬಗೆಯ ನಾಟಕದ ಬಗೆಗೆ ಮಾತನಾಡುತ್ತಿದ್ದು ಇಲ್ಲಿ ಪೂರ್ವಸಿದ್ಧ ಹಸ್ತಪ್ರತಿ, ಸಂಭಾಷಣೆ, ವೇಷಭೂಷಣ, ತಾಲೀಮು, ಬೆಳಕು, ವಿನ್ಯಾಸ ಮುಂತಾದವು ಅಷ್ಟು ಪ್ರಯೋಜನಕ್ಕೆ ಬರುವುದಿಲ್ಲ. ಅಭಿನಯಿಸಿ ತೋರಿಸಲು ಯಾವುದೇ ಘಟನೆಯ ಒಂದು ಸಂಕ್ಷಿಪ್ತ ನಿರೂಪಣೆಯೇ ಸಾಕಾಗುತ್ತದೆ. ಮಕ್ಕಳಿಗೆ ತಾವು ತಮ್ಮ ದೈನಂದಿನ ಬದುಕಿನಲ್ಲಿ ಕಾಣುವ, ಅನುಭವಿಸುವ ಸಂಗತಿಗಳನ್ನು ಮುಕ್ತವಾಗಿ ಹೇಳಿಕೊಳ್ಳಲು ಸಾಧ್ಯವಾದಲ್ಲಿ ಅವರ ಸ್ವಂತ ಮಾತಿನ ಮೂಲಕವೇ ಅತ್ಯುತ್ತಮ ನಾಟಕೀಯ ಗುಣಮಟ್ಟದ ನಿರೂಪಣೆ ಹೊರಹೊಮ್ಮಬಹುದು. ಒಂದು ಬಸ್ಸು ಹೇಗೆ ನಿಂತಿತು, ಹೇಗೆ ಅದಕ್ಕೆ ಕೆಲವರು ಹತ್ತಿದರು ಮತ್ತೆ ಕೆಲವರು ಇಳಿದರು, ಬಸ್ಸು ಪುನಃ ಹೇಗೆ ಮುಂದಕ್ಕೆ ಸಾಗಿತು, ಬಸ್ಸಿನೊಳಗೆ ಏನಾಗುತ್ತಿದೆ, ಇವೆಲ್ಲ ನಲವತ್ತು ಅಥವಾ ಹೆಚ್ಚು ಮಕ್ಕಳಿರುವ ತರಗತಿಯಲ್ಲಿ ಯಾವುದೇ ಮಗುವಿಗೆ ಅಭಿನಯಿಸಿ ತೋರಿಸಲು ಅತ್ಯುತ್ತಮವಾದ ಕಿರು ನಿರೂಪಣೆಗಳಾಗಿವೆ. ಇದಲ್ಲದೆ, ಶಿಕ್ಷಕರು ಹೇಳಿದ ಅಥವಾ ಓದಿದ ಕಥೆಗಳೂ ನಾಟಕಕ್ಕೆ ಅತ್ಯುತ್ತಮ ಸಾಧನವಾಗಿ ಒದಗ ಬಲ್ಲವು. ಒಂದು ಕಥೆಯಲ್ಲಿ ಕೆಲವೇ ಪಾತ್ರಗಳಿದ್ದಲ್ಲಿ ಐವರು ಮಕ್ಕಳ ಸಣ್ಣ ಗುಂಪುಗಳಲ್ಲಿ ಪ್ರತಿಯೊಂದು ಮಗುವೂ ಪ್ರತ್ಯೇಕವಾಗಿ ಅಭಿನಯಿಸಿ ತೋರಿಸಲಿ ಅಥವಾ ನಾಟಕೀಯ ಪ್ರಸ್ತುತಿಗೆ ಬೇರೆ ಬೇರೆ ಕಥೆಗಳನ್ನು ಆಯ್ಕೆ ಮಾಡಿಕೊಳ್ಳಲಿ. ವಿವಿಧ ಗುಂಪುಗಳ ಮಧ್ಯೆ ಸ್ಪರ್ಧೆ ಏರ್ಪಡಿಸಬೇಕಾದ ಅವಶ್ಯಕತೆ ಇಲ್ಲ. ಅಂತಹ ಪೈಪೋಟಿ ಅನಗತ್ಯವಾದ ಒತ್ತಡಕ್ಕೆ, ಶಿಕ್ಷಕರ ಮೇಲಿನ ಅವಲಂಬನೆಗೆ ದಾರಿ ಮಾಡಿಕೊಡುತ್ತದೆ.

ಸಹಜವಾದ, ಸ್ವಯಂಪ್ರೇರಿತವಾದ ನಾಟಕಾಭಿನಯವನ್ನು ಪ್ರಾರಂಭಿಕ ವಯಸ್ಸಿನಿಂದಲೇ ಬಳಸುವುದರಿಂದ ಓದುವ ಕೌಶಲದ ಅಭಿವೃದ್ಧಿಗೆ ಉತ್ತಮ ತಳಹದಿ ಹಾಕಿಕೊಟ್ಟಂತಾಗುತ್ತದೆ. ನಾಟಕಾಭಿನಯ ಮತ್ತು ಓದುವಿಕೆಗಳ ನಡುವೆ ನೇರ ಸಂಬಂಧ ಇರುವುದಿಲ್ಲವಾದರೂ ಅವೆರಡೂ ಪರಸ್ಪರ ಸಂಬಂಧಿಗಳಾಗಿವೆ. ನಾಟಕವು ಪ್ರಜ್ಞಾಪೂರ್ವಕವಾಗಿ ಪದಗಳನ್ನು, ಶಾರೀರಿಕ ಚಲನೆಗಳನ್ನು (ಸಂಕೇತಗಳು/ಆಂಗಿಕ ಚಲನೆ, ಬಾಗುವುದು ಇತ್ಯಾದಿ) ಸಂಕೇತಗಳನ್ನಾಗಿ ಬಳಸಲು ಒಂದು ವಿಶಿಷ್ಟ ಅವಕಾಶ ನಿರ್ಮಿಸಿಕೊಡುತ್ತದೆ. ಕಥೆ ಹೇಳುವುದರ ಜೊತೆಗೆ ನಾಟಕಾಭಿನಯವು ಮಗು ಸಾಂಕೇತಿಕವಾಗಿ ಆ ಪ್ರಪಂಚದಲ್ಲಿ ಪಾಲ್ಗೊಳ್ಳಲು (ಅಂದರೆ, ಒಬ್ಬ ವ್ಯಕ್ತಿ ಒಂದು ಘಟನೆಯಲ್ಲಿ ನೇರವಾಗಿ ತೊಡಗಿಕೊಂಡಿರದಿದ್ದರೂ ಅದರಲ್ಲಿ ಪಾಲ್ಗೊಳ್ಳಲು) ಅನುವು ಮಾಡಿಕೊಡುತ್ತದೆ. ಇದುವೆ ಒಬ್ಬ ಒಳ್ಳೆಯ ಓದುಗರಿಗೆ

ಇರಬೇಕಾದ ಸಾಮರ್ಥ್ಯವೂ ಆಗಿದೆ. ವಸ್ತುಗಳು ಭೌತಿಕವಾಗಿ ಕಣ್ಮುಂದೆ ಹಾಜರಿರದಿದ್ದರೂ ಅದನ್ನು ನೋಡುವ, ಅದು ಭೌತಿಕವಾಗಿ ಕಣ್ಮುಂದೆಯೇ ಇದೆ ಎಂಬಂತೆ ಅದಕ್ಕೆ ಸ್ಪಂದಿಸುವ ಸಾಮರ್ಥ್ಯ ಓದುಗರಿಗೆ ಅತ್ಯಗತ್ಯ.

**ಶಿಕ್ಷಕರ ಪ್ರತಿಕ್ರಿಯೆ**

ಮಕ್ಕಳು ಶಾಲೆಗೆ ಪ್ರವೇಶಿಸುವ ಹೊತ್ತಿಗೆ ಅವರಲ್ಲಿ ಬಹುತೇಕರು ತಮ್ಮ ಮಾತೃಭಾಷೆಯ ಮೂಲಭೂತ ರಚನೆಯ ಮೇಲೆ ಅದಾಗಲೇ ಅದ್ಭುತವಾದ ಹಿಡಿತವನ್ನು ಸಾಧಿಸಿಕೊಂಡಿರುತ್ತಾರೆ. ಅಸಂಖ್ಯ ವ್ಯವಹಾರಗಳಿಗೆ ಭಾಷೆಯನ್ನು ಬಳಸುವುದು ಹೇಗೆ ಎಂಬುದನ್ನು ಮಾತ್ರವಲ್ಲ, ವಿವಿಧ ಸಂದರ್ಭಗಳಿಗೆ ಮತ್ತು ಕೇಳುಗರಿಗೆ ತಕ್ಕಂತೆ ತಮ್ಮ ಭಾಷೆಯನ್ನು ಹೊಂದಿಸಬೇಕಾದ ಮಹತ್ವವನ್ನು ಸಹ ಚೆನ್ನಾಗಿ ಅರಿತಿರುತ್ತಾರೆ. ಐದು ವರ್ಷದ ಒಂದು ಮಗು ಓರ್ವ ಕೇಳುಗನಾಗಿ ಮಾತನ್ನು ಕ್ರಿಯೆಗೆ ಅನುವಾದಿಸಿಕೊಳ್ಳುವ (ಉದಾಹರಣೆಗೆ, ಒಂದು ಲೋಟ ನೀರು ತಾ ಎಂದು ಕೇಳಿದಾಗ ತರುವುದು, ಬಳಿಕ ಲೋಟವನ್ನು ಯಥಾಸ್ಥಾನದಲ್ಲಿ ಇರಿಸಿ ಬರುವುದು ಇತ್ಯಾದಿ) ಮತ್ತು ಜನಗಳು ಆಡುವ ಮಾತಿನ ಆಧಾರದ ಮೇಲೆ ಅವರ ವ್ಯಕ್ತಿತ್ವವನ್ನು ಹಾಗೂ ಅವರ ನಡುವಿನ ಸಂಬಂಧವನ್ನು ಕುರಿತು ಜಾಣತನದಿಂದ ಊಹೆ ಮಾಡುವ ಸಾಮರ್ಥ್ಯ ಗಳಿಸಿರುತ್ತದೆ. ಸಣ್ಣ ಮಕ್ಕಳು ತಮ್ಮ ದೈನಂದಿನ ಬದುಕಿನಲ್ಲೇ ಇಂತಹ ಸಾಮರ್ಥ್ಯಗಳನ್ನು ಗಳಿಸಿಕೊಳ್ಳುತ್ತಾರಲ್ಲದೇ ಯಾರೂ ಇದನ್ನೆಲ್ಲ 'ಬೋಧಿಸಲು' ಹೋಗುವುದಿಲ್ಲ. ಸುತ್ತಲಿನ ಪರಿಸರದಲ್ಲಿ ಸಂಭವಿಸುವ ಪ್ರತಿಯೊಂದೂ ಮಗುವಿನ ಗಮನದ ಮೂಲಕ ಹಾದು ಬಂದು ಅದರ ಭಾಷಾ ಸಂಪತ್ತಿನ ಭಂಡಾರಕ್ಕೆ ಹೋಗಿ ಸೇರಿಕೊಳ್ಳುತ್ತದೆ.

ನಾವು ಶಿಕ್ಷಕರಾಗಿ ಮಗುವಿನ ಸ್ವಯಾರ್ಜಿತವಾದ ಈ ಸಾಮರ್ಥ್ಯಗಳನ್ನು ಗೌರವಿಸಬೇಕಾಗುತ್ತದೆ. ನಾವು ನಿಜವಾಗಿಯೂ ಬೋಧಿಸುವಂಥದು ಬಹಳ ಕಡಿಮೆಯೇ ಇರುತ್ತದೆ. ಮಗು ಅದಾಗಲೇ ಗಳಿಸಿರುವ ಸಾಮರ್ಥ್ಯವನ್ನು ಇನ್ನಷ್ಟು ಹೆಚ್ಚಿಸಿಕೊಳ್ಳಲು ಅಗತ್ಯವಿರುವ ಸನ್ನಿವೇಶವನ್ನಷ್ಟೇ ನಾವು ಸೃಷ್ಟಿಸಿಕೊಡಬಹುದಾಗಿದೆ. ಇನ್ನು ಮಾತಿನ ವಿಷಯಕ್ಕೆ ಬರುವುದಾದರೆ ಅಂತಹ ವಾತಾವರಣವನ್ನು ಸೃಷ್ಟಿಸಲು ಮಗುವಿನ ಮಾತಿಗೆ ನಾವು ನೀಡುವ ಪ್ರತಿಕ್ರಿಯೆಯ ಬಗೆಗೆ ಎಚ್ಚರದಿಂದ ಇರಬೇಕಾದುದು ಬಹಳ ಮುಖ್ಯವಾದ ಸಂಗತಿಯಾಗಿದೆ. ನಾವು ಪ್ರತಿ ಸಲ ಮಗುವಿನ ಮಾತುಗಳನ್ನು ಕೇಳುತ್ತೇವೆ ಮತ್ತು ಅದಕ್ಕೆ ಪ್ರತಿಕ್ರಿಯಿಸುತ್ತೇವೆ. ಅಂತಹ ಸನ್ನಿವೇಶದಲ್ಲಿ ನಾವು,

1. ಮಗು ಒಂದು ಸಂಗತಿಯನ್ನು ಪೂರ್ತಿಯಾಗಿ ಹೇಳಲು ಅವಕಾಶ ನೀಡಬೇಕಾಗುತ್ತದೆ
2. ಮಗು ಹೇಳಲು ಪ್ರಯತ್ನಿಸುತ್ತಿರುವ ಸಂಗತಿಯ ಬಗೆಗೆ ಆಸಕ್ತಿ ತೋರಬೇಕಾಗುತ್ತದೆ
3. ವ್ಯತಿರಿಕ್ತವಾದುದನ್ನು ಹೇಳುವ ನಮ್ಮ ತವಕವನ್ನು ನಿಯಂತ್ರಿಸಿಕೊಳ್ಳಬೇಕಾಗುತ್ತದೆ
4. ಸುಮ್ಮನೆ 'ಒಳ್ಳೆಯದು', 'ಅಯ್ಯೋ ಅದು ಸರಿಯಲ್ಲ' ಎಂದಷ್ಟೇ ಹೇಳದೆ ಹೆಚ್ಚು ಪದಗಳನ್ನು, ಇನ್ನೂ ಸಮೃದ್ಧವಾದ ವಾಕ್ಯ ರಚನೆಗಳನ್ನು ಬಳಸುವ ಮೂಲಕ ಮಗು ಹೇಳಿದ ಮಾತುಗಳನ್ನು ಇನ್ನೂ ವಿಶದವಾಗಿ ವಿಸ್ತರಿಸುವ ಮೂಲಕ ಪ್ರತಿಕ್ರಿಯಿಸಬೇಕಾಗುತ್ತದೆ. ಉದಾಹರಣೆಗೆ, ಮಗು "ಮರದಲ್ಲಿ ಅಳಿಲು" ಎಂದಾಗ ಶಿಕ್ಷಕರಾದವರು "ಅಳಿಲು ಮರ ಹತ್ತುತ್ತಿದ್ದುದನ್ನು ನೀನು ನೋಡಿದೆಯಾ?" ಎಂದು ಪ್ರತಿಕ್ರಿಯಿಸಬಹುದಾಗಿದೆ.

5. ಹೆಚ್ಚಿನ ಮಾಹಿತಿ ಕೇಳಬಹುದಾಗಿದೆ ಅಥವಾ ಆ ವಿಷಯದ ಹೊಸದೊಂದು ಆಯಾಮದತ್ತ ಮಗುವಿನ ಗಮನ ಸೆಳೆಯಬಹುದಾಗಿದೆ.

ಈ ರೀತಿಯಲ್ಲಿ ಮಕ್ಕಳೊಂದಿಗೆ ಮಾತನಾಡಲು ಸಾಧ್ಯವಾಗಬೇಕಾದರೆ ಸಾಕಷ್ಟು ಅಭ್ಯಾಸ ಬೇಕಾಗುತ್ತದೆ. ಮಾತನಾಡುವಿಕೆಯು ಮಗುವಿನ ಕಲಿಕೆಗೆ ಬಹಳ ಪ್ರಮುಖವಾದ ಸಂಪನ್ಮೂಲವಾಗಿದೆ ಹಾಗೂ ಮಗುವಿನ ಸಾಮಾಜಿಕ ವರ್ತನೆ ಮತ್ತು ವ್ಯಕ್ತಿತ್ವಗಳನ್ನು ರೂಪಿಸುವಲ್ಲಿ ಮಾತು ಅತ್ಯಂತ ಪ್ರಭಾವೀ ಅಂಶವಾಗಿದೆ ಎಂಬ ವಾಸ್ತವಕ್ಕೆ ಸಂವೇದನಾಶೀಲರಾಗಿರಬೇಕಾದುದು ಬಹಳ ಮುಖ್ಯ.

ಅಸಾಧಾರಣವೆಂಬಂತೆ ಮಾತೇ ಆಡದಿರುವ ಮಕ್ಕಳು ಶಿಕ್ಷಕರಿಗೆ ವಿಶೇಷ ಬಗೆಯ ಸಮಸ್ಯೆಯನ್ನು ತಂದೊಡ್ಡಬಹುದು. ನಿಮ್ಮ ತರಗತಿಯ ಕೆಲವು ಮಕ್ಕಳು ಮಾತನಾಡುವುದಕ್ಕಿಂತ ಆಟವಾಡುವುದರಲ್ಲಿ ಅಥವಾ ಏನನ್ನಾದರೂ ಮಾಡುವುದರಲ್ಲಿ ಹೆಚ್ಚಿನ ಆಸಕ್ತಿ ತೋರಿಸುವ ಸಾಧ್ಯತೆಯೂ ಇದೆ. ಆದರೆ ಮಗು ಪ್ರತಿಕ್ರಿಯಿಸುವ, ಪ್ರಶ್ನಿಸುವ ಇಲ್ಲವೇ ತಾನೇನು ಮಾಡುತ್ತಿದ್ದೇನೆ ಎಂದು ಇತರರಿಗೆ ಹೇಳುವ ಆಸಕ್ತಿ ತೋರಿಸದಿದ್ದಲ್ಲಿ ಅಂತಹ ಕೆಲವು ಮಕ್ಕಳತ್ತ ವಿಶೇಷ ಗಮನ ಹರಿಸುವುದು ಅವಶ್ಯವಾಗಿದೆ. ಅಂತಹ ಮಗುವನ್ನು ಮನೆಯಲ್ಲಿ ವಿವಿಧ ರೀತಿಯಲ್ಲಿ ನಿರುತ್ಸಾಹಗೊಳಿಸಿರುವ ಇಲ್ಲವೇ ದಮನ ಮಾಡಿರುವ ಸಾಧ್ಯತೆಯಿದೆ. ಅಂತಹ ಮಗುವಿನ ಮೌನ ಅದರ ವ್ಯಕ್ತಿತ್ವಕ್ಕೆ ಉಂಟು ಮಾಡಿರುವ, ವಿಶೇಷವಾಗಿ ಇತರರೆದುರು ತನ್ನನ್ನು ತಾನು ಗ್ರಹಿಸುವಲ್ಲಿ ಉಂಟಾಗಿರಬಹುದಾದ ಹಾನಿಯ ಒಂದು ಅಭಿವ್ಯಕ್ತಿಯಾಗಿದೆ. ಮನೆಯ ದಮನಕಾರೀ ವಾತಾವರಣ (ಅಥವಾ ಮಗುವಿಗೆ ಬೇರೇನಾದರೂ ತೊಂದರೆಯಿರಬಹುದು-ಕಾಪಿ ಎಡಿಟರ್) ಅತ್ಯಂತ ಪ್ರಬಲವಾದ ಪ್ರಭಾವ ಬೀರುವಂತಹುದಾಗಿದೆ. ಆದರೆ ಅದನ್ನು ಬದಲಾಯಿಸುವುದು ಅಸಾಧ್ಯದ ಸಂಗತಿಯೇನೂ ಅಲ್ಲ. ಎಲ್ಲಿ ತಪ್ಪಾಗಿದೆ ಎಂದರಿತ ಸೂಕ್ಷ್ಮಜ್ಞರಾದ ಓರ್ವ ಶಿಕ್ಷಕರು ಹೊರಜಗತ್ತಿನೊಂದಿಗಿನ ಸಣ್ಣ ಮಕ್ಕಳ ಸಂಬಂಧದಲ್ಲಿ ಪವಾಡ ಸದೃಶ ಬದಲಾವಣೆಗಳನ್ನು ತರಬಲ್ಲರು.

**ಕೆಲವು ಚಟುವಟಿಕೆಗಳು**

ಯಾವುದೇ ಶಿಕ್ಷಕರು ಯಾವುದೇ ತರಗತಿಯಲ್ಲಿ ಕೈಗೊಳ್ಳಬಹುದಾದ ಹತ್ತಾರು ಬಗೆಯ ಸಾಮಾನ್ಯ ಚಟುವಟಿಕೆಗಳಂತೆಯೇ ಇವೂ ಕೂಡ ಅಂತಹ ಕೆಲವು ಸಾಮಾನ್ಯ ಚಟುವಟಿಕೆಗಳಾಗಿವೆ. ಒಂದು ಚಟುವಟಿಕೆಯನ್ನು ಪ್ರತಿ ಸಲವೂ ಅಲ್ಪ ಸ್ವಲ್ಪ ಬದಲಾವಣೆಗಳೊಂದಿಗೆ ಪುನರಾವರ್ತಿಸಲಾಗುತ್ತದೆ, ಮಕ್ಕಳು ಪ್ರತಿ ಚಟುವಟಿಕೆಯನ್ನೂ ಕಳೆದ ಸಲಕ್ಕಿಂತಲೂ ಹೆಚ್ಚಿನ ಉತ್ಸಾಹದಿಂದ ಸ್ವೀಕರಿಸುತ್ತಾರೆ. ಆದ್ದರಿಂದ ಪ್ರತಿ ಚಟುವಟಿಕೆಯನ್ನೂ, ಪ್ರತಿ ಸಲವೂ ಏನಾದರೂ ಹೊಸದನ್ನು ಸೇರಿಸಿ, ಎಷ್ಟು ಸಲ ಬೇಕಾದರೂ ಮಾಡಬಹುದು. ಬದಲಾವಣೆಗಳನ್ನು ದಾಖಲಿಸಿಕೊಳ್ಳುವುದು; ಇದರಿಂದ ನಿಮ್ಮ ನವೀನ ಪ್ರಯೋಗವನ್ನು ನಿಮ್ಮ ಹೊಸ ಸಹೋದ್ಯೋಗಿಗಳಿಗೆ ಪರಿಚಯಿಸಲು ಸಾಧ್ಯವಾಗುತ್ತದೆ. ಇಲ್ಲಿ ವಿವರಿಸಲಾಗಿರುವ ಪ್ರತಿಯೊಂದು ಚಟುವಟಿಕೆಯೂ ಹತ್ತು ಹಲವು ಬಗೆಯ ಬದಲಾವಣೆಗಳಿಗೆ ನಾಂದಿಯಾಗಬಲ್ಲದು.

1. **ನೀವು ಏನನ್ನು ನೋಡಿದಿರಿ?**

ಹಂತ 1: ಒಂದು ಮಗುವನ್ನು ಕರೆದು ತರಗತಿಯಿಂದ ಹೊರಗೆ ಹೋಗಿ ನೋಡಿ ಬಂದು ಅದನ್ನು ತರಗತಿಗೆ ವಿವರಿಸಲು ಹೇಳುವುದು. ಉದಾಹರಣೆಗೆ, ಮಗು ಹಿಂದಿರುಗಿ ಬಂದು ಒಂದು ಲಾರಿಯನ್ನು ನೋಡಿದೆ, ಎರಡು ಅಂಗಡಿಗಳನ್ನು ಹಾಗೂ ಒಂದು ಸೈಕಲ್ಲನ್ನು ಕಂಡೆ ಎಂದು ವರದಿ ಮಾಡಬಹುದು.

ಹಂತ 2: ಈಗ ಉಳಿದ ಮಕ್ಕಳು, ಅವರು ವೃತ್ತಾಕಾರದಲ್ಲಿ ಕುಳಿತಿದ್ದರೆ ಒಳ್ಳೆಯದು, ಒಬ್ಬೊಬ್ಬರಾಗಿ ಅವನಿಗೆ ಒಂದೊಂದು ಪ್ರಶ್ನೆ ಕೇಳುತ್ತಾರೆ. ಉದಾಹರಣೆಗೆ, ಒಂದು ಮಗು "ಸೈಕಲ್ಲಿನ ಹ್ಯಾಂಡಲ್‌ಗೆ ಏನನ್ನು ತೂಗು ಹಾಕಲಾಗಿತ್ತು?" ಎಂದು ಕೇಳಬಹುದು. ಅದಕ್ಕೆ ಮಗು "ಒಂದು ಬ್ಯಾಸ್ಕೆಟ್" ಎಂದು ಉತ್ತರಿಸಬಹುದು. ಮುಂದಿನ ಪ್ರಶ್ನೆ "ಆ ಬ್ಯಾಸ್ಕೇಟ್ ಯಾವ ಬಣ್ಣದ್ದು?" ಎಂಬುದಾಗಿರಬಹುದು.

ಹಂತ 3: ಹೀಗೆ ಒಂದು ಸುತ್ತು ಪ್ರಶ್ನೆ ಪೂರ್ತಿಯಾದ ಮೇಲೆ ಶಿಕ್ಷಕರು ಹೊರಗೆ ಹೋಗಿ ಬಂದಿದ್ದ ಮಗುವಿಗೆ "ಯಾರು ಅತ್ಯುತ್ತಮವಾದ ಪ್ರಶ್ನೆ ಕೇಳಿದರು?" ಎಂದು ಕೇಳಬಹುದು. ಒಂದು ವೇಳೆ ಮಗು "ಶಶಿ ಅತ್ಯುತ್ತಮ ಪ್ರಶ್ನೆ ಕೇಳಿದಳು" ಎಂದು ಉತ್ತರಿಸಿದರೆ ಶಿಕ್ಷಕರು "ಯಾವುದು ಆ ಪ್ರಶ್ನೆ?" ಎಂದು ಕೇಳಬಹುದು.

ಹಂತ 4: ಮುಂದಿನ ಸುತ್ತು ಶಶಿಯಿಂದ ಪ್ರಾರಂಭವಾಗುತ್ತದೆ. ಹಿಂದಿನ ಸಲ ಹೋಗಿ ಬಂದಿದ್ದ ಮಗು ನೋಡಿರದ ಏನಾದರೂ ಒಂದು ವಸ್ತುವನ್ನು ನೋಡಿಕೊಂಡು ಬರಬೇಕು ಎಂದು ಹೇಳಿ ಅವಳನ್ನು ಹೊರಗೆ ಕಳಿಸುವುದು. ಅವಳು ಹಿಂದಿರುಗಿ ಬಂದ ಮೇಲೆ, ಈ ಹಿಂದೆ ಈಗಾಗಲೇ ಕೇಳಿದ ಪ್ರಶ್ನೆಗಳನ್ನು ಬಿಟ್ಟು ಹೊಸ ಪ್ರಶ್ನೆಗಳನ್ನು ಕೇಳಲು ಮಕ್ಕಳಿಗೆ ಸೂಚಿಸುವುದು.

### 2. ಶೋಧನಾ ತಂಡವನ್ನು ಪ್ರಶ್ನಿಸುವುದು

ಶಾಲೆಯ ಸಮೀಪದಲ್ಲಿರುವ ಅಥವಾ ಶಾಲೆಯ ಆವರಣದೊಳಗಿರುವ ಒಂದು ನಿರ್ದಿಷ್ಟ ವಸ್ತು ಅಥವಾ ಸ್ಥಳವನ್ನು ನೋಡಿ ಬರಲು ಐದಾರು ಮಕ್ಕಳಿರುವ ಒಂದು ಸಣ್ಣ ಗುಂಪನ್ನು ಕಳುಹಿಸುವುದು. ಉದಾಹರಣೆಗೆ, ಮರಗಳ ಗುಂಪನ್ನೋ, ಟೀ ಅಂಗಡಿಯನ್ನೋ, ಕುಸಿದ ಸೇತುವೆಯನ್ನೋ ಅಥವಾ ಹಕ್ಕಿ ಗೂಡನ್ನೋ ಪರಿಶೀಲಿಸಿ ಬರಲು ಅವರನ್ನು ಕಳುಹಿಸಬಹುದು. ಅದನ್ನು ಕೂಲಂಕಷವಾಗಿ ಪರಿಶೀಲಿಸಿ ಅದರಲ್ಲಿ ಗಮನಿಸಿದ ಪ್ರತಿಯೊಂದರ ಕುರಿತೂ ತಮ್ಮೊಳಗೇ ಚರ್ಚಿಸಬೇಕೆಂದು ಹೇಳುವುದು. ಶೋಧಕರ ಗುಂಪು ಹೊರ ಹೋದ ಮೇಲೆ ತರಗತಿಯ ಉಳಿದ ಮಕ್ಕಳಿಗೆ ಆ ವಸ್ತುವಿನ ಕುರಿತು ಕೆಲವು ಮಾಹಿತಿಗಳನ್ನು ನೀಡುವುದು. ಉದಾಹರಣೆಗೆ, ಶೋಧಕರು ಒಂದು ಟೀ ಅಂಗಡಿಯನ್ನು ಪರಿಶೀಲಿಸಲು ಹೋಗಿದ್ದಲ್ಲಿ, ಟೀ ಅಂಗಡಿಯಲ್ಲಿ ಲಭ್ಯವಿರುವ ವಸ್ತುಗಳ ಬಗೆಗೆ ತರಗತಿಗೆ ತಿಳಿಸುವುದು. ಆ ಅಂಗಡಿಯನ್ನು ನಡೆಸುವವರಾರು, ಅಲ್ಲಿ ಲಭ್ಯವಿರುವ ವಸ್ತುಗಳು ಎಲ್ಲಿಂದ ಬರುತ್ತವೆ ಇತ್ಯಾದಿ. ಶೋಧಕರ ಗುಂಪು ಹಿಂದಿರುಗಿ ಬಂದಾಗ ಅವರು ಸಹಪಾಠಿಗಳು ಕೇಳುವ ಪ್ರಶ್ನೆಗಳಿಗೆ ಉತ್ತರಿಸಬೇಕಾಗುತ್ತದೆ. ಶಿಕ್ಷಕರೂ ತಮ್ಮ ಪ್ರಶ್ನೆಗಳನ್ನು ಕೇಳಬಹುದು.

ಮತ್ತೊಂದು ಸಲಕ್ಕೆ ಬೇರೊಂದು ಗುಂಪನ್ನು ಕಳುಹಿಸುವುದು.

### 3. ನಾನೇನು ನೋಡಿದೆ ಊಹಿಸಿ

ಒಂದು ಮಗು ಹೊರಗೆ ಹೋಗಿ ಬಾಗಿಲಲ್ಲೋ ಅಥವಾ ತರಗತಿಯಿಂದ ಸ್ವಲ್ಪ ದೂರದಲ್ಲೋ ನಿಂತು ಸುತ್ತಲೂ ಅದರ ಕಣ್ಣಿಗೆ ಬೀಳುವ ನೂರಾರು ವಸ್ತುಗಳ ಪೈಕಿ ಒಂದನ್ನು ಆಯ್ಕೆ ಮಾಡಿಕೊಳ್ಳುತ್ತದೆ (ಮರ, ಎಲೆ, ಅಳಿಲು, ಹಕ್ಕಿ, ತಂತಿಗಳು,

ಕಂಬ, ಹುಲ್ಲು, ಕಲ್ಲು - ಹೀಗೆ ಅದು ಏನಾದರೂ ಆಗಿರಬಹುದು). ಆ ಮಗು ಹಿಂದಿರುಗಿದ ಮೇಲೆ ಅದರ ಮನಸ್ಸಿನಲ್ಲಿ ಇರುವ ವಸ್ತುವಿನ ಬಗ್ಗೆ ಅದು ಕೇವಲ ಒಂದು ವಾಕ್ಯವನ್ನು ಹೇಳುತ್ತದೆ. ಉದಾಹರಣೆಗೆ, "ನಾನು ನೋಡಿದ ವಸ್ತು ಕಂದು ಬಣ್ಣದ್ದು" ಎಂದು ಹೇಳಬಹುದು. ಈಗ ತರಗತಿಯ ಪ್ರತಿಯೊಂದು ಮಗುವಿಗೂ ಆ ವಸ್ತುವಿನ ಕುರಿತು ಹೆಚ್ಚಿನ ಪ್ರಶ್ನೆ ಕೇಳುವ ಮತ್ತು ಅದೇನೆಂದು ಊಹಿಸುವ ಅವಕಾಶ ಸಿಗುತ್ತದೆ. ಉದಾಹರಣೆಗೆ, ಪ್ರಶ್ನೋತ್ತರಗಳು ಹೀಗೆ ನಡೆಯಬಹುದು:

ಮಗು 1: ಅದು ತೆಳ್ಳಗಿದೆಯೇ?

ಉತ್ತರ: ಇಲ್ಲ

ಮಗು 2: ಅದು ಎಷ್ಟು ದೊಡ್ಡದು

ಉತ್ತರ: ಸ್ವಲ್ಪ ದೊಡ್ಡದೇ

ಮಗು 3: ಒಂದು ಕುರ್ಚಿಯಷ್ಟು ದೊಡ್ಡದೇ?

ಉತ್ತರ: ಇಲ್ಲ, ಕುರ್ಚಿಗಿಂತಲೂ ಚಿಕ್ಕದು

ಮಗು 4: ಅದು ತಿರುಗಬಲ್ಲುದೇ?

ಕೊನೆಗೆ ಆ ವಸ್ತುವನ್ನು ಸರಿಯಾಗಿ ಊಹಿಸಿದ ಮೇಲೆ ಕೆಲವು ಮಕ್ಕಳು ತಮ್ಮ ಪ್ರಶ್ನೆಗಳಿಗೆ ದೊರೆತ ಉತ್ತರಗಳಿಗೆ ಆಕ್ಷೇಪ ವ್ಯಕ್ತಪಡಿಸಬಹುದು. ಉದಾಹರಣೆಗೆ, ಯಾರಾದರೂ ಒಬ್ಬರು ಅದು ಕಂದು ಬಣ್ಣದ್ದಲ್ಲ, ಕಪ್ಪು ಮಣ್ಣಿನ ಬಣ್ಣದ್ದು ಎಂದು ಗುರುತಿಸಬಹುದು. ಅಂತಹ ಸಂದರ್ಭದಲ್ಲಿ, ಅರ್ಥಗಳ ನಡುವಿನ ಸೂಕ್ಷ್ಮ ವ್ಯತ್ಯಾಸಗಳನ್ನು ಗುರುತಿಸುವಲ್ಲಿ ಮಕ್ಕಳಿಗೆ ನೆರವು ನೀಡುವ ಶಿಕ್ಷಕರ ಪಾತ್ರ ಬಹಳ ಮುಖ್ಯವಾದುದು.

4. **ಹೇಳಿದ್ದನ್ನು ಮಾಡುವುದು**

ಮಕ್ಕಳಿಗೆ ನಿಮ್ಮ ಮಾತನ್ನು ಕೇಳಿಸಿಕೊಂಡು ನೀವು ಹೇಳಿದಂತೆ ಮಾಡಲು ಸೂಚಿಸುವುದು. ಸರಳವಾದ ಸಂಗತಿಗಳನ್ನು ಮಾಡುವುದರೊಂದಿಗೆ ಪ್ರಾರಂಭಿಸಿ ಇಡೀ ತರಗತಿ ಒಟ್ಟಾಗಿ ಮಾಡಬೇಕೆಂದು ಸೂಚಿಸುವುದು. ಉದಾಹರಣೆಗಳು

"ನಿಮ್ಮ ತಲೆಯನ್ನು ಮುಟ್ಟಿಕೊಳ್ಳಿ"

"ನಿಮ್ಮ ಬಲಗಣ್ಣನ್ನು ಮುಚ್ಚಿರಿ"

"ನಿಮ್ಮ ತಲೆಯನ್ನು ಕೆರೆದುಕೊಳ್ಳಿ"

ತರಗತಿಯನ್ನು ಎರಡು ಗುಂಪುಗಳಾಗಿ ವಿಭಜಿಸುವುದು. ಶಿಕ್ಷಕರು ಮೊದಲ ಗುಂಪಿಗೆ ಸೂಚನೆಗಳನ್ನು ನೀಡುತ್ತಾರೆ ಮತ್ತು ಈ ಗುಂಪಿನ ಮಕ್ಕಳು ಅಂಥದೇ ಸೂಚನೆಗಳನ್ನು ಎರಡನೆಯ ಗುಂಪಿಗೆ ನೀಡುತ್ತಾರೆ. ಕ್ರಮೇಣ ಸೂಚನೆಗಳನ್ನು ಜಟಿಲಗೊಳಿಸುವುದು. ಉದಾಹರಣೆಗೆ:

"ಎರಡೂ ಕೈಗಳಿಂದ ನಿಮ್ಮ ತಲೆಯನ್ನು ಮುಟ್ಟಿಕೊಳ್ಳಿ, ಆಮೇಲೆ ನಿಮ್ಮ ಬಲಗೈಯಿಂದ ನಿಮ್ಮ ಬಲಗಿವಿಯನ್ನು ಮುಟ್ಟಿಕೊಳ್ಳಿ"

"ಎರಡೂ ಕಣ್ಣುಗಳನ್ನು ಮುಚ್ಚಿರಿ, ನಿಮ್ಮ ಪಕ್ಕದಲ್ಲಿರುವವನನ್ನು ಮುಟ್ಟಿ ನಿಮಗೆ ಅವನ ಎಡಗೈ ಕೊಡಲು ಸೂಚಿಸಿ"

ಒಂದು ಗುಂಪಿನ ಮಕ್ಕಳು ಮತ್ತೊಂದು ಗುಂಪಿಗೆ ಸೂಚನೆಗಳನ್ನು ನೀಡುವಾಗ ಅವರು ತಾವು ಕೇಳಿಸಿಕೊಂಡ ಪ್ರತಿಯೊಂದನ್ನೂ ಪುನರುಚ್ಚರಿಸಬೇಕಾದ ಅವಶ್ಯಕತೆಯಿಲ್ಲ. ಬದಲಾಗಿ ಹೊಸ ಸೂಚನೆಗಳನ್ನು ರೂಪಿಸುವಂತೆ ಅವರನ್ನು ಉತ್ತೇಜಿಸುವುದು.

5. **ಹೋಲಿಸುವುದು**

ಒಂದೇ ರೀತಿ ಕಾಣುವ ವಸ್ತುಗಳನ್ನು ಸಂಗ್ರಹಿಸಿ ಜೊತೆ ಮಾಡುವುದು. ಉದಾಹರಣೆಗೆ, ಎರಡು ಅಥವಾ ಹೆಚ್ಚು ಮರಗಳ ಎಲೆಗಳು, ವಿವಿಧ ಸಸ್ಯಗಳ ಹೂವುಗಳು, ಕಲ್ಲುಗಳು, ವಿವಿಧ ಆಕಾರಗಳಲ್ಲಿ ಕತ್ತರಿಸಿದ ಕಾಗದದ ತುಂಡುಗಳು ಇತ್ಯಾದಿ. ಆ ಜೊತೆಗೂಡಿಸಿದ ವಸ್ತುಗಳ ಪೈಕಿ ಒಂದಕ್ಕೆ ನೀವು ನೀಡುವ ವಿವರಣೆಯನ್ನು ಕೇಳಲು ಮಕ್ಕಳಿಗೆ ಸೂಚಿಸುವುದು ಆ ವಿವರಣೆಯ ಆಧಾರದ ಮೇಲೆ ಮಕ್ಕಳು ನೀವು ಯಾವುದರ ಕುರಿತು ಮಾತನಾಡುತ್ತಿದ್ದೀರಿ ಎಂಬುದನ್ನು ತಿಳಿಸುವುದು. ಉದಾಹರಣೆಗೆ;

"ನಾನು ಮೃದುವಾಗಿರುವ, ಉದ್ದವಾಗಿರುವ, ಅಂಚುಗಳಿರುವ ಒಂದು ಎಲೆಯ ಬಗ್ಗೆ ಯೋಚಿಸುತ್ತಿದ್ದೇನೆ".

ಈ ಚಟುವಟಿಕೆಯನ್ನು ಕೆಲವು ಸಲ ಮಾಡಿದ ನಂತರ ಮಕ್ಕಳಿಗೆ ಒಬ್ಬೊಬ್ಬರಾಗಿ ಬಂದು ವಸ್ತುಗಳನ್ನು ಆಯ್ಕೆ ಮಾಡಿ ವಿವರಿಸಲು ಸೂಚಿಸುವುದು. ಪ್ರತಿ ಸಲ ಈ ಚಟುವಟಿಕೆ ಮಾಡುವಾಗಲೂ ವಸ್ತುಗಳನ್ನು ನೀವು ಬದಲಾಯಿಸುವುದು. ಪ್ರತಿ ಸಲವೂ ಸೂಕ್ಷ್ಮವಾದ ಲಕ್ಷಣಗಳನ್ನು ಗುರುತಿಸುವುದು.

6. **ಅದನ್ನು ನೀನು ಹೇಗೆ ಮಾಡಿದೆ?**

ಕಾಗದ, ಬಟ್ಟೆ ಅಥವಾ ಯಾವುದೇ ಲಭ್ಯವಿರುವ ಸಾಮಗ್ರಿಗಳಿಂದ ವಸ್ತುಗಳನ್ನು ತಯಾರಿಸುವುದು ಹೇಗೆ ಎಂದು ಮಕ್ಕಳಿಗೆ ಕಲಿಸುವುದು. ಒಂದು ಕಾಗದದ ದೋಣಿ, ಒಂದು ಗೊಂಬೆ ಅಥವಾ ಬೊಂಬೆ ತೊಟ್ಟಿಲು ಮಾಡಿದರೂ ಸರಿ. ನೀವು ಏನು ಮಾಡುತ್ತಿದ್ದೀರೋ ಅದರ ಬಗೆಗೆ ಅದನ್ನು ಮಾಡುತ್ತಿರುವಾಗಲೇ ವಿಸ್ತೃತವಾಗಿ ವಿವರಿಸುವುದು. ಮಕ್ಕಳೂ ಸಹ ಸೂಕ್ತ ಸಾಮಗ್ರಿಗಳನ್ನು ಕೈಲಿ ಇರಿಸಿಕೊಂಡು ನಿಮ್ಮನ್ನು ಅನುಸರಿಸುವುದು. ಉದಾಹರಣೆಗೆ, ಕಾಗದದ ದೋಣಿ

ಮಾಡುವುದು ಹೇಗೆ ಎಂದು ನೀವು ತೋರಿಸಿಕೊಡುತ್ತಿದ್ದರೆ ಪ್ರತಿಯೊಂದು ಹಂತವನ್ನೂ ವಿವರಿಸುವುದು: "ಕಾಗದವನ್ನು ಅರ್ಧಕ್ಕೆ ಮಡಚಿರಿ. ಮತ್ತೆ ಅರ್ಧಕ್ಕೆ ಮಡಚಿರಿ. ಈಗ ಒಂದು ಮೂಲೆಯನ್ನು ಹಿಂದಕ್ಕೆ ತಿರುಗಿಸಿ ಮಡಚಿ, ಉಳಿದ ಮೂರು ಮೂಲೆಗಳನ್ನು ಮತ್ತೊಂದು ದಿಕ್ಕಿಗೆ ಹಿಂದಕ್ಕೆ ಮಡಚಿ. ನಂತರ ಅದರ ಮಧ್ಯದಲ್ಲಿ ಬೆರಳು ಹಾಕಿ ಮೇಲಕ್ಕೆತ್ತಿರಿ,..." ಅದನ್ನು ಮಾಡುವುದು ಹೇಗೆ ಎಂದು ಮಕ್ಕಳು ಕಲಿತ ಮೇಲೆ, ಮಾಡುವ ಪ್ರಕ್ರಿಯೆಯನ್ನು ವಿವರಿಸಲು ಹೇಳುವುದು. ಮುಂದಿನ ಸಲ ವಿವಿಧ ಗುಂಪುಗಳಿಗೆ ವಿವಿಧ ವಸ್ತುಗಳನ್ನು ಕೊಟ್ಟು ಒಂದು ವಸ್ತುವನ್ನು ತಯಾರಿಸುವುದು ಹೇಗೆಂದು ಒಂದು ಗುಂಪು ಮತ್ತೊಂದು ಗುಂಪಿಗೆ ವಿವರಿಸುವಂತೆ ತಿಳಿಸುವುದು.

**7. ಅಭಿನಯಿಸಿ ತೋರಿಸುವುದು**

ಹಂತ 1: ಮಕ್ಕಳು ಪ್ರತಿನಿತ್ಯ ನೋಡುವಂತಹ ಹತ್ತು ಹದಿನೈದು ವಿವಿಧ ಸಾಮಾನ್ಯ ಕೆಲಸಗಳನ್ನು ಆಯ್ಕೆ ಮಾಡಿಕೊಳ್ಳುವುದು . ಉದಾಹರಣೆಗೆ: ಕಸ ಗುಡಿಸುವುದು, ಬಾಳೆಹಣ್ಣಿನ ಸಿಪ್ಪೆ ಬಿಡಿಸುವುದು, ಪಾತ್ರೆ ತೊಳೆಯುವುದು, ತರಕಾರಿ ಹೆಚ್ಚುವುದು, ನೀರು ತುಂಬಿದ ಎರಡು ಬಕೆಟ್ ಹಿಡಿದುಕೊಂಡು ನಡೆಯುವುದು ಇತ್ಯಾದಿ. ಪ್ರತಿಯೊಂದು ಮಗುವಿನ ಹತ್ತಿರ ಹೋಗಿ ಅವರ ಕಿವಿಯಲ್ಲಿ ಅವರಿಗೆ ಯಾವ ಕೆಲಸ ನೀಡಲಾಗಿದೆ ಎಂದು ತಿಳಿಸುವುದು. ಆಮೇಲೆ ಪ್ರತಿಯೊಂದು ಮಗುವೂ ಮುಂದೆ ಬಂದು ತನ್ನ ಕ್ರಿಯೆಯನ್ನು ಅಭಿನಯ ಮಾಡಿ ತೋರಿಸುವುದು. ಉಳಿದವರು ಅದು ಯಾವ ಕೆಲಸ ಎಂಬುದನ್ನು ಊಹಿಸುವುದು.

ಹಂತ 2: ನಾಲ್ಕೈದು ಮಕ್ಕಳು ಸೇರಿ ಮಾಡಬಹುದಾದ ಒಂದು ಸಂಕೀರ್ಣ ಚಟುವಟಿಕೆಯನ್ನು ಆಯ್ಕೆ ಮಾಡಿಕೊಳ್ಳುವುದು. ಮಕ್ಕಳನ್ನು ತಂಡಗಳನ್ನಾಗಿ ಮಾಡಿ ಪ್ರತಿ ತಂಡವೂ ಸಾಮೂಹಿಕವಾಗಿ ಭಾಗವಹಿಸುವಂತೆ ಮಾಡುವುದು. ಓದಬಲ್ಲ ದೊಡ್ಡ ಮಕ್ಕಳಿಗೆ ಅವರು ಏನು ಮಾಡಬೇಕು ಎಂದು ತಿಳಿಸಲು ಓದಲು ಚೀಟಿಗಳನ್ನು ಕೊಡುವುದು.

**8. ಚಿತ್ರವನ್ನು ವಿಶ್ಲೇಷಿಸುವುದು**

ಐದೈದು ವಿದ್ಯಾರ್ಥಿಗಳಿರುವಂತೆ ಗುಂಪುಗಳನ್ನು ಮಾಡಿ ಒಂದೊಂದು ಗುಂಪಿಗೂ ಒಂದೊಂದು ಚಿತ್ರ ನೀಡುವುದು. ಕಾರ್ಯಚಟುವಟಿಕೆ ಪ್ರಾರಂಭವಾಗುವ ಮುನ್ನ ಶಿಕ್ಷಕರು ಪ್ರತಿ ಚಿತ್ರವನ್ನು ಜಾಗರೂಕತೆಯಿಂದ ಪರೀಕ್ಷಿಸಿ ಈ ಹಿಂದೆ ನೀಡಲಾದ ಪ್ರತಿಕ್ರಿಯೆಯ ಹಂತಗಳಿಗೆ ಅನುಗುಣವಾಗಿ ಪ್ರಶ್ನೆಗಳನ್ನು ಸಿದ್ಧಪಡಿಸಿಕೊಳ್ಳಬೇಕು. ಆಗ ಶಿಕ್ಷಕರಿಗೆ ಪ್ರತಿ ಗುಂಪಿಗೂ ಕೇಳಲು ಐದು ಪ್ರಶ್ನೆಗಳಿರುತ್ತವೆ. ಮಕ್ಕಳಿಗೆ ಚಿತ್ರವನ್ನು ಪರೀಕ್ಷಿಸಿ ತಮ್ಮ ತಮ್ಮಲ್ಲೇ ಚರ್ಚಿಸಿಕೊಳ್ಳಲು ಕನಿಷ್ಠ ಪಕ್ಷ ಐದು ನಿಮಿಷಗಳಷ್ಟು ಕಾಲಾವಕಾಶವನ್ನಾದರೂ ನೀಡಬೇಕು. ಮಕ್ಕಳ ಗುಂಪುಗಳಿಗೆ 1 ರಿಂದ 5 ರವರೆಗಿನ ಸಂಖ್ಯೆಗಳನ್ನು ನೀಡಿ ಆ ಐದು ಪ್ರಶ್ನೆಗಳನ್ನು ಕೇಳುವುದು. ಪ್ರಶ್ನೆಗಳನ್ನು ಅನೌಪಚಾರಿಕ, ಪ್ರತ್ಯೇಕ ಮಾತುಕತೆಯಲ್ಲಿ ಕೂಡ ಬಳಸಿಕೊಳ್ಳಬಹುದು. ಈ ಚಟುವಟಿಕೆಯನ್ನು ಕೆಲವು ಸಲ ಮಾಡಿದ ನಂತರ ಪ್ರಶ್ನೆಗಳನ್ನು ಕೇಳುವುದು ಶಿಕ್ಷಕರಿಗೆ ಸರಳವಾಗುತ್ತದೆ ಆದರೆ ಪ್ರಾರಂಭದಲ್ಲಿ, ಮೊದಲೇ ಸಿದ್ಧ ಮಾಡಿಟ್ಟುಕೊಳ್ಳುವುದು ಉತ್ತಮ.

9. ಸರಿಯಾದ ಚಿತ್ರವನ್ನು ಊಹಿಸುವುದು

ಶಿಕ್ಷಕರ ಬಳಿ ಸಾಕಷ್ಟು ಮಕ್ಕಳ ಸಾಹಿತ್ಯ ಪುಸ್ತಕಗಳು, ನಿರ್ದಿಷ್ಟವಾಗಿ ಹಲವಾರು ಚಿತ್ರಕಥಾ ಪುಸ್ತಕಗಳು ಇದ್ದಾಗ ಈ ಚಟುವಟಿಕೆಯನ್ನು ಹಮ್ಮಿಕೊಳ್ಳಲು ಸಾಧ್ಯ (ಸೂಚಿಸಲಾದ ಪುಸ್ತಕಗಳಿಗೆ ಅನುಬಂಧ 1 ನ್ನು ನೋಡಿ). ಮಕ್ಕಳನ್ನು ಜೋಡಿ ಮಾಡಿ ಎದುರುಬದಿರಾಗಿ ಕೂರಿಸುವುದು ಹಾಗೆ ಕುಳಿತ ನಂತರ ಒಂದು ಸಾಲಿನ ಮಕ್ಕಳಿಗೆ ಚಿತ್ರವಿರುವ ಪುಸ್ತಕಗಳನ್ನು ಕೊಡುವುದು. ಅವರು ಅವುಗಳಲ್ಲಿರುವ ಚಿತ್ರಗಳನ್ನು ನೋಡಿ ಒಂದು ಚಿತ್ರವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಈಗ ಆ ಚಿತ್ರದ ಬಗ್ಗೆ ಎದುರು ಸಾಲಿನಲ್ಲಿ ಕುಳಿತ ಮಗುವಿಗೆ ಪ್ರತಿಯೊಂದು ಮಗುವೂ ತಾನು ಆಯ್ಕೆ ಮಾಡಿದ ಚಿತ್ರವನ್ನು ತನ್ನೆದುರಿಗೆ ಕುಳಿತಿರುವ ಮತ್ತೊಂದು ಮಗುವಿಗೆ ತೋರಿಸದೆ ವಿವರಿಸತೊಡಗುತ್ತದೆ. ವಿವರಣೆ ಮುಗಿದ ಮೇಲೆ ವಿವರಣೆ ಕೇಳುತ್ತಿದ್ದ ಮಗುವಿಗೆ ಪುಸ್ತಕವನ್ನು ಹಸ್ತಾಂತರಿಸಿ ಆ ವಿವರಣೆಗೆ ಹೊಂದುವ ಚಿತ್ರವನ್ನು ಹುಡುಕಲು ಆ ಮಗುವಿಗೆ ಸೂಚಿಸುವುದು. ಹೀಗೆ ಎರಡೂ ಸಾಲುಗಳು ಪುಸ್ತಕವನ್ನು ಬದಲಾಯಿಸಿಕೊಂಡು ಚಟುವಟಿಕೆ ಮುಂದುವರಿಸಬೇಕು. ಈ ಚಟುವಟಿಕೆಯನ್ನು ಸ್ವಲ್ಪ ಬದಲಾವಣೆ ಮಾಡಿಕೊಂಡು ಗೋಡೆಯ ಮೇಲೆ ನೇತು ಹಾಕಿರುವ ಚಿತ್ರದೊಂದಿಗೂ ಮಾಡಲು ಸಾಧ್ಯವಿದೆ.

10. ಕಥೆ ಕಟ್ಟುವುದು

ಮುಚ್ಚಳ, ಹರಿದ ಬಟ್ಟೆಯ ತುಂಡುಗಳು, ಒಡೆದ ಬಳೆ ಚೂರುಗಳು , ಖಾಲಿ ಟೂತ್ ಪೇಸ್ಟ್ ಟ್ಯೂಬ್‌ಗಳು, ಸಣ್ಣ ಕಲ್ಲುಗಳು, ಎಲೆಗಳು, ಡಬ್ಬದ ಮುಚ್ಚಳಗಳು ಮುಂತಾದ ವಿಭಿನ್ನ ವಸ್ತುಗಳನ್ನು ಸಂಗ್ರಹಿಸುವುದು. ಇಂತಹ ಐದಾರು ವಸ್ತುಗಳನ್ನು ಒಂದೆಡೆ ಸೇರಿಸಿ ಐದಾರು ಮಕ್ಕಳಿರುವ ಗುಂಪಿಗೆ ಹಂಚುವುದು. ಪ್ರತಿಯೊಂದು ಗುಂಪೂ ಸೂಕ್ತ ಜಾಗವನ್ನು ಹುಡುಕಿ ಕೂತು ತಮಗೆ ಕೊಟ್ಟಿರುವ ವಸ್ತುಗಳ ಬಗೆಗೆ ತಮ್ಮ ತಮ್ಮಲ್ಲಿ ಮಾತನಾಡಿಕೊಳ್ಳಲಿ. ಆನಂತರ ಎಲ್ಲರೂ ಸೇರಿ ಹದಿನೈದಿಪ್ಪತ್ತು ನಿಮಿಷಗಳಲ್ಲಿ ಒಂದು ಕತೆ ಕಟ್ಟುವುದು ಇದರ ಉದ್ದೇಶವಾಗಿದೆ. ಎಲ್ಲಾ ಗುಂಪುಗಳೂ ತರಗತಿಗೆ ಹಿಂದಿರುಗಿದ ಮೇಲೆ ಪ್ರತಿಯೊಂದು ಗುಂಪಿನ ಪರವಾಗಿ ಒಬ್ಬ ನಿರೂಪಕಿ ಕತೆ ಹೇಳುವುದು. ಇತರ ಗುಂಪಿನ ಸದಸ್ಯರು ಕತೆಯನ್ನು ಸರಿಯಾಗಿ ಹೇಳಲಿಲ್ಲ ಎಂದರೆ ಕತೆಯನ್ನು ಬದಲಾಯಿಸಿ ಹೇಳಲು ಅವಕಾಶ ಮಾಡಿಕೊಡುವುದು

ಈ ಚಟುವಟಿಕೆಯ ಯಶಸ್ಸು ಆ ಮಕ್ಕಳು ಎಷ್ಟರ ಮಟ್ಟಿಗೆ ಕತೆ ಕೇಳುವ ಅನುಭವವನ್ನು ಹೊಂದಿದ್ದಾರೆ ಮತ್ತು ಅವರಿಗೆ ಕತೆ ಕಟ್ಟುವ ಅಭ್ಯಾಸವಿದೆಯೇ ಎಂಬುದರ ಮೇಲೆ ನಿಂತಿದೆ. ಯಾವುದೇ ಒಂದು ಸಾಮಾನ್ಯ ಅನುಭವವನ್ನು ಒಂದು ಚಿಕ್ಕ ಚೊಕ್ಕ ಕಥೆಯನ್ನಾಗಿ ನಿರೂಪಿಸಬಹುದಾಗಿದೆ. ಅದೇ ರೀತಿ ಯಾವುದೇ ಒಂದು ಸಾಮಾನ್ಯ ವಸ್ತು ಒಂದು ನಿರೂಪಣೆಯ ಪ್ರಾರಂಭಿಕ ಬಿಂದುವಾಗಬಹುದಾಗಿದೆ. ಒಬ್ಬ ಶಿಕ್ಷಕರಾಗಿ ನೀವು ಈ ಬಗೆಯ ಕಲ್ಪನೆಯನ್ನು ತೋರಿಸಿಕೊಟ್ಟಾಗ ನಿಮ್ಮ ಮಕ್ಕಳು ಸುಲಭವಾಗಿ ಅದನ್ನು ರೂಢಿಸಿಕೊಳ್ಳುತ್ತವೆ.

11. ನೀವು ಎಲ್ಲಿ ವಾಸಿಸುತ್ತಿದ್ದೀರಿ?

ಮಕ್ಕಳನ್ನು ಎದುರು ಬದುರಾಗಿ ಎರಡು ಸಾಲುಗಳಲ್ಲಿ ಕೂರಿಸುವುದು; ಒಂದು ಸಾಲು 'ಹೇಳುವವರದ್ದು', ಮತ್ತೊಂದು ಸಾಲು 'ಕೇಳುವವರದ್ದು'. ಪ್ರತಿಯೊಂದು ಹೇಳುವ ಮಗು ಕೇಳುವವರಿಗೆ ತಮ್ಮ ಮನೆಗೆ ಹೋಗುವ ದಾರಿಯನ್ನು ವಿವರಿಸಬೇಕು. ಕೇಳುವವರು ಸರಿಯಾಗಿ ಅರ್ಥ ಮಾಡಿಕೊಳ್ಳುವ ಸಲುವಾಗಿ ಎಷ್ಟು ಪ್ರಶ್ನೆಗಳನ್ನಾದರೂ ಕೇಳಬಹುದು. ಉದಾಹರಣೆಗೆ,

ಕೇಳುವವರು: ನಿಮ್ಮ ಮನೆಗೆ ಹೋಗುವುದು ಹೇಗೆ?

ಹೇಳುವ ಮಗು : 'ನೇರವಾಗಿ ಹೋಗಿ ಆಮೇಲೆ ತಿರುಗು'

ಕೇಳುವವರು: 'ನೇರವಾಗಿ ಎಷ್ಟು ದೂರ ಹೋಗಬೇಕು?'

ಹೇಳುವ ಮಗು: 'ಕಸದ ತೊಟ್ಟಿ ಸಿಗುವವರೆಗೂ ಹೋಗು ಆಮೇಲೆ ತಿರುಗು'

ಕೇಳುವವರು: 'ಎಡಕ್ಕೋ ಅಥವಾ ಬಲಕ್ಕೋ?'

ಹೇಳುವ ಮಗು: 'ಬಲಕ್ಕೆ.. ಇಲ್ಲ, ಇಲ್ಲ, ಸ್ವಲ್ಪ ಇರು.., (ಸ್ವಲ್ಪ ಆಲೋಚಿಸಿ) ಎಡಕ್ಕೆ'

ಹೀಗೆ ಎಲ್ಲಾ ಹೇಳುವವರ ಅವಕಾಶ ಮುಗಿದ ಮೇಲೆ ಕೇಳುವವರು ಹೇಳುವವರಾಗುತ್ತಾರೆ ಮೊದಲಿನಂತೆ ಚಟುವಟಿಕೆ ಪ್ರಾರಂಭವಾಗುತ್ತದೆ.

**ನಾವು ಏನನ್ನು ಸಾಧಿಸುತ್ತೇವೆ?**

ಇಲ್ಲಿ ವಿವರಿಸಲಾದ ಎಲ್ಲಾ ಚಟುವಟಿಕೆಗಳೂ ಸುತ್ತಲಿನ ಜಗತ್ತಿನೊಂದಿಗೆ ವ್ಯವಹರಿಸಲು ಅಗತ್ಯವಿರುವ ಮಗುವಿನ ಭಾಷಾ ಬಳಕೆಯ ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶ ಹೊಂದಿವೆ. ಮಾತೇ ನಮ್ಮ ಉದ್ದೇಶ ಎಂದಾದ ಮೇಲೆ ನಾವು ಮಗುವಿನ ಬೆಳವಣಿಗೆಗೆ ಸಂಬಂಧಿಸಿದ ಇನ್ನೂ ವ್ಯಾಪಕವಾದ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುತ್ತೇವೆ. ಪ್ರಶ್ನಿಸುವುದನ್ನು ಹೊಸ ಮಾಹಿತಿ ಪಡೆಯುವ ಒಂದು ವಿಧಾನವಾಗಿ ಬಳಸುವ ಸಾಮರ್ಥ್ಯ, ಸೀಮಿತ ಮಾಹಿತಿಯ ಆಧಾರದ ಮೇಲೆ ಜಾಣತನದ ಊಹೆಗಳನ್ನು ಮಾಡುವ ಸಾಮರ್ಥ್ಯ ಮತ್ತು ಸೃಜನಶೀಲ ವ್ಯಾಖ್ಯಾನಗಳನ್ನು ಮಾಡುವ ಸಾಮರ್ಥ್ಯಗಳನ್ನು ಈ ಕ್ಷೇತ್ರವು ಒಳಗೊಂಡಿರುತ್ತದೆ. ಕೆಲವು ಚಟುವಟಿಕೆಗಳು ಮಕ್ಕಳಿಗೆ ಪದಗಳು ಹಾಗೂ ಚಿತ್ರಗಳು- ಹೀಗೆ ಎರಡೆರಡು ಮಾಧ್ಯಮಗಳಲ್ಲಿ ಕೆಲಸ ಮಾಡುವ ಅವಕಾಶವನ್ನು ಒದಗಿಸುತ್ತವೆ. ಇಂತಹ ಅವಕಾಶವು ಅಮೂರ್ತವಾದ ಹಾಗೂ ವೈವಿಧ್ಯಮಯವಾದ ಸಂಕೇತಗಳೊಂದಿಗೆ ಸಂಪರ್ಕ ಹೊಂದುವ ಸಾಮರ್ಥ್ಯಕ್ಕೆ ಒಂದು ತಳಹದಿಯನ್ನು ನಿರ್ಮಿಸಿಕೊಡುತ್ತವೆ . ಉತ್ತಮ ಓದುಗರಾಗಿ ಬೆಳೆಯಲು ಮಕ್ಕಳಿಗೆ ಇದು ಅಪಾರ ಕೊಡುಗೆ ನೀಡುತ್ತದೆ.

ಈ ಚಟುವಟಿಕೆಗಳು, ಮತ್ತು ಇದೇ ರೀತಿಯಲ್ಲಿ ನೀವು ಸ್ವಂತವಾಗಿ ವಿನ್ಯಾಸಗೊಳಿಸುವ ಚಟುವಟಿಕೆಗಳು, ಓದುವ ಮತ್ತು ಬರೆಯುವ ಕುರಿತಾದ ಮುಂದಿನ ಎರಡು ಅಧ್ಯಾಯಗಳಲ್ಲಿ ವಿವರಿಸಲಾಗಿರುವ ಚಟುವಟಿಕೆಗಳೊಂದಿಗೆ ಹಲವಾರು

ಬಗೆಯ ಸಂಬಂಧಗಳನ್ನು ಹೊಂದಲು ನೆರವಾಗುತ್ತವೆ . ಹೆಚ್ಚು ಸಂಕೀರ್ಣಮಯವಾದ ಈ ಕೌಶಲಗಳು ಮಗುವಿನ ಭಾಷಾ ಸಾಮರ್ಥ್ಯವನ್ನು ನಿಸ್ಸಂಶಯವಾಗಿ ವಿಸ್ತರಿಸಬಲ್ಲವು. ಆದರೆ ಮಾತು ಎಂಬುದು ಜೀವನದುದ್ದಕ್ಕೂ ಸುತ್ತಲ ಜಗತ್ತಿನೊಂದಿಗೆ ವ್ಯವಹರಿಸಲು ಒಂದು ಪ್ರಾಥಮಿಕ ಮಾಧ್ಯಮವಾಗಿರುತ್ತದೆ. ಹಾಗಾಗಿ ಮಗು ಓದುವುದನ್ನು ಮತ್ತು ಬರೆಯುವುದನ್ನು ಕಲಿತ ಮೇಲೂ ಮಾತನ್ನು ಆಧರಿಸಿದ ಚಟುವಟಿಕೆಗಳು ಮುಂದುವರಿಯಬೇಕು.

---

**ಅಧ್ಯಾಯ 3**

**ಓದುವುದು**

ಚಿಕ್ಕ ಮಕ್ಕಳ ಶಿಕ್ಷಕರು ಎದುರಿಸಲೇ ಬೇಕಾದ ಸವಾಲುಗಳ ಪೈಕಿ ಮಗುವಿಗೆ ಓದುವುದನ್ನು ಕಲಿಸುವುದು ಪ್ರಾಯಶಃ ಅತ್ಯಂತ ಕಷ್ಟಕರವಾದ ಮತ್ತು ಅಷ್ಟೇ ರೋಮಾಂಚಕವಾದ ಸವಾಲಾಗಿದೆ. ಅತ್ಯಂತ ಕಷ್ಟಕರವಾದುದು ಏಕೆಂದರೆ, ಓದುವುದು ಒಂದು ಸಾಮಾನ್ಯ ಕೌಶಲವಲ್ಲ; ಅದು ಹಲವಾರು ಕೌಶಲಗಳ ಹಾಗೂ ಸಂಜ್ಞಾನಾತ್ಮಕ ಸಾಮರ್ಥ್ಯಗಳ ಒಂದು ಸಂಯೋಜನೆಯಾಗಿದೆ. ಓದುವುದು ಹೇಗೆ ಎಂದು ಕಲಿಸಲು ಯಾವುದೇ ನಿರ್ದಿಷ್ಟವಾದ ಸಂಪೂರ್ಣ ಒಪ್ಪಿತ ಒಂದು ಮಾದರಿ ಇಲ್ಲ. ಪ್ರತಿಯೊಂದು ವಿಧಾನಕ್ಕೂ ತನ್ನದೇ ಆದ ಮಿತಿಗಳಿರುತ್ತವೆ. ಒಂದು ನೀಡಲಾದ ಸಂದರ್ಭದಲ್ಲಿ

ಶಿಕ್ಷಕರಾದವರು ಏನು ಮಾಡಬೇಕು ಎಂದು ಕರಾರುವಾಕ್ಕಾಗಿ ಯಾರೊಬ್ಬರೂ ಹೇಳಿಕೊಡಲಾರರು. ಇಷ್ಟಾಗಿಯೂ ಓದುವುದನ್ನು ಕಲಿಸುವುದು ಅತ್ಯಂತ ರೋಮಾಂಚಕಾರಿಯಾದ ಸಂಗತಿಯೂ ಆಗಿದೆ. ಅದು ರೋಮಾಂಚನಕಾರಿ ಏಕೆಂದರೆ ಮಗುವಿನ ಬದುಕಿನ ಬಹಳಷ್ಟು ಸಂಗತಿಗಳು ಇದನ್ನು ಅವಲಂಬಿಸಿವೆ. ಒಮ್ಮೆ ಮಗುವಿಗೆ ಓದುವುದನ್ನು ಹಾಗೂ ಪುಸ್ತಕಗಳನ್ನು ಯಶಸ್ವಿಯಾಗಿ ಪರಿಚಯಿಸಿಕೊಟ್ಟ ಮೇಲೆ ಮುಂದೆ ಮಗು ಏನನ್ನೆಲ್ಲ ಸಾಧಿಸಬಹುದು ಎಂಬುದಕ್ಕೆ ಇತಿಮಿತಿಗಳೇ ಇರುವುದಿಲ್ಲ.

ಆದ್ದರಿಂದ ಓದನ್ನು 'ಯಶಸ್ವಿ' ಮಾರ್ಗದಲ್ಲಿ ಕಲಿಸುವುದು ಹೇಗೆ ಎಂಬುದು ಇಲ್ಲಿ ಮುಖ್ಯವಾದ ಸಂಗತಿಯಾಗಿದೆ. ಒಮ್ಮೆ ನಮ್ಮ ಸುತ್ತಲೂ ಅವಲೋಕಿಸಿದಾಗ ಈ ವಿಷಯಕ್ಕೆ ಸಂಬಂಧಿಸಿದಂತೆ ಯಾವ ಮಟ್ಟದ ವೈಫಲ್ಯ ಉಂಟಾಗಿದೆ ಎಂದು ಅರೆಕ್ಷಣ ನಾವು ಯೋಚಿಸಬೇಕಾಗಿದೆ. ಪ್ರತಿವರ್ಷ ಲಕ್ಷಾಂತರ ಮಕ್ಕಳು ಓದುವುದನ್ನು ಕಲಿಯುತ್ತಾರೆ ಆದರೆ ಅವರಲ್ಲಿ ಬಹುತೇಕರು ದೀರ್ಘಕಾಲ ಉಳಿಯಬಹುದಾದ ಓದುವ ಕೌಶಲವನ್ನು ಗಳಿಸಿಕೊಳ್ಳಲು ವಿಫಲರಾಗುತ್ತಾರೆ. ಬಹಳಷ್ಟು ಮಕ್ಕಳು ಶಾಲಾ ಪರೀಕ್ಷೆ ಪಾಸಾಗಲು ಬೇಕಾಗುವಷ್ಟು ಓದನ್ನು ಹೇಗೋ ಕಲಿತುಕೊಳ್ಳುತ್ತಾರೆ, ಆದರೆ ಓದುವುದರಲ್ಲಿ ಯಾವುದೇ ಆಸಕ್ತಿ ಬೆಳೆಸಿಕೊಳ್ಳುವುದಿಲ್ಲ. ಬಹಳಷ್ಟು ಮಕ್ಕಳು ಚೆನ್ನಾಗಿ ಓದುವುದನ್ನು ಕಲಿತಂತೆ ತೋರಿದರೂ ವಾಸ್ತವವಾಗಿ ಅವರ ಗ್ರಹಣ ಸಾಮರ್ಥ್ಯ ತೀರಾ ಕಡಿಮೆಯಿರುತ್ತದೆ. ಬಹು ಮಟ್ಟಿಗೆ ಓದುವ ಕೌಶಲವನ್ನು ಕಲಿಸುವ ಅತ್ಯಂತ ಕಳಪೆ ಬೋಧನಾ ವಿಧಾನವೇ ಈ ವೈಫಲ್ಯಗಳಿಗೆ ಕಾರಣ ಎನ್ನಬಹುದು.

ಯಾವ ಶಿಕ್ಷಕರಿಗೂ ಮಗುವಿನ ಸರ್ವಾಂಗೀಣ ಬೆಳವಣಿಗೆಯಲ್ಲಿ ಸರಿಯಾಗಿ ಓದುವ ಕೌಶಲದ ಪಾತ್ರ ಎಷ್ಟು ಮಹತ್ವದ್ದು ಎಂಬುದನ್ನು ತಿಳಿಸಿಕೊಡಬೇಕಾದ ಅವಶ್ಯಕತೆಯಿಲ್ಲ. ಆದಾಗ್ಯೂ, ಎಲ್ಲೋ ಕೆಲವು ಶಿಕ್ಷಕರಿಗಷ್ಟೇ 'ಸರಿಯಾಗಿ ಓದುವ ಕೌಶಲ' ಎಂದರೇನು ಮತ್ತು ಅದನ್ನು ಅಭಿವೃದ್ಧಿಪಡಿಸುವುದು ಹೇಗೆ ಎಂಬುದು ಯಥಾರ್ಥವಾಗಿ ತಿಳಿದಿರುತ್ತದೆ. 'ಸರಿಯಾಗಿ ಓದುವ ಕೌಶಲಗಳು' ಎಂಬ ಈ ಅಧ್ಯಾಯದಲ್ಲಿ ಓದುವುದನ್ನು ನಾವು ನೋಡುವ ರೀತಿ ಎಂದರೆ, *ಲಿಖಿತ ಅಥವಾ ಮುದ್ರಿಸಲಾದ ಭಾಷೆಯಿಂದ ಅರ್ಥಗಳನ್ನು ಕಲ್ಪಿಸಿಕೊಳ್ಳಲು ಅನುವು ಮಾಡಿಕೊಡುವ ಕೌಶಲಗಳು* ಎಂದರ್ಥ. ಮಗುವಿಗೆ ತಾನು ಏನು ಓದುತ್ತಿದ್ದೇನೆ ಎಂಬುದರ ತಿಳಿವಳಿಕೆ ಆಗದ ಹೊರತು ಅಥವಾ ಅದನ್ನು ತನಗೆ ಈಗಾಗಲೇ ಗೊತ್ತಿರುವ ಮತ್ತೊಂದರೊಂದಿಗೆ ಸಂಬಂಧ ಕಲ್ಪಿಸಿಕೊಳ್ಳದ ಹೊರತು, ಅದರ ಓದುವಿಕೆಯನ್ನು ಸರಿಯಾದ ಓದುವಿಕೆ ಎನ್ನಲು ಬರುವುದಿಲ್ಲ. ಹಾಗಾಗಿ ನಮ್ಮ ಪರಿಭಾಷೆಯಲ್ಲಿ ಓದುವುದನ್ನು ಲಿಖಿತ ಪದಗಳಲ್ಲಿ ಅರ್ಥಗಳನ್ನು ಹುಡುಕುವ ಪ್ರಕ್ರಿಯೆ ಎಂದು ನಾವು ವ್ಯಾಖ್ಯಾನಿಸುತ್ತೇವೆ.

**ವಸ್ತುಸ್ಥಿತಿ ಹೇಗಿದೆಯೋ ಹಾಗೆ**

ಒಮ್ಮೆ ನಾವು ಈ ಮೇಲಿನ ವ್ಯಾಖ್ಯಾನದೊಂದಿಗೆ ಕಾರ್ಯಪ್ರವೃತ್ತರಾಗಲು ನಿರ್ಧರಿಸಿಕೊಂಡಲ್ಲಿ, ಶಿಶುವಿಹಾರಗಳಲ್ಲಿ ಹಾಗೂ ಪ್ರಾಥಮಿಕ ಹಂತದ ಶಾಲೆಗಳಲ್ಲಿ ದೈನಂದಿನವಾಗಿ ನಡೆಯುವ ಲೆಕ್ಕವಿಲ್ಲದಷ್ಟು ಕಾರ್ಯಚಟುವಟಿಕೆಗಳು ನಮಗೆ

ತೃಪ್ತಿಕರವೆನಿಸುವುದಿಲ್ಲ. ಉದಾಹರಣೆಗೆ, ಓದುವುದನ್ನು ಕಲಿಸುವುದಕ್ಕೆ ವರ್ಣಮಾಲೆಯನ್ನು ಉರುಹೊಡೆಯುವುದು ಅಥವಾ ಕತೆಯ ಶಬ್ದಶಃ ಸಾಮೂಹಿಕ ವಾಚನ ಮುಂತಾದವನ್ನು ನಮ್ಮ ವ್ಯಾಖ್ಯಾನವು ತೃಪ್ತಿಕರ ವಿಧಾನಗಳೆಂದು ಕರೆಯವುದಿಲ್ಲ. ಈ ಚಟುವಟಿಕೆಗಳನ್ನು ಮಾಡುವಾಗ ಮಕ್ಕಳು ಲಿಖಿತ ಭಾಷೆಯೊಂದಿಗೆ ಯಾವುದೇ ಅರ್ಥಸಂಬಂಧವನ್ನು ಕಾಣಲಾರರು. ವರ್ಣಮಾಲೆಯ ಪ್ರತ್ಯೇಕ ಅಕ್ಷರಗಳಿಗೆ ಯಾವುದೇ ಅರ್ಥ ಇರುವುದಿಲ್ಲ. ಒಂದು ಕಥೆಯಲ್ಲಿನ ಪದಗಳನ್ನು ಒಂದೊಂದಾಗಿ ಓದಿದಾಗ ಸ್ವಲ್ಪಮಟ್ಟಿಗೆ ಅರ್ಥ ದಕ್ಕುತ್ತದೆ. ಆದರೆ ಕಥೆಯನ್ನು ಗ್ರಹಿಸುವ ವಿಧಾನ ಇದಲ್ಲ.

ಇಂತಹ ಚಟುವಟಿಕೆಗಳು ತಕ್ಷಣದಲ್ಲಿ ಅರ್ಥಪೂರ್ಣ ಎನಿಸದಿರಬಹುದು ಆದರೆ ಭವಿಷ್ಯದಲ್ಲಿ ಅರ್ಥಪೂರ್ಣವಾದ ಓದುವಿಕೆಗೆ ಇದು ಅಡಿಪಾಯವನ್ನು ಹಾಕಿಕೊಡಬಹುದು ಎಂದು ಕೆಲವರು ಹೇಳುತ್ತಾರೆ. ಪ್ರಾಯಶಃ ಈ ವಾದದಲ್ಲಿ ಸತ್ಯ ಇದ್ದರೂ ಇರಬಹುದು. ಆದಾಗ್ಯೂ ಪ್ರತಿಯೊಂದು ಮಗುವೂ ಅರ್ಥಪೂರ್ಣವಾಗಿ ಓದುವ ಅವಕಾಶ ಪಡೆಯುವವರೆಗೂ ಎಲ್ಲಾ ಮಕ್ಕಳೂ ದೀರ್ಘಕಾಲದವರೆಗೆ ಶಾಲೆಯಲ್ಲಿ ಇದ್ದಾಗಲಷ್ಟೇ ಈ ಸತ್ಯ ಅನ್ವಯವಾಗುತ್ತದೆ. ಒಂದು ಪದವನ್ನು ಹತ್ತಾರು ಸಲ ಉರು ಹೊಡೆಯುವುದು, ಅಕ್ಷರವನ್ನು ಕಾಪಿ ಮಾಡುವುದು, ಪ್ರತ್ಯೇಕ ಪದಗಳನ್ನು ಉಚ್ಚರಿಸುತ್ತಾ ಕೂರುವುದು ಇವೇ ಮುಂತಾದ ಕಸರತ್ತುಗಳಿಂದ ಪೂರ್ತಿಯಾಗಿ ಹತಾಶರಾದ ಮಕ್ಕಳ ಕಥೆಯೇನು? ತಕ್ಷಣವೇ ಫಲ ನೀಡಬಲ್ಲ ಚಟುವಟಿಕೆಗಳನ್ನು ಮಾತ್ರ ಮಕ್ಕಳು ಇಷ್ಟ ಪಡುತ್ತಾರೆ ಎಂದು ನಾವೆಲ್ಲರೂ ಬಲ್ಲೆವು. ಒಂದು ಚಟುವಟಿಕೆಯ ಫಲ ಎಲ್ಲೋ ದೂರದ ಭವಿಷ್ಯದಲ್ಲಿದೆ ಎಂಬ ಭರವಸೆ ಇದ್ದಾಗ ಎಲ್ಲೋ ಕೆಲವು ಮಕ್ಕಳು ಅಂತಹ ಚಟುವಟಿಕೆಯಲ್ಲಿ ಆಸಕ್ತಿ ತಳೆಯಬಲ್ಲರು. ಎಷ್ಟೋ ಮಕ್ಕಳಿಗೆ ಶಾಲೆಯಲ್ಲೇ ಉಳಿಯಬಲ್ಲ ಅವಕಾಶವನ್ನು ಭವಿಷ್ಯವು ನೀಡುವುದಿಲ್ಲ. ಪ್ರಾರಂಭದಲ್ಲೇ ಉಂಟಾಗುವ ಹತಾಶೆ, ವೈಫಲ್ಯಗಳು, ಜೊತೆಗೆ ಇನ್ನೂ ಹಲವು ಸಂಗತಿಗಳು ಅವರು ಶಾಲೆಯಿಂದ ನಿರ್ಗಮಿಸುವಂತೆ ಮಾಡುತ್ತವೆ.

ಆದ್ದರಿಂದ ಇಲ್ಲಿ ನಮಗೆ ಎದುರಾಗುವ ಮೂಲಭೂತ ಪ್ರಶ್ನೆ ಎಂದರೆ: “ಓದುವಿಕೆಯ ಪ್ರಾಥಮಿಕ ಬೋಧನೆಯನ್ನು ಅರ್ಥಪೂರ್ಣವಾಗಿಸುವುದು ಹೇಗೆ?” ಈ ನಿಟ್ಟಿನಲ್ಲಿ ಶಿಕ್ಷಕರು ಕೈಗೊಳ್ಳಬಹುದಾದ ಕ್ರಮಗಳನ್ನು ಮುಂದಿನ ಪುಟಗಳಲ್ಲಿ ವಿವರಿಸಲಾಗಿದೆ. ಹಳೆಯ ವಿಧಾನಗಳೇ ಅಭ್ಯಾಸವಾಗಿ ಹೋದವರಿಗೆ ಇದರಲ್ಲಿನ ಕೆಲವು ಅಂಶಗಳು ವಿಚಿತ್ರವಾಗಿ, ಅಸಾಧ್ಯವಾಗಿ ತೋರಬಹುದು. ಖಂಡಿತವಾಗಿಯೂ, ಹಳೆಯ ವಿಧಾನಗಳು ಕೆಲಸ ಮಾಡುತ್ತಿದ್ದರೆ ಅಡ್ಡಿಯಿಲ್ಲ, ಆಗ ನಮಗೆ ಹೊಸ ವಿಧಾನಗಳ ಅವಶ್ಯಕತೆ ಇರುವುದಿಲ್ಲ. ನಾವು ಹೊಸ ವಿಧಾನಗಳನ್ನು ಸುಮ್ಮನೆ ಬಳಸಿದರೆ ಸಾಲದು, ನಮಗೆ ಸಂಪೂರ್ಣ ಹೊಸ ದೃಷ್ಟಿಕೋನದ ಅವಶ್ಯಕತೆ ಇದೆ. ಏಕೆಂದರೆ ಹಳೆಯ ವಿಧಾನಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ.

**ಪುಸ್ತಕಗಳೊಂದಿಗೆ ಪ್ರಾರಂಭಿಸುವುದು**

ಫ್ಲಾಶ್ ಕಾರ್ಡುಗಳು, ಚಾರ್ಟುಗಳು ಅಥವಾ ಮರದ ಅಕ್ಷರಗಳಿಗಿಂತ, ಪುಸ್ತಕಗಳೊಂದಿಗೆ ಪ್ರಾರಂಭಿಸುವುದು ಬಹಳ ಮುಖ್ಯ. ಏಕೆಂದರೆ ಅಂತಿಮವಾಗಿ ಮಕ್ಕಳು ಪುಸ್ತಕಗಳನ್ನು ಓದಬೇಕು ಎಂಬುದು ನಮ್ಮ ಆಶಯ. ಕಾರ್ಡುಗಳು,

ಚಾರ್ಟುಗಳು ಮುಂತಾದ ಇತರ ಸಾಮಗ್ರಿಗಳು ಆಗೊಮ್ಮೆ, ಈಗೊಮ್ಮೆ ಉಪಯುಕ್ತವಾಗಬಹುದು. ಆದರೆ ಓದುವ ವಿಷಯದಲ್ಲಿ ಪುಸ್ತಕಗಳು ಸೃಷ್ಟಿಸಬಲ್ಲಂತಹ ಪ್ರಬಲವಾದ, ಸುಸ್ಥಿರವಾದ ಉಮೇದನ್ನು ಅವು ಸೃಷ್ಟಿಸಲಾರವು. ಅಂತಹ ಸಾಮಗ್ರಿಗಳ ಮೇಲೆ ಮಗು ಪ್ರಾವೀಣ್ಯ ಗಳಿಸಿದರೂ ಓದುವುದನ್ನು ಸಾಧಿಸಿಕೊಂಡ ವಿಷಯದಲ್ಲಿ ಪುಸ್ತಕದ ಓದಿನ ಸಾಮರ್ಥ್ಯ ನೀಡಬಲ್ಲಂತಹ ತೃಪ್ತಿಯನ್ನು ಅವು ನೀಡಲಾರವು. ನಾವು ಯಾವ ತರಹದ ಪುಸ್ತಕಗಳ ಕುರಿತು ಮಾತನಾಡುತ್ತಿದ್ದೇವೆ ಮತ್ತು ಅದರಿಂದ ನಾವು ಏನು ಮಾಡಲಿದ್ದೇವೆ ಎಂಬುದು ಮೊದಲು ನಮಗೆ ಸ್ಪಷ್ಟವಾಗಿರಬೇಕು. ಓದುವ ಸೂಚನೆಗಳ ತಳಹದಿಯನ್ನು ರೂಪಿಸುವ ಪುಸ್ತಕಗಳ ಕುರಿತೇ ಹಿಂದಿನ ಅಧ್ಯಾಯವಾದ ಮಾತು ಸಂದರ್ಭದಲ್ಲಿ ಉಲ್ಲೇಖಿಸಿರುವ ಪುಸ್ತಕಗಳು. ಅಂತಹ ಪುಸ್ತಕಗಳ ಒಂದು ಪಟ್ಟಿಯನ್ನು ಅನುಬಂಧ 1 ರಲ್ಲಿ ನೀಡಲಾಗಿದೆ. ನೀವು ಅಂತಹ ಇಪ್ಪತ್ತು ಮಕ್ಕಳ ಸಾಹಿತ್ಯದ ಪುಸ್ತಕಗಳನ್ನು ಕೊಳ್ಳಬಲ್ಲಿರಾದಲ್ಲಿ ನೀವು ನಿಮ್ಮ ಮಕ್ಕಳ ಗುಂಪಿಗೆ ಹೊಸ ಬಗೆಯಲ್ಲಿ ಓದುವ ಸೂಚನೆಯನ್ನು ನೀಡಲು ಸಜ್ಜಾಗುವಿರಿ. ನೀವು ಖರೀದಿಸಬಲ್ಲ ಈ ಇಪ್ಪತ್ತು ಪುಸ್ತಕಗಳ ಜೊತೆಗೆ ನಿಮ್ಮದೇ ಆದ ಕೆಲವು ಪುಸ್ತಕಗಳನ್ನೂ ನೀವು ಮಾಡಿಕೊಳ್ಳಬಹುದು. ಸ್ಪಷ್ಟ ಕೈಬರಹದಲ್ಲಿ ಬರೆದ (ಮಕ್ಕಳೂ ಬರೆಯಬಹುದಾದ) ಚಿತ್ರಗಳು ಅಥವಾ ರೇಖಾ ಚಿತ್ರಗಳಿರುವ ಯಾವುದೇ ಒಳ್ಳೆಯ ಕಥೆ ನಿಮ್ಮ ಪುಸ್ತಕ ಸಂಗ್ರಹದ ಶಾಶ್ವತ ಭಾಗವಾಗಬಹುದು. ಅದೇ ರೀತಿ, ಆಟವಾಡುವಾಗ ಮಕ್ಕಳು ಹಾಡಬಹುದಾದ ಪದ್ಯಗಳು, ಹಾಡುಗಳು ಹಾಗೂ ಪ್ರಾಸಗೀತೆಗಳ ಸಂಗ್ರಹವನ್ನೂ ಸಹ ನೀವು ಮಾಡಿಕೊಳ್ಳಬಹುದು.

**ಮಕ್ಕಳಿಗೆ ಪುಸ್ತಕವನ್ನು ಓದುವುದು**

ಯಾವಾಗಲೂ ಮಕ್ಕಳು ನಿಮ್ಮ ಸುತ್ತ ಗುಂಪಾಗಿ ನೆಲದ ಮೇಲೆ ಕುಳಿತುಕೊಳ್ಳುವಂತೆ ಮತ್ತು ಆ ಗುಂಪಿನಲ್ಲಿ ಇಪ್ಪತ್ತಕ್ಕಿಂತ ಹೆಚ್ಚು ಮಕ್ಕಳು ಇಲ್ಲದಿರುವಂತೆ ಖಾತರಿಪಡಿಸಿಕೊಳ್ಳುವುದು. ಒಂದು ಗುಂಪು ನಿಮ್ಮ ಸುತ್ತ ಕೂತಾಗ ತರಗತಿಯ ಇತರ ಮಕ್ಕಳು ಏನಾದರೂ ಚಟುವಟಿಕೆಯಲ್ಲಿ ತೊಡಗಿರುವಂತೆ ಮಾಡಬೇಕು. ನಿಮ್ಮ ಸುತ್ತ ಕುಳಿತಿರುವ ಗುಂಪಿನ ಮಕ್ಕಳಿಗೆ ನೀವು ಓದುವಾಗ ಮತ್ತು ಪುಟ ತಿರುಗಿಸುವಾಗ ಪ್ರತಿಯೊಂದು ಮಗುವಿಗೂ ಆ ಪುಸ್ತಕ ಕಾಣುವಂತಿರಬೇಕು. ಓದುವಾಗ ನೀವು ಏನು ಬರೆದಿದೆಯೋ ಅದನ್ನು ಸುಮ್ಮನೆ ಓದುತ್ತಿಲ್ಲ ಬದಲಾಗಿ ನಿಮ್ಮದೇ ನುಡಿಗಟ್ಟಿಗೆ ಅದನ್ನು ಪರಿವರ್ತಿಸಿಕೊಳ್ಳುತ್ತಿರುವಿರಿ ಎಂಬುದನ್ನು ಖಾತರಿಪಡಿಸಿಕೊಂಡು ಓದಬೇಕು ನಿಮ್ಮ ಬಳಿ ಕಥೆ ಹೇಳುವ ಯಾವುದಾದರೂ ವಿಷಯವನ್ನು ವಿವರವಾಗಿ ತಿಳಿಸುವ ಪುಸ್ತಕ ಇರಬಹುದು. ಉದ್ದನೆಯ ಕಥೆಯನ್ನು ಸುಮ್ಮನೆ ಓದುವುದರಿಂದ ಪ್ರಯೋಜನವಿಲ್ಲ. ನಿಮಗೆ ಕಥೆ ಗೊತ್ತಿರಬೇಕು, ಆಗ ಅದನ್ನು ನಿಮ್ಮದೇ ಮಾತುಗಳಿಂದ ಕಿರಿದುಗೊಳಿಸಲು ಸಾಧ್ಯವಾಗುತ್ತದೆ. ಹೀಗಲ್ಲದೇ ಒಂದು ಪುಟದಲ್ಲಿ ಬರೆಯಲಾದ ಪಠ್ಯವು ಕೇವಲ ಒಂದು ಅಥವಾ ಎರಡು ಸಾಲುಗಳಿದ್ದಲ್ಲಿ, ಆಗ ಬೇಕಾದರೆ ನೀವು ವಿವರಗಳನ್ನು ಸೇರಿಸಿ ಕಥೆಯನ್ನು ವಿಸ್ತರಿಸಬಹುದು. ಹಾಗೆಯೇ ಚಿತ್ರದಲ್ಲಿ ತೋರಿಸಲಾಗಿರುವ ವಿವರಗಳನ್ನು ಎತ್ತಿ ತೋರಿಸುತ್ತಾ ಅವುಗಳ ಬಗ್ಗೆ ಶಾಂತ ರೀತಿಯಲ್ಲಿ ಮಾತನಾಡುವುದೂ ಬಹಳ ಮುಖ್ಯ.

**ಓದುವುದು ಎಂದರೇನು?**

ಓದಲು ಬರದವರಿಗೆ ಓದು ಎನ್ನುವುದು ಒಂದು ನಿಗೂಢ ರಹಸ್ಯವಾಗಿದೆ. ಒಂದು ಮಗು ಓದುವುದನ್ನು ಕಲಿತಾಗ ಅಸಲಿಗೆ ಏನಾಗುತ್ತದೆ ಎಂಬುದು ಇಪ್ಪತ್ತು ವರ್ಷಗಳ ಹಿಂದೆ ತಜ್ಞ ಪರಿಣತರಿಗೂ ಗೊತ್ತಿರಲಿಲ್ಲ. ತಮ್ಮ ಅನುಭವ ಮತ್ತು ಸಂಪ್ರದಾಯದ ಆಧಾರದ ಮೇಲೆ ಶಿಕ್ಷಕರು ವರ್ಣಮಾಲೆಯ ವಿಧಾನ, 'ನೋಡಿ ಹೇಳುವ ವಿಧಾನ, 'ಪದ'ದ ವಿಧಾನ ಇವೇ ಮುಂತಾದ ನಿರ್ದಿಷ್ಟ 'ವಿಧಾನ'ಗಳನ್ನು ವಿಕಾಸಗೊಳಿಸಿದರು. ಪ್ರಾರಂಭದಲ್ಲಿ ವರ್ಣಚಿತ್ರದ ಘಟಕಗಳಿಗೆ ಅನುಗುಣವಾಗಿ ಈ ವಿಧಾನಗಳನ್ನು ಹೆಸರಿಸಿ ಮಗುವಿಗೆ ಓದುವ ಸಾಮಗ್ರಿಯಾಗಿ ನೀಡಲಾಗುತ್ತಿತ್ತು. ಈ 'ವಿಧಾನ'ಗಳಲ್ಲಿ ಯಾವ ಒಂದು ವಿಧಾನವೂ ಸಹ ಓದುವ ಪ್ರಕ್ರಿಯೆಯ ಜ್ಞಾನವನ್ನು ಆಧರಿಸಿರಲಿಲ್ಲ. ಆದಾಗ್ಯೂ ಈ 'ವಿಧಾನ'ಗಳು ಇಂದಿಗೂ ಜನಪ್ರಿಯ ವಿಧಾನಗಳಾಗೇ ಮುಂದುವರಿದಿವೆ.

ದೃಶ್ಯ ಸಂಕೇತಗಳ (sampling of graphic) ಮಾದರಿಯನ್ನು ಓದು ಒಳಗೊಂಡಿದೆ ಎಂಬುದು ಈಗ ನಮಗೆ ತಿಳಿದಿದೆ. ನಮ್ಮ ಕಣ್ಣುಗಳು ಅಕ್ಷರಗಳ ಆಕಾರ, ವಿರಾಮ ಚಿಹ್ನೆಗಳು, ಪದಗಳಲ್ಲಿ ಅಕ್ಷರಗಳ ಸಂಯೋಜನೆ, ಪದಗಳ ನಡುವಿನ ಅಂತರ ಮುಂತಾದವುಗಳನ್ನು ಅವಲೋಕಿಸುವಾಗ ನಮ್ಮ ಮನಸ್ಸಿಗೆ ಈ ಎಲ್ಲ ರೇಖಾಚಿತ್ರದ ವಿವರಗಳನ್ನು ನಿರ್ವಹಿಸಬೇಕಾದ ಅವಶ್ಯಕತೆ ಇರುವುದಿಲ್ಲ. ಹಾಗೇನಾದರೂ ಮಾಡುವಂತಿದ್ದರೆ, ಮಿದುಳಿಗೆ ಮಾಹಿತಿಯ ಪ್ರತ್ಯೇಕ ತುಣುಕುಗಳನ್ನು ಸಂಸ್ಕರಿಸುವ ಸಾಮರ್ಥ್ಯದ ವಿಪರೀತ ಹೊರೆಯಾಗಿ, ನಮ್ಮ ಸಾಮಾನ್ಯ ಓದಿನ ವೇಗ ಅಸಾಧ್ಯವಾಗುತ್ತಿತ್ತು. ಇದುವೇ ಸಾಂಪ್ರದಾಯಿಕ ವಿಧಾನಗಳನ್ನು ಬಳಸಿ ಓದುವುದನ್ನು ಕಲಿಯುವ ಬಹಳಷ್ಟು ಮಕ್ಕಳಿಗೆ ಆಗುವುದು. ಅವರು ಪ್ರತಿಯೊಂದು ಪದವನ್ನೂ ಸಣ್ಣ ಘಟಕಗಳನ್ನಾಗಿ ಒಡೆಯುತ್ತಾರೆ, ಹೀಗೆ ಮಾಡಿ ಪದಗಳ ಅರ್ಥವನ್ನು ಸಂಸ್ಕರಿಸಲು ಬೌದ್ಧಿಕ ಸಾಮರ್ಥ್ಯದ ಮೇಲೆ ವೃಥಾ ಹೊರೆ ಹೇರಲಾಗುತ್ತದೆ. ಒಬ್ಬ ಸಮರ್ಥ ಓದುಗನ ಕಣ್ಣುಗಳು ಪಠ್ಯದಲ್ಲಿ ಲಭ್ಯವಿರುವ ಬರಹದ ಮಾಹಿತಿಯನ್ನು ಜಾಗರೂಕತೆಯಿಂದ ಆಯ್ಕೆ ಮಾಡಿಕೊಂಡು ಗ್ರಹಿಕೆಯನ್ನು ಸೀಮಿತಗೊಳಿಸಿಕೊಳ್ಳುವ ಮೂಲಕ ಈ ಬಗೆಯ ಹೊರೆಯನ್ನು ನಿವಾರಿಸಿಕೊಳ್ಳುತ್ತದೆ. ಅಂತಹ ಓದುಗರು ಒಂದು ಅಕ್ಷರದ ಪೂರ್ಣ ರಚನೆಯತ್ತ ಅಥವಾ ಒಂದು ಪದದ ಎಲ್ಲಾ ಅಕ್ಷರಗಳತ್ತ ಅಥವಾ ಒಂದು ವಾಕ್ಯದ ಎಲ್ಲಾ ಪದಗಳತ್ತ ಪೂರ್ತಿಯಾಗಿ ಗಮನ ಹರಿಸಲು ಹೋಗುವುದಿಲ್ಲ. ಅವನು ಓದುತ್ತಾ ಹೋದಂತೆ ಅವರ ಕಣ್ಗಳು ಬರಹದ ವಿವರಗಳ ಒಂದು ಸಣ್ಣ ಭಾಗವನ್ನಷ್ಟೇ ಗ್ರಹಿಸುತ್ತವೆ. ಉಳಿದುದನ್ನು ಅವರು ಜಾಣ್ಮೆಯಿಂದ ಕಲ್ಪಿಸಿಕೊಳ್ಳುವ ಮೂಲಕ ಅಥವಾ ಅಕ್ಷರಗಳ ಆಕಾರದೊಂದಿಗಿನ, ಪದಗಳು, ಅರ್ಥಗಳು, ಅವುಗಳ ಸಂಯೋಜನೆಗಳು ಮತ್ತು ಲೋಕಜ್ಞಾನದೊಂದಿಗಿನ ಹಿಂದಿನ ಪರಿಚಯದ ಆಧಾರದ ಮೇಲೆ ಊಹಿಸಿಕೊಳ್ಳುವ ಮೂಲಕ ಭರ್ತಿ ಮಾಡಿಕೊಳ್ಳುತ್ತಾರೆ.

ಓದುವುದು ಒಂದು ತನಗೇ ತಾನೇ ಪ್ರತ್ಯೇಕವಾದ ವರ್ತನೆಯಲ್ಲ. ಅದು (1) ಗ್ರಾಫೋಫೋನೆಮಿಕ್ (ಅಕ್ಷರ ಮತ್ತು ಅದರ ಧ್ವನಿಯ ಹೊಂದಾಣಿಕೆ) ಸುಳಿವು ಅಥವಾ ಓದಿಗೆ ಸಂಬಂಧಿಸಿದ ಅಕ್ಷರಗಳ ಆಕಾರ ಮತ್ತು ಅದನ್ನನುಸರಿಸಿದ ಧ್ವನಿಗಳಿಗೆ (2) ವಾಕ್ಯ ರಚನೆಯ ಸುಳಿವುಗಳು ಅಥವಾ ಪದಕ್ರಮ (ವಿಶೇಷಣಗಳಾದ ಮೇಲೆ ನಾಮಪದ ಬರುತ್ತದೆ ಮುಂತಾದವು) ಮತ್ತು (3) ಲಾಕ್ಷಣಿಕಾರ್ಥ ಅಥವಾ ಪದಗಳ ಅರ್ಥ ಎಂಬ ಯಾವುದೇ ಭಾಷಾ ಬಳಕೆಯು ಒಳಗೊಂಡಿರುವ ಎಲ್ಲಾ ಮೂರು ಬಗೆಯ ಸುಳಿಹುಗಳ ಏಕಕಾಲಿಕ ಪ್ರಕ್ರಿಯೆಯನ್ನು ಒಳಗೊಂಡಿರುತ್ತದೆ. ಭಾಷೆಯನ್ನು ಅಭ್ಯಾಸ ಬಲದಿಂದ ಬಳಸುವ ನಾವು ಎಲ್ಲಾ ಮೂರು ವಿಧದ ಸುಳಿಹುಗಳಿಗೆ ಸಂಬಂಧಿಸಿದಂತೆ ಕೆಲವು ನಿರೀಕ್ಷೆಗಳನ್ನು ಬೆಳಸಿಕೊಂಡಿರುತ್ತೇವೆ. ಈ ನಿರೀಕ್ಷೆಯೇ

ದೃಶ್ಯ ರೂಪದಲ್ಲಿ ನೀಡಲಾಗಿರುವ ಸಂಕೇತಗಳನ್ನು ತ್ವರಿತ ಗತಿಯಲ್ಲಿ ಅವಲೋಕಿಸುವಾಗ ನಮ್ಮ ಕಣ್ಣುಗಳು ನಿರ್ಲಕ್ಷಿಸಿದುದನ್ನು ಕಲ್ಪಿಸಿಕೊಳ್ಳುವ ಮೂಲಕವೋ ಅಥವಾ ಜಾಣ್ಮೆಯಿಂದ ಊಹಿಸಿಕೊಳ್ಳುವ ಮೂಲಕವೋ ನಮಗೆ ಭರ್ತಿ ಮಾಡಿಕೊಳ್ಳಲು ನೆರವಾಗುತ್ತದೆ.

ಈ ರೀತಿಯ ಪುಸ್ತಕದ ಓದುವಿಕೆಯು ಮಗುವಿಗೆ ಪ್ರಶ್ನೆ ಕೇಳುವ ಅಥವಾ ಮಗುವನ್ನು ಯಾವುದೇ ರೀತಿಯಲ್ಲಿ ಪರೀಕ್ಷಿಸುವ ಸಂದರ್ಭವಲ್ಲ. ಕತೆ ಮುಗಿದ ಮೇಲೆ ಮುಗಿಯಿತು ಅಷ್ಟೇ. ಮುಗಿದ ಮೇಲೆ, ಮಕ್ಕಳು ಏನನ್ನೂ ಕೇಳಲು ಅಥವಾ ಹೇಳಲು ಬಯಸದಿದ್ದರೆ ಮತ್ತೊಂದು ಸಂಗತಿಯತ್ತ ಗಮನ ಹರಿಸಬೇಕು. ಆದರೆ ಒಬ್ಬ ಶಿಕ್ಷಕರಾಗಿ ನೀವು ಕಥೆ ಓದಿದನಂತರ ಪ್ರಶ್ನೆ ಕೇಳಬಾರದು, ಕಥೆ ಪುಸ್ತಕದ ಓದಿಗೆ ಪ್ರಶ್ನೆ ಕೇಳುವುದರಿಂದ ವಿನಾಯಿತಿ ನೀಡಬೇಕು.

ಈ ರೀತಿ ಮಕ್ಕಳಿಗೆ ವಾರದಲ್ಲಿ ಕನಿಷ್ಠ ಮೂರು ದಿವಸವಾದರೂ ಕಥಾ ಪುಸ್ತಕದ ಓದನ್ನು ಆಲಿಸುವ ಅವಕಾಶ ಸಿಗಬೇಕು. ಕ್ರಮೇಣ ಮಕ್ಕಳು ಓದಲಾದ ಪುಸ್ತಕಗಳ ಕುರಿತು ಮಾತನಾಡಲಾರಂಭಿಸುವುದನ್ನು ನೀವು ಕಾಣುವಿರಿ. ನಿಮಗೆ ಅಥವಾ ಮಕ್ಕಳಿಗೆ ಎಷ್ಟು ಸಲ ಬೇಕೆನಿಸುತ್ತದೋ ಅಷ್ಟು ಸಲ ಪುಸ್ತಕದ ಓದನ್ನು ಪುನರಾವರ್ತಿಸಿ. ಕ್ರಮೇಣ ಮಕ್ಕಳು ಚಿತ್ರ ಹಾಗೂ ಕಥೆಗಳೊಂದಿಗೆ ಅದೆಷ್ಟು ಹೊಂದಿಕೊಂಡುಬಿಡುತ್ತಾರೆಂದರೆ ನಿಮ್ಮ ಓದಿಗಾಗಿ ಅವರು ಹಂಬಲಿಸತೊಡಗುತ್ತಾರೆ. ಈ ಹಂಬಲವೇ ಮುಂದೊಂದು ದಿನ ಮಕ್ಕಳು ಪುಸ್ತಕವನ್ನು ಕೈಗೆತ್ತಿಕೊಂಡು ಓದುವಂತೆ ಮಾಡುತ್ತದೆ. ಆ ವೇಳೆಗಾಗಲೇ ಪುಸ್ತಕ ಹೇಳುವ ಎಲ್ಲಾ ವಿಷಯಗಳೂ ಅವರಿಗೆ ಗೊತ್ತಾಗಿರುತ್ತವೆ, ಅಂತಹ ಎಲ್ಲ ವಿಷಯಗಳೊಂದಿಗೂ ಅವರು ಸಂಬಂಧ ಸ್ಥಾಪಿಸಿಕೊಂಡುಬಿಟ್ಟಿರುತ್ತಾರೆ. ಅದನ್ನು ಓದುವಾಗ ಅವರು - ಎಷ್ಟೋ ಸಲ ಒಂದು ಪುಟದ ಎಲ್ಲಾ ಪದಗಳು ಗೊತ್ತಾಗದಿದ್ದರೂ, ಒಂದು ಪದದ ಎಲ್ಲ ಅಕ್ಷರಗಳೂ ತಿಳಿಯದಿದ್ದರೂ- ಹಲವು ಹಂತಗಳಲ್ಲಿ, ಹಲವು ಅರ್ಥ ಛಾಯೆಗಳೊಂದಿಗೆ ಅದನ್ನು ಅರ್ಥ ಮಾಡಿಕೊಳ್ಳುತ್ತಾರೆ.

### ಪದ್ಯಗಳನ್ನು ಹಾಡುವುದು

ಪುಟ 41 ರಲ್ಲಿ ನೀಡಲಾಗಿರುವ 'ಓದುವುದು ಎಂದರೇನು?' ಎಂಬ ಹೆಸರಿನ ಪುಟ್ಟ ಪ್ರಬಂಧವನ್ನು ನೀವೇನಾದರೂ ಓದಿದ್ದಲ್ಲಿ, ಓದುವ ಪ್ರಕ್ರಿಯೆಯಲ್ಲಿ ಕ್ರಮಬದ್ಧ ಪೂರ್ವನಿರೀಕ್ಷೆಯ ಕೌಶಲವು ಪ್ರಮುಖ ಪಾತ್ರ ವಹಿಸುತ್ತದೆ ಎಂಬುದನ್ನು ನೀವು ಕಾಣಬಲ್ಲಿರಿ. ಈ ಕೌಶಲದ ಅಭಿವೃದ್ಧಿಗೆ ಪದ್ಯ/ಹಾಡು ಅದ್ಭುತವಾದ ಕೊಡುಗೆಗಳನ್ನು ನೀಡಬಲ್ಲದು. ಪದ್ಯವನ್ನು ನಿರಂತರವಾಗಿ ಕೇಳುವ ಪುಟ್ಟ ಮಕ್ಕಳು ಭಾಷೆಯ ಮೂಲ ವಿನ್ಯಾಸಗಳನ್ನು ಪರಿಚಯಿಸಿಕೊಳ್ಳುತ್ತಾರೆ. ಪದ್ಯದ ಮತ್ತೊಂದು ವಿಶೇಷವಾದ ಉಪಯೋಗವೆಂದರೆ ಅದನ್ನು ಸುಲಭವಾಗಿ ನೆನಪಿಟ್ಟುಕೊಳ್ಳಬಹುದು. ಚಿಕ್ಕ ಮಕ್ಕಳಂತೂ ಹಾಡುಗಳನ್ನು ಕಂಠಪಾಠ ಮಾಡಲು ವಿಶೇಷವಾದ ಶ್ರಮವನ್ನೇನೂ ಹಾಕಬೇಕಿಲ್ಲ. ಅದನ್ನು ಹಲವಾರು ಬಾರಿ ಹೇಳುವ ಮೂಲಕ ಆನಂದಿಸುತ್ತಾ, ಮತ್ತೆ ಮತ್ತೆ ಹಾಡಿಕೊಳ್ಳುವ ಮೂಲಕ ಅವರು ಅದನ್ನು ತಮ್ಮ ನೆನಪಿನ ಕೋಶಕ್ಕೆ ಶಾಶ್ವತವಾಗಿ ಸೇರಿಸಕೊಳ್ಳಬಲ್ಲರು.

“ಒಳ್ಳೆಯ ಪದ್ಯಗಳನ್ನು ಆಯ್ಕೆ ಮಾಡಿಕೊಳ್ಳುವುದು ಹೇಗೆ ಮತ್ತು ಅವನ್ನು ಹುಡುಕುವುದು ಎಲ್ಲಿ?” ಎಂಬುದು ಶಿಕ್ಷಕರಾದವರು ಕೇಳಿಕೊಳ್ಳಬೇಕಾದ ಪ್ರಮುಖ ಪ್ರಶ್ನೆಯಾಗಿದೆ. ಬಹುತೇಕ ಬಾಲಬೋಧೆಗಳಲ್ಲಿ ಮತ್ತು ಪ್ರಾಥಮಿಕ ಶಾಲಾ ಪಠ್ಯಪುಸ್ತಕಗಳಲ್ಲಿ ಬಹಳ ಕಡಿಮೆ ಗುಣಮಟ್ಟದ ಪದ್ಯಗಳಿರುತ್ತವೆ, ಭಾಷಾ ಬೆಳವಣಿಗೆಗೆ ಸಂಬಂಧಿಸಿದಂತೆ ಅವು ಅಂತಹ ಮಹತ್ವದ ಪದ್ಯಗಳೇನೂ ಆಗಿರುವುದಿಲ್ಲ. ಇದೇ ರೀತಿ ಹಿಂದಿ ಮಾಸಪತ್ರಿಕೆಗಳಲ್ಲಿ ಪ್ರಕಟವಾಗುವ ಬಹುತೇಕ ಪದ್ಯಗಳೂ ಕೂಡ ಅಷ್ಟೇನೂ ಮಹತ್ವದ ಪದ್ಯಗಳಾಗಿರುವುದಿಲ್ಲ. ಪಠ್ಯಪುಸ್ತಕ ಹಾಗೂ ನಿಯತಕಾಲಿಕಗಳಲ್ಲಿ ಕಾಣಸಿಗುವ ಬಹುತೇಕ ಪದ್ಯಗಳು ಜಡ ನೈತಿಕ ಪದ್ಯಗಳಾಗಿರುತ್ತವೆ. ಬಹಳ ಕೃತಕವಾದ ವಾಕ್ಯರಚನೆ ಹಾಗು ಪದಪ್ರಯೋಗಗಳಿರುತ್ತವೆ. ನಿಜವಾದ ದೈನಂದಿನ ಬದುಕಿನ ಭಾಷೆಯ ಸೊಗಡು ಅದರಲ್ಲಿ ಕಾಣಿಸುವುದಿಲ್ಲ. ಹಾಗಾಗಿ ಅವು ಭಾಷಾ ಕಲಿಕೆಗೆ ಅಂತಹ ಸಂಪನ್ಮೂಲಗಳಾಗೇನೂ ಒದಗಿ ಬರುವುದಿಲ್ಲ.

ಮಕ್ಕಳ ಓದುವ ಕೌಶಲದ ಬೆಳವಣಿಗೆಗೆ ತಕ್ಕ ಅಡಿಪಾಯವನ್ನು ನಿರ್ಮಿಸಲು ಇವಕ್ಕಿಂತ ಭಿನ್ನವಾದ ರೀತಿಯ ಪದ್ಯಗಳ ಅವಶ್ಯಕತೆ ಇದೆ. ಅಂತಹ ಹಿಂದಿ ಪದ್ಯಗಳ (ಇಲ್ಲಿ ಕನ್ನಡ ಪದ್ಯಗಳನ್ನು ನೀಡಿದ್ದೇನೆ- ಕಾಪಿ ಎಡಿಟರ್) ಒಂದು ಸಂಗ್ರಹವನ್ನು ಮುಂದಿನ ಎರಡು ಪುಟಗಳಲ್ಲಿ ನೀಡಲಾಗಿದೆ. ಇಂತಹ ಪದ್ಯಗಳನ್ನು ನಿಸ್ಸಂಶಯವಾಗಿ ಭಾರತದ ಎಲ್ಲಾ ಭಾಷೆಗಳಲ್ಲೂ ಕಾಣಬಹುದು. ಅಂತವುಗಳನ್ನು ಹುಡುಕಲು ಬಯಸುವ ಶಿಕ್ಷಕರು ಬಹಳ ಜಾಗರೂಕತೆಯಿಂದ ಅವನ್ನು ಪತ್ತೆ ಮಾಡಬೇಕಾಗುತ್ತದೆ. ಭಾಷೆಯನ್ನು ಸಹಜವಾಗಿ ಲೀಲಾಜಾಲವಾಗಿ ಬಳಸಿರುವ ಪದ್ಯಗಳಿಗೆ ಸದಾ ಕಣ್ತೆರೆದಿರಬೇಕಾಗುತ್ತದೆ. ಕೇವಲ ನೀತಿಬೋಧನೆ ಮಾಡುವ ಪದ್ಯಗಳನ್ನು ಪೂರ್ತಿಯಾಗಿ ಕೈಬಿಡಬೇಕಾಗುತ್ತದೆ.

ಶಿಕ್ಷಕರು ಮಾಡಬಹುದಾದ ಒಂದು ಸರಳ ಕೆಲಸವೆಂದರೆ, ಮಕ್ಕಳು ಹಗ್ಗದಾಟವನ್ನೋ, ಜಿಗಿಯುವ ಆಟವನ್ನೋ, ಚೆಂಡಿನಾಟವನ್ನೋ ಆಡುವಾಗ ಹಾಡುವ ಹಾಡುಗಳನ್ನು ಬರೆದಿಟ್ಟುಕೊಳ್ಳುವುದು. ಈ ಹಾಡುಗಳೆಲ್ಲವೂ ಸಾಂಪ್ರದಾಯಿಕ ಹಾಡುಗಳಾಗಿವೆ, ಇಂತಹ ಹಾಡುಗಳನ್ನು ನಗರಗಳಲ್ಲಿ ಸಂಗ್ರಹಿಸುವುದು ಕಷ್ಟ. ಆದಾಗ್ಯೂ ಸ್ವಲ್ಪ ಶ್ರಮಪಟ್ಟರೆ ನಾವು ನಮ್ಮದೇ ಆದ ಅಂತಹ ಹಾಡುಗಳ ಒಂದು ಸಂಗ್ರಹವನ್ನು ಮಾಡಿಕೊಳ್ಳಬಹುದು. ಪ್ರತಿ ಹಾಳೆಯಲ್ಲೂ ಸುಂದರವಾಗಿ ಬರೆಯಲಾದ ಅಂತಹ ಹಾಡುಗಳ ಸಂಗ್ರಹ ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ಸಂಖ್ಯೆಯ ಪುಟ್ಟ ಗಾತ್ರದ ಪುಸ್ತಕದ ರೂಪ ಪಡೆದುಕೊಳ್ಳಬಹುದು. ಹಾಡುಗಳಿಗೆ ಸೂಕ್ತ ಚಿತ್ರಗಳನ್ನು, ಸ್ವತಃ ರಚಿಸಿ ಅಥವಾ ನಿಯತಕಾಲಿಕದ ಪುಟಗಳಿಂದ ಅಥವಾ ಇನ್ನಾವುದೇ ಮೂಲದಿಂದ ಕತ್ತರಿಸಿ ಅಂಟಿಸಬಹುದು. ಪದ್ಯ ಏನು ಹೇಳುತ್ತದೋ ಅದನ್ನೇ ಚಿತ್ರವೂ ಕಡ್ಡಾಯವಾಗಿ ಬಿಂಬಿಸಬೇಕು ಎಂದೇನಿಲ್ಲ. ಚಿತ್ರವು ಪದ್ಯದೊಂದಿಗೆ ಅಸ್ಪಷ್ಟವಾಗಿ ಸಂಬಂಧವುಳ್ಳ ಒಂದು ದೃಶ್ಯವನ್ನೋ ಅಥವಾ ಭಾವವನ್ನೋ ಉದ್ದೀಪಿಸಿದರೂ ಸಾಕು. ಈ ರೀತಿ ನೀವು ನಿಮ್ಮದೇ ಆದ ಹಲವಾರು ಪುಸ್ತಕಗಳನ್ನು ಸಿದ್ಧಪಡಿಸಿ ಇಟ್ಟುಕೊಳ್ಳಬಹುದು. ಪ್ರತಿಯೊಂದೂ ಸಾಮಾನ್ಯವಾದ ಬಿಳಿಯ ಕಾಗದವನ್ನು ಅಥವಾ ಸಾಧ್ಯವಾದರೆ ಸ್ವಲ್ಪ ಬೆಲೆ ಬಾಳುವ ಚಿತ್ರ ರಚನೆಗೆ ಬಳಸುವ ಕಾಗದವನ್ನೋ ಬಳಸಿ ಮಾಡಲಾದ 16 ಪುಟಗಳ ಪುಸ್ತಕವಾದರೂ ಸಾಕು. ನೀವು ಚಿತ್ರ ರಚನೆಗೆ ಬಳಸುವ ಕಾಗದವನ್ನು ಉಪಯೋಗಿಸಿದಾಗ ಪುಸ್ತಕವು ದೀರ್ಘಕಾಲದವರೆಗೆ ಬಾಳಿಕೆ ಬರುತ್ತದೆ ಮತ್ತು ಪ್ರತಿ ವರ್ಷ ಅದೇ ಪುಸ್ತಕವನ್ನು ಸಿದ್ಧಪಡಿಸಬೇಕಾದ ಅಗತ್ಯವಿರುವುದಿಲ್ಲ

ಇತರ ಪುಸ್ತಕಗಳನ್ನು ಓದುವ ರೀತಿಯಲ್ಲಿಯೇ ಈ ಪುಸ್ತಕವನ್ನೂ ಸಹ ಓದಬಹುದು. ಅಂದರೆ ಮಕ್ಕಳ ಒಂದು ಗುಂಪನ್ನು ಸುತ್ತಲೂ ಕುಳ್ಳಿರಿಸಿಕೊಂಡು ಪುಸ್ತಕವನ್ನು ಮಧ್ಯದಲ್ಲಿ ಇರಿಸಿಕೊಳ್ಳಬೇಕಾಗುತ್ತದೆ. ಎರಡು ಅಥವಾ ಮೂರು ಸಲ ಓದಿದ ಮೇಲೆ ನೀವು ಪುಸ್ತಕವನ್ನು ನೋಡಿಕೊಳ್ಳದೇ ಪದ್ಯವನ್ನು ಗಟ್ಟಿಯಾಗಿ ಹಾಡಬಹುದು ಮತ್ತು ನಿಮ್ಮೊಂದಿಗೆ ಹಾಡಲು ಮಕ್ಕಳಿಗೂ ಹೇಳಬಹುದು. ಪದ್ಯ ಒಳ್ಳೆಯ ಗುಣಮಟ್ಟದ್ದಾಗಿದ್ದರೆ ಮಕ್ಕಳು ಬಹುಬೇಗನೆ ಕಲಿತು ನೆನಪಿನಿಂದಲೇ ಹಾಡಬಲ್ಲವರಾಗುತ್ತಾರೆ. ಆಮೇಲೆ ನೀವು ಪುಸ್ತಕ ನೋಡಿಕೊಂಡು ಓದುವಾಗ ಪುಸ್ತಕದಲ್ಲಿ ಬರೆದಿರುವ ಪದಗಳನ್ನು ನೋಡಲು ಕಾತರಿಸುತ್ತಾರೆ. ಆರು ವರ್ಷ ವಯಸ್ಸಿನ ಮಕ್ಕಳು ಆರಾಮಾಗಿ ಇಡೀ ಪದ್ಯವನ್ನು ಒಂದು ಪ್ರತ್ಯೇಕ ಹಾಳೆಯಲ್ಲೋ ಅಥವಾ ಸ್ಲೇಟ್‌ನ ಮೇಲೋ ಬರೆದುಕೊಳ್ಳಬಲ್ಲರು. ಅಷ್ಟೊತ್ತಿಗೆ ಅವರಿಗೆ ಪದ್ಯ ಬಾಯಿಪಾಠ ಆಗಿದ್ದರೆ ಕೆಲವು ದಿವಸಗಳಲ್ಲೇ ಪದಗಳನ್ನು ಗುರುತಿಸುವುದು ಅವರಿಗೆ ಅಷ್ಟೇನೂ ಕಷ್ಟವಾಗದು .

**ಕೆಲವು ಜನಪ್ರಿಯ ಮಕ್ಕಳ ಹಾಡುಗಳು:**

| 1. **ಶಿಶುಗೀತೆ** | 2. **ಶಿಶುಗೀತೆ** |
|---|---|
| ಹಾಲು ಹಾಲು | ಅಚ್ಚೊಚ್ಚೋ ಬೆಲ್ಲದಚ್ಚೋ |
| ಎಂಥ ಹಾಲು? | ಅಲ್ಲಿ ನೋಡು ಇಲ್ಲಿ ನೋಡು |
| ಹಸುವಿನ ಹಾಲು | ಸಂಪಂಗಿ ಮರದಲಿ |
| ಎಂಥ ಹಸು? | ಗುಂಪು ನೋಡು |
| ಸೀಮೆ ಹಸು | ಯಾವ ಗುಂಪು? |
| ಎಂಥ ಸೀಮೆ? | ಕಾಗೆ ಗುಂಪು |
| ಬಯಲು ಸೀಮೆ | ಯಾವ ಕಾಗೆ? |
| ಎಂಥ ಬಯಲು? | ಕಪ್ಪು ಕಾಗೆ |
| ಆಟದ ಬಯಲು | ಯಾವ ಕಪ್ಪು? |
| ಎಂಥ ಆಟ? | ಮಡಕೆ ಕಪ್ಪು |
| ಮಕ್ಕಳ ಆಟ | ಯಾವ ಮಡಕೆ? |
| ಯಾವ ಮಕ್ಕಳು? | ಮಣ್ಣಿನ ಮಡಕೆ |
| ಕನ್ನಡ ಮಕ್ಕಳು! | ಯಾವ ಮಣ್ಣು? |
| | ಕನ್ನಡ ಮಣ್ಣು! |

| **3. ಒಂದು ಎರಡು** | **4. ಆನೆ ಬಂತೊಂದಾನೆ** |
| --- | --- |
| ಒಂದು ಎರಡು<br>ಬೇಸನ್ ಲಾಡು<br>ಮೂರು ನಾಕು<br>ಮೈಸೂರು ಪಾಕು<br>ಐದು ಆರು<br>ಬಾದಾಮಿ ಖೀರು<br>ಏಳು ಎಂಟು<br>ಮಿಠಾಯಿ ಗಂಟು<br>ಒಂಬತ್ತು ಹತ್ತು<br>ಗರಂ ಗರಂ ಬಿಸ್ಕತ್ತು! - ರಚನೆ: ಅನಾಮಿಕ | ಆನೆ ಬಂತೊಂದಾನೆ<br>ಯಾವೂರಾನೆ?<br>ಸಿದ್ದಾಪುರದಾನೆ<br>ಇಲ್ಲಿಗ್ಯಾಕೆ ಬಂತು?<br>ಮಕ್ಳನ್ ನೋಡೋಕೆ ಬಂತು?<br>ಮಕ್ಕಳಿಗೇನ್ ತಂತು?<br>ಕಾಯಿ ಬೆಲ್ಲ ತಂತು<br>ತಾನೊಸಿ ತಿಂತು<br>ಮಕ್ಕಳಿಗೆಲ್ಲ ಹಂಚ್ತು<br>ಆಮೇಲ್ ಹೊಂಟೋಯ್ತು! |

| **5. ಗುಂಡನ ಆಡು** | **6. ಕಾಗೆ ಕಾಗೆ ಕೌವ್** |
| --- | --- |
| ಉಂಡಾಡಿ ಗುಂಡ<br>ಅತ್ತೆ ಮನೆಗೋದ<br>ಹತ್ತು ಲಾಡು ತಿಂದ<br>ಇನ್ನು ಬೇಕು ಅಂದ<br>ಅಪ್ಪ ದೊಣ್ಣೆ ತಂದ<br>ಕೈ ಕಟ್ ಬಾಯಿ ಮುಚ್ಚು! | ಕಾಗೆ ಕಾಗೆ ಕೌ<br>ಯಾರ ಬತ್ತಾರವ್ವ<br>ಮಾವ ಬತ್ತಾನವ್ವ<br>ಟಿವಿ ತಂದಾನವ್ವ<br>ಎಲ್ಲಿಡಬೇಕವ್ವಾ?<br>ಇಲ್ಲಿಡಬೇಕವ್ವಾ!<br>ಹೆಂಗೆ ಚಾಲೂ ಮಾಡಬೇಕವ್ವಾ?<br>ಹಿಂಗೆ ಚಾಲೂ ಮಾಡಬೇಕವ್ವಾ!<br>ಹೆಂಗೆ ಬಂದ್ ಮಾಡಬೇಕವ್ವಾ?<br>ಹಿಂಗ ಬಂದ್ ಮಾಡಬೇಕವ್ವಾ!<br>(ಕೈ ತಿರುವಿ ಕಿವಿ ಹಿಂಡುವ ಅಭಿನಯ ಮಾಡಬೇಕು) |

| 7. ಪೆದ್ದನ ಹಾಡು | 8. ಗೌರ್ಮೆಂಟ್ ಬಸ್ |
|---|---|
| ಒಂದು ದಿನ ಪೆದ್ದನ ಹೆಂಡ್ತಿ ಲಾಡು ಮಾಡಿದ್ದಳು | ಬಸ್ ಬಂತು ಬಸ್ಸು |
| ಯಾರು ನೋಡಬಾರದೆಂದು ಮುಚ್ಚಿ ಇಟ್ಟಿದ್ದಳು | ಗೌರ್ಮೆಂಟ್ ಬಸ್ಸು |
| ಅಲ್ಲಿಂದ ಬಂದ ಪೆದ್ದ  ಇಲ್ಲಿಂದ ಬಂದ ಪೆದ್ದ | ಕೆಂಪು ಬಿಳಿ ಬಣ್ಣ |
| ಚಂಡು ಚಂಡು ಎಂದುಕೊಂಡು ಕಾಲಲೊದ್ದನು | ನೋಡು ಬಾರಣ್ಣ |
| ಒಂದು ದಿನ ಪೆದ್ದನ ಹೆಂಡ್ತಿ ಕೋಡುಬಳೆ ಮಾಡಿದ್ದಳು | ನಾನು ಡ್ರೈವರ್ ಆಗುವೆ |
| ಅಲ್ಲಿಂದ ಬಂದ ಪೆದ್ದ  ಇಲ್ಲಿಂದ ಬಂದ ಪೆದ್ದ | ಪೋಂ ಪೋಂ ಎನುವೆ |
| ಬಳೆ ಬಳೆ ಎಂದುಕೊಂಡು ಕೈಗೆ ತೊಟ್ಟನು! | ನಾನು ಕಂಡಕ್ಟರ್ ಆಗುವೆ |
| | ರೈಟ್ ರೈಟ್ ಎನುವೆ! |

| 9. ಶಿಶುಗೀತೆ | 10 ಶಿಶುಗೀತೆ |
|---|---|
| ಬೆಕ್ಕಣ್ಣಾ ಬೆಕ್ಕಣ್ಣಾ | ಚಕ್ಕುಳಗುಳಿ ಚಿಗವ್ವ |
| ಮನೆಯಾಗೆ ಯಾರೂ | ನನಗೊಂದು ಮುದ್ದೆ ಇಕ್ಕವ್ವ |
| ಇಲ್ಲಣ್ಣ | ನೀನೊಂದು ಮುದ್ದೆ ಉಣ್ಣವ್ವ |
| ಕಿಟಕಿಗ್ಯಾಸೆ ಬಾರಣ್ಣ | ಬೇಲಿ ಮೇಲೊಂದ ಮಡಗವ್ವ |
| ಹಾಲಿನ ಡಬ್ಬಿ | ಕೋತಿತಿಮ್ಮನ್ ಕರೆಯವ್ವಾ! |
| ನೆಕ್ಕಣ್ಣಾ! | ದೊಣ್ಣೆ ತಕ ಹುಯ್ಯವ್ವಾ! |

| 11. ಶಿಶುಗೀತೆ | 12. ಶಿಶುಗೀತೆ |
|---|---|
| ಮಮ್ಮಿ ಮಮ್ಮಿ ಬೋರ್ನವಿಟಾ | ಬಾರೇ ಜಯಕ್ಕ |
| ಹಾಕಿ ಕೊಡು ಒಂದ್ಲೋಟಾ | ನೀರಿಗೋಗಣ |
| ನಾ ಕುಡಿತಿನಿ | ಹಗ್ಗ ತುಂಡ |

| | |
|---|---|
| ಗಟಗಟ<br><br>ಶಾಲಿಗಿ ಹೋಗ್ತೀನಿ<br><br>ಚಟಪಟ! | ಬಾವಿ ದೂರ!<br><br>ಬಾರೇ ಜಯಕ್ಕ<br><br>ನೀರಿಗೋಗಣ!<br><br>(ಅಭಿನಯಿಸುತ್ತಾ ಎರಡುಮೂರು ಸಲ ಹಾಡುವುದು) |

| | |
|---|---|
| **13 ಶಿಶುಗೀತೆ**<br><br>ಅತ್ತಿಕಟ್ಟೆ ಬುತ್ತಿಕಟ್ಟೆ<br><br>ಬಾವನೋರ ಬಸ್ಸನೋರ<br><br>ಕೈ ಕೈ ದಳ್ಳುಂ<br><br>ಪಂಚಂ ಪಡಗಂ<br><br>ಎದೆ ಮೇಲೆ ಟಿಕ್ಕಂ<br><br>ಟಗಾರ್ ಪುಣಾರ್<br><br>ಮುರ್ಗೆಜ್ಜಂ! | **14. ಶಿಶುಗೀತೆ**<br><br>ಕುಂಟಣ್ಣ ಕುರಿಗ್ಹೋದ<br><br>ಮದ್ದಿನಿಕೆ ಮಳೆ ಬಂತು<br><br>ಕೆಂಪಣ್ಣ ಸತ್ತೋದ<br><br>ಬೂಬಮ್ಮ ಅಳ್ತಾಳೆ<br><br>ಮಕ್ಕಳ್ಗೆ ಹಿಟ್ಟಿಲ್ಲ<br><br>ಕೋಳಿಗೆ ಜುಟ್ಟಿಲ್ಲ<br><br>ಕೊ ಕೋ ಕೋ! |

| |
|---|
| **15. ಜನಪದ ಗೀತೆ**<br><br>ಕಪ್ಪೆ ಕರಕರ<br><br>ತುಪ್ಪ ಜಲಿಜಲಿ<br><br>ಮಾವಿನ ಓಟೆ<br><br>ಮರದಲಿ ಕೋಟೆ!<br><br>ಹದ್ದಿನ ಕೈಲಿ<br><br>ಸುದ್ದಿ ಕಳಿಸಿ<br><br>ಕಾಗೆ ಕೈಲಿ<br><br>ಕಂಕಣ ಕಟ್ಸಿ |

ನಳ್ಳಿ (ಏಡಿ) ಕೈಲಿ

ನಗಾರಿ ಬಡಿಸಿ

ಸಣ್ಣಿ ಮದುವೆ

ಸೋಮವಾರ

ಊಟಕೆ ಬನ್ನಿ

ಶನಿವಾರ!

**16. ಶಾಂತಕ್ಕ**

ಶಾಂತಕ್ಕ ಶಾಂತಕ್ಕ

ಚೆನ್ನಗಿದಿಯಾ?

ಮಂಚಕೆ ತಲೆ ಕೊಟ್ಟು

ಮಲಗಿದಿಯಾ?

ನಿನ ಗಂಡ ಡ್ರೈವರ್

ಗುಬ್ಬಿ ಜಾತ್ರಿಗೆ ಹೋಗಿದ್ದ

ಮಗ್ಗೇ ಕುಪ್ಸ ತಂದಿದ್ದ

ಬಾವಿ ಮೇಲೆ ಇಟ್ಟಿದ್ದ

ಬಾಯ್ ತುಂಬಾ ಬಂಗಾರ

ಎತ್ತಿನ ಕೋಡು ಸಿಂಗಾರ!

**17. ರತ್ತೋ ರತ್ತೋ ರಾಯನ ಮಗಳೆ**

ರತ್ತೋ ರತ್ತೋ ರಾಯನ ಮಗಳೆ

ಬಿತ್ತೋ ಬಿತ್ತೋ ಭೀಮನ ಮಗಳೆ

ಹದಿನಾರಮ್ಮ ಕರೆಯಲಾರೆ

ಕಾಸಲಾರೆ

ಕುಕ್ಕನೆ ಕೂರೆ

ಕೂರೇ ಬಸವಿ!

**18. ಕನ್ನಡದ ಹಾಡು**

ಕನ್ನಡದ ನಾಡು ಚಂದ

ಕನ್ನಡದ ಬೀಡು ಚಂದ

ಕನ್ನಡದ ಜನ ಚಂದ

ನಮ್ಮ ಕನ್ನಡದ ಹಾಡು ಚಂದ ॥ಕನ್ನಡದ ನಾಡು॥

ಮಲ್ಲಿಗೆ ಹುವ್ವ ನೋಡು

ಮೈಸೂರು ನಾಡು ನೋಡು

ಮೈಸೂರ ನಾಡ ಸಿರಿ ನೋಡು ॥ಕನ್ನಡದ ನಾಡು॥

ಗುಲಾಬಿ ಹುವ್ವ ನೋಡು

ಗುಲ್ಬರ್ಗಾ ನಾಡ ನೋಡು

ಗುಲ್ಬರ್ಗಾ ನಾಡ ಸಿರಿ ನೋಡು ॥ಕನ್ನಡದ ನಾಡು॥

ದಾಸವಾಳ ಹುವ್ವ ನೋಡು

ಧಾರವಾಡ ನಾಡ ನೋಡು

ಧಾರವಾಡ ನಾಡ ಸಿರಿ ನೋಡು ॥ಕನ್ನಡದ ನಾಡು॥

ಸುಗಂಧರಾಜ ಹುವ್ವ ನೋಡು

ಸುರಪುರ ನಾಡ ನೋಡು

ಸುರಪುರ ನಾಡ ಸಿರಿ ನೋಡು ॥ಕನ್ನಡದ ನಾಡು।

ಬೇವಿನ ಹುವ್ವ ನೋಡು

ಬೆಂಗಳೂರು ನಾಡ ನೋಡು

ಬೆಂಗಳೂರ ನಾಡ ಸಿರಿ ನೋಡು ॥ಕನ್ನಡದ ನಾಡು॥

ಕನಕಾಂಬರ ಹುವ್ವ ನೋಡು

ಕನ್ನಂಬಾಡಿ ಕಟ್ಟೆ ನೋಡು

ಕನ್ನಂಬಾಡಿ ಕಟ್ಟೆ ಸಿರಿ ನೋಡು ॥ಕನ್ನಡದ ನಾಡು॥

ಸಂಪಿಗೆ ಹುವ್ವ ನೋಡು

ಸೋಮವಾರಪೇಟೆ ನೋಡು

ಸೋಮವಾರ ಪೇಟೆ ಸಿರಿ ನೋಡು ॥ಕನ್ನಡದ ನಾಡು॥

ಮಾವಿನ ಹುವ್ವ ನೋಡು

ಮಡಿಕೇರಿ ನಾಡ ನೋಡು

ಮಡಿಕೇರಿ ನಾಡ ಸಿರಿ ನೋಡು ॥ಕನ್ನಡದ ನಾಡು॥

(ಈ ಹಾಡನ್ನು ಚಪ್ಪಾಳೆ ತಟ್ಟುತ್ತಾ ಹಾಡಬಹುದು. ಹೀಗೆ ಹೂವಿನ ಹೆಸರಿಗೆ ಊರೊಂದನ್ನು ಜೋಡಿಸುತ್ತಾ ಹಾಡು ಮುಂದುವರೆಸಬಹುದು)

**19. ಕರ್ರಗಿರುವ ಕಾಗೆ**

ಕರ್ರಗಿರುವ ಕಾಗೆಯೊಂದು

ಸರ್ರೆಂದು ಮೇಲೆ ಹಾರಿ

ಗಿರ್ರೆಂದು ಸುತ್ತಿ ತಿರುಗಿ

ಕೆಳಗೆ ಜಾರಿತು

ಕರ್ರೆಂದು ಕೂಗಿಕೊಂಡು

ಜರ್ರೆಂದು ಜಾರುವಾಗ

ಪರ್ರೆಂದು ಅದರ ರೆಕ್ಕೆ

ಹರಿದು ಹೋಯಿತು!

**20. ರೈಲು**

ಗಡಗಡ ಓಡಿತು ರೈಲು!

ನಿಮಿಷಕೆ ಸಾವಿರ ಮೈಲು!

ಸಾವಿರ ಮೈಲನು

ಮೀರುತ ಹೋಗಲು

ಆಗದು ರೈಲಿನ ಕೈಲು!

**21. ಸುಮದ ಮೇಲೆ ಹಿಮ**

ಘಂ! ಘಮ! ಘಮ!

ಗಿಡದ ತುಂಬ ಸುಮ!

ಸುಮದ ಮೇಲೆ

ನಲಿದು ತೇಲಿ

ಮಣಿಗಳಂತೆ ಹಿಮ!

**22. ವಾರಕೆ ಏಳೇ ಏಳು ದಿನ**

ವಾರಕೆ ಏಳೇ ಏಳು ದಿನ

ಭಾನುವಾರವೆ ರಜದ ದಿನ!

ಸೋಮವಾರ ಚಿಣ್ಣಿಯ ಕೋಲು

ಮಂಗಳವಾರ ವಾಲೀಬಾಲು!

ಬೇಟೆಯ ಆಟವು ಬುಧವಾರ

ಗರಡಿಯ ಮನೆಯಲಿ ಗುರುವಾರ!

ಶುಕ್ರವಾರಕೆ ಬುಗುರಿ ಚೆಂಡು

ಶನಿವಾರಕ್ಕೆ ಕ್ರಿಕೆಟ್ಟು ದಾಂಡು!

ವಾರಕೆ ಏಳೇ ಏಳು ದಿನ

ಆಟಕೆ ಸಾಲದು ಏಳು ದಿನ!

-ಜಿ.ಪಿ. ರಾಜರತ್ನಂ

**23. ನಂ ಚಿಕ್ಕ**

ಎಲ್ಲರಿಗಣ್ಣ ನಂ - ಚಿಕ್ಕ

ಲೆಕ್ಕ ಅಂದರೆ ಬಲು ದುಃಖ!

ಕೂಡುವುದೆಲ್ಲ ಕವಡೆ ಕಲ್ಲು

ಕಳೆಯುವುದೆಲ್ಲ ಪುಸ್ತಕ ಬಳಪ

ಗುಣಿಸುವುದೆಲ್ಲ ಗೋಡೆಯ ಚಿತ್ರ

ಭಾಗ್ಸೋದೆಲ್ಲ ಬಾಯಿನ ಒಳಗೆ!

ಜೇಬಿನ ತುಂಬಾ ರೂ. ಆಣೆ ಪೈ!

ಎಲ್ಲಿತ್ತೆನೆ ಬಾಯ್ಬಿಟ್ಟರೆ ಸೈ!

ಬೀದಿಯ ಕುಣಿತ

ಚಿಕ್ಕನ ಗಣಿತ

ಮನೆಯಲಿ ಜೋರು ಕೈಯಿ-ಬಾಯಿ;

ಪರೀಕ್ಷೆಯಲಿ ಕುಂಬಳ ಕಾಯಿ!

ಎಲ್ಲರಿಗಣ್ಣ ನಂ - ಚಿಕ್ಕ

ಲೆಕ್ಕ ಅಂದರೆ ಬಲು ದುಃಖ!

-ಎಂ.ವಿ. ಸೀತಾರಾಮಯ್ಯ

**24. ದಡ್ಡನ ಹಾಡು**

ಸೌದೆ ತಾರೋ ಮಲ್ಲ

ಕತ್ತಿ ತಾಗೀತಲ್ಲ!

ನೀರು ತಾರೋ ಮಲ್ಲ

ಬಾವಿಗೆ ಬಿದ್ದೇನಲ್ಲ!

ಬೆಂಕಿ ಹಚ್ಚೋ ಮಲ್ಲ

ಮೈ ಕೈ ಸುಟ್ಟೀತಲ್ಲ!

ಊಟಕೆ ಬಾರೋ ಮಲ್ಲ

ತಯಾರಿದ್ದೇನಲ್ಲ!

ದೊಡ್ಡ ಬಟ್ಟಲಮ್ಮ!

ದೊಡ್ಡ ಬಟ್ಟಲಮ್ಮ!

-ಮಚ್ಚಿಮಲೆ ಶಂಕರನಾರಾಯಣ ರಾವ್

**25. ಅರ್ಧಚಂದ್ರ**

ದೇವರ ಪೆಪ್ಪರಮೆಂಟೇನಮ್ಮ

ಗಗನದೊಳಲೆಯುವ ಚಂದಿರನು?

ಎಷ್ಟೇ ತಿಂದರು ಖರ್ಚೇ ಆಗದ

ಬೆಳೆಯುವ ಪೆಪ್ಪರಮೆಂಟಮ್ಮಾ!

ದಿನದಿನ ನೋಡುವೆ, ದಿನವೂ ಕರಗುತ

ಎರಡೇ ವಾರದೊಳಳಿಯುವುದು!

ಮತ್ತದು ದಿನ ದಿನ ಹೆಚ್ಚುತ ಬಂದು

ಎರಡೇ ವಾರದಿ ಬೆಳೆಯುವುದು

ಅಕ್ಷಯವಾಗಿಹ ಪೆಪ್ಪರಮೆಂಟದು

ನನಗೂ ದೊರಕುವುದೇನಮ್ಮ?

ನೀನೂ ದೇವರ ಬಾಲಕನಾಗಲು

ನಿನಗೂ ಕೊಡುವನು ಕಂದಯ್ಯ!

ದೇವರ ಬಾಲಕನಾಗಲು ಒಲ್ಲೆ

ಆತನ ಮೀರಿಹೆ ನೀನಮ್ಮಾ!

ತಾಯಿಯನಗಲಿಸಿ ದೇವರ ಹಿಡಿಸುವ

ಪೆಪ್ಪರಮೆಂಟೂ ಬೇಡಮ್ಮಾ!

-ಕುವೆಂಪು

## ಪುಸ್ತಕಗಳನ್ನು ಸಿದ್ಧಪಡಿಸುವುದು

ತರಗತಿಯಲ್ಲಿ (ಬರೀ ಶಾಲೆಯಲ್ಲಷ್ಟೇ ಅಲ್ಲ) ಪುಸ್ತಕಗಳನ್ನು ಇಡುವುದು ನಿಜಕ್ಕೂ ಒಳ್ಳೆಯದು, ಉಪಯುಕ್ತವಾದುದು. ಆದರೆ ಇರಿಸಿಕೊಂಡ ಮಾತ್ರಕ್ಕೆ ಪುಸ್ತಕಗಳನ್ನು ಸಿದ್ಧಪಡಿಸಿದಂತಾಗುವುದಿಲ್ಲ. ಶಿಕ್ಷಕರು ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿ, ಓದುವುದನ್ನು ಕಲಿಯುವ ಮಕ್ಕಳಿಗೆ ಅವರಿಗೆಂದು ಸಿದ್ಧಪಡಿಸಿದ ಓದಿನ ಸಾಮಗ್ರಿಯೇ ಸೂಕ್ತವಾದ ಓದಿನ ಸಾಮಗ್ರಿ ಎನಿಸಿಕೊಳ್ಳಬಲ್ಲದು. ಈವರೆಗೆ ನಾವು ಚರ್ಚಿಸಿದ ಚಟುವಟಿಕೆಗಳು (ಅಂದರೆ ಕಥೆ ಹೇಳುವುದು, ಓದುವುದು, ಚಿತ್ರಗಳ ಬಗೆಗೆ ಮಾತನಾಡುವುದು, ಪದ್ಯ ಹಾಡುವುದು ಇತ್ಯಾದಿ) ಶಿಕ್ಷಕರು ಸಿದ್ಧಪಡಿಸಲಿರುವ ಸಾಮಗ್ರಿಗಳಿಗೆ ಮೂಲ ಸಂಪನ್ಮೂಲವನ್ನು ಒದಗಿಸುತ್ತವೆ. ಕಚ್ಚಾ ಸಾಮಗ್ರಿಗಳು, ಅಂದರೆ ಕಾಗದ ಇತ್ಯಾದಿಗಳು, ಅಲ್ಲಿ ಏನು ಲಭ್ಯವಿದೆಯೋ ಅದನ್ನು ಅವಲಂಬಿಸಿರುತ್ತವೆ. ಮಕ್ಕಳ ಬಳಿ ಕಾಪಿ ಪುಸ್ತಕಗಳಿದ್ದರೆ ಅವು ಖಂಡಿತವಾಗಿ ಈ ಕೆಳಗೆ ವಿವರಿಸಿರುವ ಅರ್ಥದಲ್ಲಿ ಸೂಕ್ತ 'ಪುಸ್ತಕ'ಗಳಾಗಬಲ್ಲವು. ಶಿಕ್ಷಕರಿಗೆ ಅಥವಾ ಶಾಲೆಗೆ ಬಿಡಿ ಹಾಳೆಗಳನ್ನು, ಅಂದರೆ ಸಾಮಾನ್ಯ ಹಾಳೆ ಹಾಗೂ ಚಿತ್ರ ರಚನೆಗೆ ಬಳಸುವ ಗಟ್ಟಿಯಾದ ಹಾಳೆಗಳೆರಡನ್ನೂ ಖರೀದಿಸಲು ಸಾಧ್ಯವಾದಲ್ಲಿ ಅದರಿಂದ ಇನ್ನೂ ಹೆಚ್ಚಿನ ಸಾಧ್ಯತೆಗಳು ತೆರೆದುಕೊಳ್ಳುತ್ತವೆ.

ಈ ಚಟುವಟಿಕೆಯ ಪ್ರಾರಂಭವನ್ನು ಸುಮಾರು ಐದನೆಯ ವರ್ಷದ ಆಸುಪಾಸಿನಲ್ಲಿ ಮಾಡಬಹುದು. ಒಂದು ತರಗತಿಯ ಎಲ್ಲಾ ಮಕ್ಕಳೂ ಏಕಕಾಲಕ್ಕೆ ಓದಲು ಪ್ರಾರಂಭಿಸಲಾರರು ಅಥವಾ ಸಮಾನ ಗತಿಯಲ್ಲಿ ಪ್ರಗತಿ ಹೊಂದಲಾರರು ಎಂಬುದನ್ನು ನಾವು ನೆನಪಿಡಬೇಕು. ಈ ವ್ಯತ್ಯಾಸಗಳು ಗಮನ ಸೆಳೆಯುವಂತಹ ವ್ಯತ್ಯಾಸಗಳೂ ಆಗಿರಬಹುದು. ಕೆಲವು ಮಕ್ಕಳು ಐದನೆಯ ವಯಸ್ಸಿನಲ್ಲೇ ಅಸಾಧಾರಣವಾದ ಆಸಕ್ತಿ, ಸಾಮರ್ಥ್ಯಗಳನ್ನು ತೋರಿಸಬಹುದು, ಏಳನೆಯ ವಯಸ್ಸಿಗೆ ತಲುಪುವ ವೇಳೆಗೆ ಅವರು ಓದುವ ಕೌಶಲವನ್ನು ಕರಗತ ಮಾಡಿಕೊಂಡಿದ್ದರೆ ಮತ್ತೆ ಕೆಲವು ಮಕ್ಕಳು ಎಂಟನೆಯ ವಯಸ್ಸಿಗೆ ಬಂದರೂ ಓದಲು ಕಷ್ಟ ಪಡುತ್ತಾರೆ. ಇಂತಹ ಮಕ್ಕಳ ಸಂಪರ್ಕದಲ್ಲಿರುವ ಶಿಕ್ಷಕರು ಕಲಿಕೆಯ ಗತಿಯಲ್ಲಿನ ಈ ವ್ಯತ್ಯಾಸವನ್ನು ಕಂಡು ಆತಂಕಗೊಳ್ಳಬಾರದು. ಅವರೇನು ಮಾಡಬೇಕೆಂದರೆ, ಪ್ರತಿಯೊಂದು ಮಗುವೂ ಸಾಧಿಸುತ್ತಿರುವ ಪ್ರಗತಿಯ ಕುರಿತು ಮತ್ತು ಕೆಲವು ಮಕ್ಕಳು ಎದುರಿಸುತ್ತಿರುವ ವಿಶೇಷ ಕಷ್ಟಗಳನ್ನು ಕುರಿತು ಪರ್ಯಾಲೋಚಿಸಬೇಕು. ಇದೊಂದು ಸವಾಲಿನ ಕೆಲಸವಾಗಿದೆ. ಕೆಲವು ಸಂದರ್ಭಗಳಲ್ಲಿ ಮಕ್ಕಳ ಸಂಖ್ಯೆ ವಿಪರೀತ ಇದ್ದು ಇದೆಲ್ಲ ಸಾಧ್ಯವಾಗದಿರಬಹುದು. ಅಂತಹ ಸಂದರ್ಭದಲ್ಲಿ ಸೀಮಿತ ಸಾಧನೆಗಳನ್ನಷ್ಟೇ ಕಲ್ಪಿಸಿಕೊಳ್ಳಲು ಸಾಧ್ಯ.

ಕಥೆಗಳು, ಚಿತ್ರಗಳು ಮತ್ತು ಪದ್ಯಗಳಿಗೆ ಸಂಬಂಧಿಸಿದ ವಿವಿಧ ಚಟುವಟಿಕೆಗಳನ್ನು ಮಾಡುವಾಗ ಆದ (ಈ ಹಿಂದಿನ ಅಧ್ಯಾಯದಲ್ಲಿ ಚರ್ಚಿಸಲಾದ) ಮಾತುಕತೆಗಳಿಂದ ಪ್ರತಿಯೊಂದು ಮಗುವಿಗೂ ಒಂದೊಂದು ಪದವನ್ನೋ ಅಥವಾ ವಾಕ್ಯವನ್ನೋ ಆಯ್ಕೆ ಮಾಡಿಕೊಳ್ಳಿರಿ. ಅದನ್ನು ಮಗುವಿನ ಕಾಪಿ ಪುಸ್ತಕದಲ್ಲಿ ಅಥವಾ ಒಂದು ಬಿಳಿಯ ಹಾಳೆಯ ಮೇಲೆ ಸ್ಪಷ್ಟವಾದ ಅಕ್ಷರಗಳಲ್ಲಿ ಬರೆಯಿರಿ. ಆ ಪದ ಅಥವಾ ವಾಕ್ಯ ಮಾತಿಗೊಂದು ಸಂದರ್ಭವನ್ನು ಸೃಷ್ಟಿಸಿದ ಕಥೆ ಅಥವಾ ಚಿತ್ರವನ್ನು ಪ್ರತಿನಿಧಿಸಬೇಕಾದುದು ಬಹಳ ಮುಖ್ಯ. ಅದು ಮಗುವಿಗೆ ತಕ್ಷಣಕ್ಕೆ ಒಂದು ಅರ್ಥವನ್ನು ಒದಗಿಸುತ್ತದೆ ಎಂದು ಖಾತರಿಪಡಿಸಿಕೊಳ್ಳಲು ಇರುವುದು ಇದೊಂದೇ ದಾರಿಯಾಗಿದೆ. ನೀವು ಮಗುವಿಗಾಗಿ ಬರೆದಿರುವುದನ್ನು ಗಟ್ಟಿಯಾಗಿ ಓದಿರಿ. ಆಮೇಲೆ ಅದನ್ನು ಕೆಳಗೆ ಕಾಪಿ ಮಾಡಲು ಅಥವಾ ಅದರ ಮೇಲೆ ಬರೆಯಲು ಮಗುವಿಗೆ ಹೇಳಿರಿ. ಪ್ರತಿ ದಿನ

ಓದಲು ಮಗುವಿಗೆ ಒಂದು ಹೊಸ ಶಬ್ದವನ್ನೋ ಅಥವಾ ವಾಕ್ಯವನ್ನೋ ಬರೆದಾಗ, ಯಾವಾಗಲೂ ಹಿಂದಿನ 'ಪಠ್ಯ'ಗಳನ್ನು ಒಮ್ಮೆ ನೋಡಿರಿ, ಅದನ್ನು ಓದಲು ಮಗುವಿಗೆ ಹೇಳಿರಿ, ಮಗುವಿಗೆ ಓದಲು ಕಷ್ಟವಾದಾಗ ನೀವೇ ಓದಿರಿ. ಪ್ರತಿ ದಿನ ಮಗುವಿನ ಜೊತೆಗೆ ಹೊಸ ವಾಕ್ಯವನ್ನು ಬರೆಯಲು ಹಾಗೂ ಮಗು ಓದುವ ಹಳೆಯದನ್ನು ಕೇಳಲು ಕೂತಾಗಲೆಲ್ಲ ಹಿಂದಿನ ಪಠ್ಯಗಳ ಬಗ್ಗೆ ಮಾತನಾಡುವ ಮೂಲಕ ಅದನ್ನು ಹೆಚ್ಚಾಗಿ ಪ್ರಸ್ತಾಪ  ಮಾಡಲು ಮರೆಯದಿರಿ. ಉದಾಹರಣೆಗೆ, ಹಿಂದಿನ ಪಠ್ಯ ಒಂದು ನಾಯಿಯ ಕುರಿತಾಗಿದ್ದಲ್ಲಿ, ನಾಯಿ ಎಲ್ಲಿಗೆ ಹೋಗಿತ್ತು, ಇಂದು ಮುಂಜಾನೆ ಅದು ಎಲ್ಲಿದೆ ಎಂಬಿತ್ಯಾದಿಗಳ ಕುರಿತಾಗಿ ಒಂದೆರಡು ಪ್ರಶ್ನೆಗಳನ್ನು ಕೇಳಿರಿ ಅಥವಾ ಒಂದೆರಡು ಮಾತು ಆ ಬಗ್ಗೆ ಮಾತನಾಡುವ ಮೂಲಕ ಅದನ್ನು ಹೆಚ್ಚು ವಿಸ್ತರಿಸಿರಿ.  ನೀವು  ತಯಾರಿಸಿದ ಇಂತಹ ಪುಟ್ಟ ಪಠ್ಯಗಳನ್ನು ಓದುವಾಗ ಮಗು ಮಾಡಬಹುದಾದ ಸಣ್ಣ ಪುಟ್ಟ ದೋಷಗಳನ್ನು ಗಮನಿಸಲು ಹೋಗಬೇಡಿರಿ. ಉದಾಹರಣೆಗೆ, 'ಮಳೆ ಬಂದಿತು' ಎಂಬ ವಾಕ್ಯವನ್ನು ಮಗು 'ಮಳೆ ಬರುತ್ತಿದೆ' ಎಂದು ಓದಿದರೆ ಅಂತಹ ದೋಷಗಳನ್ನು ಸರಿಪಡಿಸಬೇಕಾದ ಅವಶ್ಯಕತೆ ಇಲ್ಲ. ಇಂತಹ ದೋಷಗಳು ಅರ್ಥಕ್ಕೇನೂ ಹಾನಿ ಮಾಡುವುದಿಲ್ಲ.

ತರಗತಿಯ ಪ್ರತಿ ಕಾಪಿ ಪುಸ್ತಕವೂ ಕ್ರಮೇಣ ವಸ್ತು ವಿಚಾರಗಳ ಪುಸ್ತಕವಾಗಿ ಅಥವಾ ಕಥೆ  ಪುಸ್ತಕವಾಗಿ  ಬದಲಾಗುತ್ತದೆ. ಪ್ರತಿ ದಿನ ನೀವು ಬರೆಯುವ ಪಠ್ಯದ ಕೆಳಗೆ ಮಗು ಬರೆದ ಬರವಣಿಗೆಯನ್ನು ನೋಡಿದಾಗ ಮಗುವಿಗೆ ಪ್ರತಿಯೊಂದು ಅಕ್ಷರದ ಆಕಾರವೂ ವಿವಿಧ ಬಗೆಯ ಕಷ್ಟಗಳನ್ನು ನೀಡುವುದನ್ನು ನೀವು ಗಮನಿಸುವಿರಿ. ಕೆಲವು ಅಕ್ಷರಗಳು ಅಥವಾ ಸಂಕೇತಗಳನ್ನು ಬರೆಯಲು ವಿಶೇಷ ಅಭ್ಯಾಸ ಬೇಕಾಗುತ್ತದೆ ಮತ್ತು ಅಂತಹ ಅಭ್ಯಾಸವನ್ನು ಎಷ್ಟು ಸಲ ಬೇಕೋ ಅಷ್ಟು ಸಲ, ಅಗತ್ಯವಿದ್ದಷ್ಟು, ಅದೇ ಹಾಳೆಯಲ್ಲಿ ಮಾಡಬಹುದಾಗಿದೆ. ಈ ಎಲ್ಲ ಚಟುವಟಿಕೆಗಳ ಅಂತಿಮ ಉದ್ದೇಶವು ನೀವು ಯಾವ ಭಾಷೆ ಕಲಿಸುತ್ತಿರುವಿರೋ ಆ ಭಾಷೆಯ ಪ್ರತಿ ಅಕ್ಷರವನ್ನು ಬರೆಯಲು ಮತ್ತು ಗುರುತಿಸಲು ಮಗು ಪ್ರಾವೀಣ್ಯತೆಯನ್ನು ಗಳಿಸುವುದಾಗಿದೆ.

ಹಿಂದಿ/ಕನ್ನಡ ವರ್ಣಮಾಲೆಯು ಇಂಗ್ಲೀಷ್ ವರ್ಣಮಾಲೆಗಿಂತ ಪೂರ್ತಿ ಭಿನ್ನವಾದುದು ಎಂದು ಕೆಲವರು ಯೋಚಿಸುತ್ತಾರೆ ಮತ್ತು ಅವರು ಅದನ್ನು ನಿಮಗೆ ಈಗಾಗಲೇ ಹೇಳಿರಬಹುದು. ಹಿಂದಿ ಭಾಷೆಯಲ್ಲಿ ಬಳಸುವ 'ಮಾತ್ರೆ' (ಕನ್ನಡದಲ್ಲಿ ಕಾಗುಣಿತ)ಗಳನ್ನು ಪ್ರತ್ಯೇಕವಾಗಿ ಕಲಿಯಬೇಕಾಗುತ್ತದೆ ಮತ್ತು ಪ್ರಾರಂಭದಲ್ಲಿ 'ಕಾಗುಣಿತ'ಗಳಿರದ ಸರಳವಾದ ಶಬ್ದಗಳನ್ನಷ್ಟೇ ಓದಲು ಮಗುವಿಗೆ ಹೇಳಬೇಕಾಗುತ್ತದೆ ಎಂದು ಅಂತಹವರು ಯೋಚಿಸುತ್ತಾರೆ. ಇದು ಊಹಾತ್ಮಕವಾದದು, ಇದನ್ನು ಎಲ್ಲಾ ಶಿಕ್ಷಕರು ಒಪ್ಪಿಕೊಳ್ಳಬೇಕಾಗಿಲ್ಲ. ಗುಣಿತಾಕ್ಷರಗಳು/ಮಾತ್ರೆಗಳು ಕನ್ನಡ/ಹಿಂದೀ ಭಾಷೆಯ ಸ್ವಾಭಾವಿಕ  ಭಾಗವಾಗವೇ  ಆಗಿವೆ.  ಮಕ್ಕಳು (ಮಾತೆ) ಗುಣಿತಾಕ್ಷರಗಳನ್ನು ಅರ್ಥಗರ್ಭಿತ ಪಠ್ಯಗಳನ್ನು ಓದುವ ಒಂದು ಇಡೀ ಪ್ರಕ್ರಿಯೆಯ ಭಾಗವಾಗಿ ಯಾಕೆ ಕಲಿಯಬಾರದು ಎನ್ನುವುದಕ್ಕೆ ಕಾರಣವೇ ಇಲ್ಲ. ಮಕ್ಕಳು ಮುಂದೆ ತಮ್ಮದೇ ಬರವಣಿಗೆಯಲ್ಲಿ  ಗುಣಿತಾಕ್ಷರಗಳನ್ನು ಬರೆಯಲು ಅಥವಾ ಬಳಸಲು ವಿಶೇಷ ತರಬೇತಿ ನೀಡಬೇಕಾಗುತ್ತದೆ ಎಂಬುದು ಬೇರೆಯದೇ ವಿಷಯ.

**ಕೆಲವು ಚಟುವಟಿಕೆಗಳು**

1. **ನೆಲವೇ ನಕ್ಷೆಯಾಗಿ**

ಪೀಠೋಪಕರಣಗಳೇ ಇಲ್ಲದ ತರಗತಿ ಕೋಣೆಯಿದ್ದಲ್ಲಿ ಒಳ್ಳೆಯದು; ಇಲ್ಲವಾದಲ್ಲಿ, ಮಕ್ಕಳನ್ನು ಹೊರಗೆ ವರಾಂಡಕ್ಕೆ, ಹಿತ್ತಲಿಗೆ ಅಥವಾ ಮಕ್ಕಳು ಮುಕ್ತವಾಗಿ ಸಂಚರಿಸುವಷ್ಟು ಸ್ಥಳಾವಕಾಶ ಎಲ್ಲಿರುತ್ತದೋ ಆ ಜಾಗಕ್ಕೆ ಅವರನ್ನು ಕರೆದುಕೊಂಡು ಹೋಗಿರಿ.

ಓಡುವುದಕ್ಕೆ, ನಡೆಯುವುದಕ್ಕೆ, ಜಿಗಿಯುವುದಕ್ಕೆ, ಕುಪ್ಪಳಿಸುವುದಕ್ಕೆ, ಜೋರಾಗಿ ಓಡಾಡುವುದಕ್ಕೆ, ದೊಡ್ಡ ದೊಡ್ಡ ಹೆಜ್ಜೆ ಹಾಕುವುದಕ್ಕೆ, ಸಣ್ಣ ಸಣ್ಣ ಹೆಜ್ಜೆ ಇಡುವುದಕ್ಕೆ, ಹಿಂದೆ ಹಿಂದೆ ನಡೆಯುವುದಕ್ಕೆ, ಪಕ್ಕಕ್ಕೆ ಸರಿಯುತ್ತ ನಡೆಯುವುದಕ್ಕೆ ಒಂದೊಂದು ಸಂಕೇತಗಳನ್ನು ಆಯ್ಕೆ ಮಾಡಿಕೊಳ್ಳಿ. ಎಲ್ಲಾ ಸಂಕೇತಗಳೂ ಸರಳವಾಗಿರಬೇಕು, ಸುಲಭವಾಗಿ ನೆನಪಿನಲ್ಲಿ ಇರಿಸಿಕೊಳ್ಳುವಂತಹ ಸಂಕೇತಗಳಾಗಿರಬೇಕು. ಉದಾಹರಣೆಗೆ: ಓಡುವುದು, ಜಿಗಿಯುವುದು.

ಮುಕ್ತವಾದ ಜಾಗದ ಒಂದೊಂದು ಮೂಲೆಯಲ್ಲಿ ಒಂದೊಂದು ಸಂಕೇತ ಬರೆಯಿರಿ. ಪ್ರತಿಯೊಂದು ಸಂಕೇತವೂ ಏನನ್ನು ಸೂಚಿಸುತ್ತದೆ ಎಂದು ಮಕ್ಕಳಿಗೆ ವಿವರಿಸಿ ಹೇಳಿ. ಈ ಚಟುವಟಿಕೆಯನ್ನು ಮೊದಲ ಸಲ ಮಾಡುವಾಗ ಮೂರು ಅಥವಾ ನಾಲ್ಕಕ್ಕಿಂತ ಹೆಚ್ಚು ಸಂಕೇತಗಳನ್ನು ತೆಗೆದುಕೊಳ್ಳಬಾರದು, ಸಂಕೇತಗಳು ಹೆಚ್ಚಾದಲ್ಲಿ ಮಗುವಿಗೆ ಗೊಂದಲವಾಗುತ್ತದೆ.

ಯಾವುದೇ ಒಂದು ಬಿಂದುವಿನಿಂದ ಪ್ರಾರಂಭಿಸಿ. ಸಂಕೇತವನ್ನು ನೆಲದ ಮೇಲೆ ಚಿತ್ರಿಸಿರುವ, ಸೂಚಿಸಿರುವ ಅಥವಾ ಕಾರ್ಡ್ ಬೋರ್ಡ್ ಮೇಲೆ ಬರೆದಿರುವ ಜಾಗಕ್ಕೆ ತಲುಪಿದಾಗ ಮಗು ಏನು ಮಾಡಬೇಕು ಎಂದು ತಿಳಿಸಿರಿ. ಪ್ರತಿಯೊಂದು ಮಗುವೂ ಹಲವಾರು ಬಾರಿ ಇದರಲ್ಲಿ ಪಾಲ್ಗೊಳ್ಳುವ ಅವಕಾಶ ಪಡೆದುಕೊಂಡ ಮೇಲೆ ಸಂಕೇತಗಳಿಗೆ ಬದಲಾಗಿ ಸೂಕ್ತವಾದ ಪದಗಳನ್ನು ಬಳಸಿರಿ. ಸಂಕೇತ ಬರೆದಿರುವ ಜಾಗದಲ್ಲಿ ಅಕ್ಷರಗಳನ್ನು ಸ್ಪಷ್ಟವಾಗಿ ಬರೆಯಿರಿ. ಮಕ್ಕಳಿಗೆ ಸಂಕೇತಗಳ ಪರಿಚಯವಾದಂತೆ ಸಂಕೇತಗಳ ಸಂಖ್ಯೆಯನ್ನು ಹೆಚ್ಚಿಸಿರಿ. ಪ್ರತಿ ಸಲ ತರಗತಿಯ ಕೋಣೆಗೆ ಹಿಂದಿರುಗಿ ಬಂದಾಗ ಹೊರಗೆ ಅವರು ಆಟವಾಡಿದ ನಕ್ಷೆಯನ್ನು ಬರೆಯಲು ಹೇಳಿರಿ. ಯಾವ ಯಾವ ಜಾಗದಲ್ಲಿ ಅವರು ಏನು ಮಾಡುತ್ತಿದ್ದರು ಎಂಬುದನ್ನೂ ಅವರು ನಕ್ಷೆಯಲ್ಲಿ ತೋರಿಸಲಿ.

2. **ಅಕ್ಷರಗಳನ್ನು ವಿಭಜಿಸುವುದು**

ಒಂದು ಅಕ್ಷರವನ್ನು ಮೂರು ಭಾಗಗಳಲ್ಲಿ ವಿಭಜಿಸಿ ಉದ್ದನೆಯ ಕಾಗದದ ತುಂಡುಗಳ ಮೇಲೆ ಅಕ್ಷರದ ಪ್ರತಿ ಭಾಗವನ್ನೂ ದೊಡ್ಡದಾಗಿ ಕಾಣಿಸುವಂತೆ ಬರೆಯಿರಿ. ಈ ಮೂರೂ ಭಾಗಗಳನ್ನು ಗೋಡೆಯ ಮೇಲೆ ದೂರ ದೂರದಲ್ಲಿ ಎಲ್ಲ ಮಕ್ಕಳಿಗೂ ಸುಲಭವಾಗಿ ಕಾಣಿಸುವಂತೆ ಅಂಟಿಸಿರಿ. ಹಿಂದಿಯಂತಹ ಭಾಷೆಯಲ್ಲಿ 'ಮಾತ್ರೆ (ಗುಣಿತದ ಗುರುತು)'ಗಳನ್ನು ಗುರುತಿಸಲು ಮತ್ತೊಂದು ಕಾಗದದ ತುಂಡನ್ನು ಬಳಸಿರಿ (ಕನ್ನಡಕ್ಕೂ ಹೀಗೆ ಬರೆಯಬಹುದು).

3. **ವಿಜ್ಞಾನ ಓದುವುದು**

ಪರಿಚಿತ ವಸ್ತುಗಳ ಕುರಿತು ಮಾತನಾಡಲು ಸಮಾನಾಂಶವಿರುವ ಕೆಲವು ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಿರಿ. ಉದಾಹರಣೆಗೆ, ನೀವು 'ಹಾರುವ ವಸ್ತು'ಗಳನ್ನು, 'ದುಂಡಗಿರುವ ವಸ್ತು'ಗಳನ್ನು, 'ಚಪ್ಪಟೆಯ ವಸ್ತು'ಗಳನ್ನು ಅಥವಾ 'ಈಜುವ ವಸ್ತು'ಗಳನ್ನು ವಿಷಯವಾಗಿ ಆಯ್ಕೆ ಮಾಡಿಕೊಳ್ಳಬಹುದು.

ಆ ವಿಷಯವನ್ನು ಕಪ್ಪು ಹಲಗೆಯ ಮೇಲೆ ಬರೆದು ಗಟ್ಟಿಯಾಗಿ ಓದಿರಿ, ಆ ವಿಷಯದ ಅಡಿಯಲ್ಲಿ ಬರುವ ಎರಡು ಅಥವಾ ಮೂರು ವಸ್ತುಗಳನ್ನು ಹೆಸರಿಸಲು ಮಕ್ಕಳಿಗೆ ಹೇಳಿ. ಉದಾಹರಣೆಗೆ, 'ಹಾರುವ ವಸ್ತು'ಗಳ ಅಡಿಯಲ್ಲಿ ಗಾಳಿಪಟ, ವಿಮಾನ, ಹಕ್ಕಿ, ನೊಣಗಳನ್ನು, ಅದೇ ರೀತಿ ಈಜುವ ವಸ್ತುಗಳಿಗೆ ಮೀನು, ಕಪ್ಪೆ, ಮೊಸಳೆಗಳನ್ನು ಹೇಳಬಹುದು. ಈ ಪಟ್ಟಿಯನ್ನು ಬರೆದುಕೊಳ್ಳಲು ಹಾಗೂ ಬರೆದುಕೊಳ್ಳುವುದರ ಜೊತೆಗೆ ಒಂದು ಆಯಾ ವಿಷಯದ ಅಡಿಯಲ್ಲಿ ಬರುವ ವಸ್ತುಗಳ ಒಂದು ಚಿಕ್ಕ ಚಿತ್ರವನ್ನು ಬಿಡಿಸಲು ಮಕ್ಕಳಿಗೆ ಹೇಳಿರಿ.

**4. ಪದಗಳ ಕುಂಟೋಬಿಲ್ಲೆ**

ನೆಲದ ಮೇಲೆ ಒಂದು ಚೌಕವನ್ನು ಬರೆಯಿರಿ, ಎಲ್ಲಾ ಮಕ್ಕಳು ಆಡುವುದಾದರೆ ಹಲವಾರು ಚೌಕಗಳನ್ನು ಬರೆಯಿರಿ. ಪ್ರತಿ ಚೌಕದೊಳಗೂ ಪರಿಚಿತ ವಸ್ತುಗಳ ಹೆಸರುಗಳನ್ನು (ಉದಾಹರಣೆಗೆ, ಲೋಟ, ಚಮಚ, ಮನೆ, ಮರ ಇತ್ಯಾದಿ) ಬರೆದು ಆ ವಸ್ತುವಿನ ಒಂದು ಪುಟ್ಟ ಸಂಕೇತವನ್ನು ಮಾಡಿರಿ. ಐವರು ಮಕ್ಕಳನ್ನು ಒಂದು ಗುಂಪಿನಂತೆ ವಿಭಜಿಸಿರಿ, ಪ್ರತಿಯೊಂದು ಗುಂಪಿಗೂ ಒಂದು ಮಗು ತೀರ್ಪುಗಾರನಾಗಿರಲಿ. ತೀರ್ಪುಗಾರನಾದ ಮಗು ಕಲ್ಲನ್ನು ಒಂದು ಚೌಕದೊಳಗೆ ಹಾಕಿ ಪ್ರತಿಯೊಂದು ಮಗುವೂ ಒಂದೊಂದು ಮನೆಗೆ ಹೋಗುವುದನ್ನು, ಹೋದ ಮೇಲೆ ಆ ವಸ್ತುವನ್ನು ಗಟ್ಟಿಯಾಗಿ ಓದುವುದನ್ನು ಮತ್ತು ಕಲ್ಲಿನೊಂದಿಗೆ ಆ ಚೌಕದೊಳಗೆ ಕುಂಟುತ್ತ ಹೋಗುವುದನ್ನು ಮೇಲ್ವಿಚಾರಣೆ ಮಾಡಬೇಕು. ತೀರ್ಪುಗಾರನಾದ ಮಗು ಪ್ರತಿ ಸಲ ಈ ಚಟುವಟಿಕೆಯನ್ನು ಪುನರಾವರ್ತನೆ ಆಗುವಂತೆ ನೋಡಿಕೊಳ್ಳಬೇಕು.

**5. ಓದಿದ್ದನ್ನು ಮಾಡುವುದು**

ಓದುವುದನ್ನು ಕಲಿತ ಮಕ್ಕಳು ಓದುವುದು ಎಂದರೆ ಅದು ಮಾಡುವುದಕ್ಕೆ ಸಂಬಂಧಿಸಿದ್ದು ಎಂಬುದನ್ನು ಕಲಿಯಬೇಕಾಗುತ್ತದೆ. ಈ ಚಟುವಟಿಕೆಯಲ್ಲಿ ಶಿಕ್ಷಕರು ಏನನ್ನಾದರೂ ಮಾತನಾಡುವ ಬದಲು ಕಪ್ಪು ಹಲಗೆಯ ಸಮೀಪ ನಿಂತುಕೊಂಡು ಸುಮ್ಮನೆ ಒಂದು ಸಂಕ್ಷಿಪ್ತ ಸೂಚನೆಯನ್ನು ಬರೆಯಬೇಕು, ಮತ್ತು ಆ ಸೂಚನೆಯಂತೆ ಮಗು ಮಾಡಬೇಕು. ಪ್ರತಿಯೊಂದು ಮಗುವಿಗೂ ಒಂದು ಸಂಖ್ಯೆ ನೀಡಿ, ಕಪ್ಪು ಹಲಗೆಯ ಮೇಲೆ ಪ್ರತಿ ಸಲ ಸೂಚನೆಯನ್ನು ಬರೆಯುವಾಗಲೂ ಮಗುವಿಗೆ ನೀಡಿರುವ ಸಂಖ್ಯೆಯನ್ನೂ ಪಕ್ಕದಲ್ಲಿ ಬರೆಯಿರಿ. ಉದಾಹರಣೆಗೆ, "ಎದ್ದು ಹೋಗಿ ಒಂದು ಕಲ್ಲನ್ನು ತೆಗೆದುಕೊಂಡು ಬಾ - 10". ಈ ಸೂಚನೆಯ ಅರ್ಥ 10 ರ ಸಂಖ್ಯೆಯ ಮಗು ಎದ್ದು ಹೋಗಿ ಹೊರಗಿನಿಂದ ಒಂದು ಕಲ್ಲನ್ನು ತರಬೇಕು ಎಂದು. ಮುಂದಿನ ಸೂಚನೆ ಹೀಗಿರಬಹುದು "ಕಲ್ಲು ಕೊಡು ಎಂದು ಸಂಖ್ಯೆ 10 ರ ಮಗುವನ್ನು ಕೇಳಿ ಪಡೆದುಕೊಂಡು ಆ ಕಲ್ಲನ್ನು ನಿನ್ನ ಬಲ ಮಂಡಿಯ ಮೇಲೆ ಇರಿಸಿಕೋ - 5".

ಕ್ರಮೇಣ ಈ ಚಟುವಟಿಕೆಯಲ್ಲಿ ಇನ್ನೂ ಸಂಕೀರ್ಣವಾದ ಆದೇಶಗಳನ್ನು ನೀಡುತ್ತ ಹೋಗಬಹುದು. ಆ ಆದೇಶಗಳು "ಗೋಡೆಗೆ ನೇತುಹಾಕಿರುವ ಚಿತ್ರವನ್ನು ಕೂಲಂಕಷವಾಗಿ ನೋಡಿ ಅದರ ಸೂಕ್ಷ್ಮ ವಿವರಗಳನ್ನು ಗುರುತಿಸಿ" ಎಂಬುದಿರಬಹುದು ಅಥವಾ ಸ್ಥಳೀಯ ಆಸ್ಪತ್ರೆಗೆ ಹೋಗುವ ಮಾರ್ಗವನ್ನು ತಿಳಿಸಲು ಸೂಚಿಸಬಹುದು ಅಥವಾ ಶಾಲೆಯ ಹೊರಗಿರುವ ಮರಗಳನ್ನು ಎಣಿಸು ಎಂಬಿತ್ಯಾದಿಯಾಗಿ ಇರಬಹುದು.

**6. ಕೊನೆಯ ಪದ ಮುಂದಿನ ಪದ**

ಈ ಚಟುವಟಿಕೆಗೆ ಸಾಕಷ್ಟು ಸಂಖ್ಯೆಯಲ್ಲಿ ಮಕ್ಕಳ ಸಾಹಿತ್ಯ ಪುಸ್ತಕಗಳು ಬೇಕಾಗುತ್ತವೆ. ಮಕ್ಕಳಿಗೆ ಪುಸ್ತಕಗಳನ್ನು ಹಂಚಿ, ಪ್ರತಿಯೊಂದು ಮಗುವೂ ತನ್ನ ಬಳಿ ಇರುವ ಪುಸ್ತಕವನ್ನು ಸುಲಭವಾಗಿ ಓದುವಂತಿರಬೇಕು. ಪುಸ್ತಕದ ಯಾವುದೇ ಪುಟವನ್ನು ತೆರೆದು ಬಲಬದಿಯ ಪುಟವನ್ನು ನೋಡಲು ಹೇಳಿರಿ. ಪುಟದ ಕೊನೆಯಲ್ಲಿ ಪೂರ್ಣವಿರಾಮ ಇದೆಯೇ? ಇರುವುದಾದಲ್ಲಿ ಮಗು ಮತ್ತೊಂದು ಪುಟ ತೆರೆಯಬೇಕು. ಈಗ ಎಲ್ಲ ಮಕ್ಕಳೂ ಬಲಬದಿಯ ಪುಟವನ್ನು ಸದ್ದಿಲ್ಲದೇ ಓದಲಿ. ಪುಟದ ಕೊನೆಯನ್ನು ತಲುಪಿದ ಮೇಲೆ ಓದುವುದನ್ನು ನಿಲ್ಲಿಸಲಿ. ಮುಂದಿನ ಪುಟ ತೆರೆಯಬಾರದು ಎಂದು ಮಕ್ಕಳಿಗೆ ಹೇಳಿರಿ. ಮುಂದಿನ ಪುಟದಲ್ಲಿ ಇರಬಹುದಾದ, ಮುಂದಿನ ಪದ ಯಾವುದಿರಬಹುದು ಎಂದು ಊಹಿಸಲು ಮಕ್ಕಳಿಗೆ ಹೇಳಿರಿ. ಮಕ್ಕಳು ಊಹಿಸಿದ ಮೇಲೆ ಅವರ ಊಹೆ ಸರಿ ಇದೆಯೇ ಎಂದು ಪರಿಶೀಲಿಸಲು ಹೇಳಿರಿ. ಸರಿಯಾದ ಪದ ಊಹಿಸಿದ ಮಗುವಿಗೆ ಉಳಿದ ಮಕ್ಕಳೆಲ್ಲರೂ ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸಬಹುದು ಎಲ್ಲರಿಗೂ ಅವಕಾಶ ದೊರೆತ ಮೇಲೆ ಅವರು ಈಗ ಮುಂದಿನ ಪುಟದ ಎಡಬದಿಯನ್ನು ತೆಗೆದು ಓದಲಾರಂಭಿಸುತ್ತಾರೆ. ಈ ಸಲ ಹಿಂದಿನ ಪುಟದ ಕೊನೆಯ ಪದ ಯಾವುದಾಗಿತ್ತು ಎಂದು ನೆನಪಿಸಿಕೊಂಡು ಹೇಳಲು ಮಕ್ಕಳಿಗೆ ಹೇಳಿರಿ.

**7. ಮೂರು ಪ್ರಶ್ನೆಗಳು**

ಮಕ್ಕಳನ್ನು ಎರಡು ಗುಂಪುಗಳಲ್ಲಿ ವಿಂಗಡಿಸಿ ಎದುರು ಬದುರಾಗಿ ಸಾಲಾಗಿ ಕೂರಿಸಿರಿ. ಪ್ರತಿಯೊಂದು ಮಗುವಿಗೂ ಒಂದೊಂದು ಪುಸ್ತಕ ನೀಡಿ, ಯಾವುದಾದರೂ ಪುಟ ತೆರೆಯಲು ಹೇಳಿರಿ. ಮಗು ಪುಟದ ಬಲಬದಿಯನ್ನು ಓದಿ ಬಳಿಕ ತನ್ನ ಎದುರಿಗೆ ಕುಳಿತಿರುವ ಮಗುವಿಗೆ ಆ ಪುಸ್ತಕ ನೀಡಲಿ. ಈ ಸಲ ಪ್ರತಿಯೊಂದು ಮಗುವೂ ತನ್ನ ಜೊತೆಯ ಮಗು ಆಗಷ್ಟೇ ಓದಿದ ಪುಟವನ್ನು ಓದಲಿ. ಓದಿದ ಮೇಲೆ, ಆ ಮಗು ಮೂರು ಪ್ರಶ್ನೆಗಳನ್ನು ಕೇಳಬಹುದು. ಅದಕ್ಕೆ ಎದುರಿಗೆ ಕುಳಿತಿರುವ ಮಗು ಉತ್ತರಿಸಬೇಕು. ಪ್ರಾರಂಭದಲ್ಲಿ ಮಗುವಿಗೆ ಏನು ಕೇಳಬೇಕೆಂದು ನಿರ್ಧರಿಸಲು ಆಗದಿರಬಹುದು. ಆಗ ನೀವು ಯಾವ ತರಹದ ಪ್ರಶ್ನೆಗಳನ್ನು ಕೇಳಬಹುದು ಎಂದು ಉದಾಹರಣೆಯಾಗಿ ತೋರಿಸಬಹುದು. ಮಗು ಯಾವುದನ್ನು ಓದಿದೆಯೋ ಅದರ ಬಗ್ಗೆ ಪ್ರಶ್ನೆಗಳನ್ನು ಕೇಳಲು ನೀವು ಮಗುವಿಗೆ ಸಹಾಯ ಮಾಡಬಹುದು.

**8. ಪದ್ಯ ಮಿಶ್ರಣ**

ಇದು ಬಹಳ ಜಟಿಲವಾದ ಚಟುವಟಿಕೆ. ಇದಕ್ಕೆ ಮುಂಚಿತವಾಗಿಯೇ ಜಾಗರೂಕತೆಯಿಂದ ನೀವು ಸಿದ್ಧರಾಗಬೇಕು. ಒಮ್ಮೆ ನೀವು ಸಾಮಗ್ರಿ ಸಿದ್ಧಪಡಿಸಿದ ಮೇಲೆ ಅದನ್ನು ನೀವು ಹಲವು ಬಾರಿ ಬಳಸಬಹುದು. ಇದರ ಫಲಿತಾಂಶ ಎಷ್ಟು ಚೇತೋಹಾರಿಯಾಗಿ ಇರುತ್ತದೆ ಎಂಬುದು ನಿಮಗೇ ತಿಳಿಯುತ್ತದೆ. ಹಲವಾರು ನಾಲ್ಕೈದು ಸಾಲಿನ ಪದ್ಯಗಳನ್ನು ಆಯ್ಕೆ ಮಾಡಿ, ಪ್ರಾಸಬದ್ಧ ಪದ್ಯಗಳಾದರೆ ಒಳ್ಳೆಯದು. ಎಷ್ಟು ಮಂದಿ ಮಕ್ಕಳಿರುವರೋ ಅಷ್ಟು ಸಂಖ್ಯೆಯ ಪದ್ಯಗಳನ್ನು ಇಟ್ಟುಕೊಳ್ಳಬೇಕು. ನೀವು ಈ ಚಟುವಟಿಕೆಯನ್ನು 20 ಮಕ್ಕಳೊಂದಿಗೆ ಕೈಗೊಳ್ಳುವುದಾದರೆ ಎಲ್ಲಾ ಇಪ್ಪತ್ತು ಪದ್ಯಗಳ ಮೊದಲ ಸಾಲನ್ನು ಒಂದು ಪ್ರತ್ಯೇಕ ಕಾಗದದ ಮೇಲೆ ಬರೆದುಕೊಳ್ಳಿ. ಪ್ರತಿ ಹಾಳೆಯ ಮೇಲೂ ಬೇರೆ ಮತ್ತೊಂದು ಪದ್ಯದ ಎರಡನೆಯ ಸಾಲನ್ನು ಬರೆಯಿರಿ. ಇದೇ ರೀತಿ ಮೂರನೆಯ ಹಾಗೂ ನಾಲ್ಕನೆಯ ಸಾಲುಗಳನ್ನು ಬೇರೆ ಬೇರೆ ಪದ್ಯಗಳಿಂದ ಆಯ್ದುಕೊಂಡು ಬರೆಯಿರಿ. ಹೀಗೆ ಇಪ್ಪತ್ತು ಕಾಗದಗಳು ಸಿದ್ಧವಾಗುತ್ತವೆ. ಪ್ರತಿಯೊಂದು ಕಾಗದದ ಮೇಲೂ ಐದು ವಿವಿಧ ಪದ್ಯಗಳ ಒಂದೊಂದು ಸಾಲು ಇರುತ್ತದೆ. ಅದು ಈ ರೀತಿ ಇರುತ್ತದೆ:

*1 ಝುಣ! ಝುಣ! ಝುಣ!*

*2 ಮುದುರಿಕೊಂಡು ಮೊಕ*

*3 ನಡುವೆ ಮೇವ ದನ!*

*4 ನಿಮಿಷಕೆ ಸಾವಿರ ಮೈಲು!*

*5 ಕಲಿತ ಮೂರು ಜನ*[†]

ಮಕ್ಕಳು ವೃತ್ತಾಕಾರದಲ್ಲಿ ಕುಳಿತುಕೊಳ್ಳಲಿ. ಪ್ರಾರಂಭದಲ್ಲಿ "ನಿಮ್ಮ ಕಾಗದದಲ್ಲಿ ಇರುವ ಪದ್ಯಗಳ ಸಾಲುಗಳೆಲ್ಲವೂ ಮಿಶ್ರಣವಾಗಿದ್ದು ಮೊದಲ ಸಾಲಿಗೆ ಸೇರಿದ ಉಳಿದ ನಾಲ್ಕು ಸಾಲುಗಳು ಯಾವುವು ಎಂದು ಪತ್ತೆ ಮಾಡಿ" ಎಂದು ಅವರಿಗೆ ಹೇಳಿ. ಒಂದು ಮಗುವಿಗೆ ಅದರ ಕಾಗದದ ಮೇಲಿರುವ ಎರಡನೆಯ ಸಾಲನ್ನು ಓದಲು ಹೇಳಿರಿ. ಉಳಿದೆಲ್ಲ ಮಕ್ಕಳೂ ಆ ಎರಡನೆಯ ಸಾಲನ್ನು ಜಾಗರೂಕತೆಯಿಂದ ಕೇಳಿ ಆ ಎರಡನೆಯ ಸಾಲು ತಮ್ಮ ಪದ್ಯಕ್ಕೆ ಸೇರಿದ ಸಾಲೇ ಎಂಬುದನ್ನು ಪರಿಶೀಲಿಸಿಕೊಳ್ಳಲಿ. ಆ ಎರಡನೆಯ ಸಾಲು ತನ್ನ ಪದ್ಯಕ್ಕೆ ಸೇರಿದ್ದು ಎಂದು ಯಾವ ಮಗುವಿಗೆ ಅನ್ನಿಸುತ್ತದೋ ಆ ಮಗು ಕೈಯೆತ್ತಲಿ. ಆ ಮಗುವಿನ ಆಯ್ಕೆ ಸರಿಯಾಗಿದ್ದಲ್ಲಿ (ಶಿಕ್ಷಕರ ಪ್ರಕಾರ), ಮಗು ಆ ಸಾಲನ್ನು ಬರೆದುಕೊಳ್ಳಲಿ. ಈ ಎರಡನೆಯ ಸಾಲನ್ನು ಯಾವ ಮಗು ನೀಡುತ್ತದೋ ಆ ಮಗು ತನ್ನ ಹಾಳೆಯಲ್ಲಿನ ಸಾಲನ್ನು ಅಳಿಸಿಕೊಳ್ಳಲಿ/ಒಡೆದುಹಾಕಲಿ. ಈಗ ಮತ್ತೊಂದು ಮಗು ತನ್ನ ಎರಡನೆಯ ಸಾಲನ್ನು ಓದುತ್ತದೆ. ಪ್ರತಿಯೊಂದು ಮಗುವೂ ತನಗೆ ಸೂಕ್ತವಾದ ಮೂರನೆಯ ಸಾಲನ್ನು ಹುಡುಕುವವರೆಗೂ ಇದನ್ನು ಹೀಗೆಯೇ ಮುಂದುವರಿಸಿ.

---

[†] ಈ ಎಲ್ಲಾ ಐದು ಪದ್ಯಗಳ ಸಾಲುಗಳು ಜಿ.ಪಿ. ರಾಜರತ್ನಂ ಅವರ 'ಕಂದನ ಕಾವ್ಯಮಾಲೆ' ಪುಸ್ತಕದಲ್ಲಿವೆ. ಪ್ರಕಾಶಕರು: ಸಪ್ನ ಬುಕ್ ಹೌಸ್

## 9. ಪ್ರತಿಕ್ರಿಯಿಸುವುದು

ಕಥೆ ಹಾಗೂ ಪದ್ಯಗಳಂತೆ ಸಾಹಿತ್ಯಿಕ ಸಾಮಗ್ರಿಗಳಿಗೆ ಪ್ರತಿಕ್ರಿಯಿಸಲು ಒಂದು ಚಿತ್ರಕ್ಕೆ ಪ್ರತಿಕ್ರಿಯಿಸುವ ಹಂತಗಳು ಹಾಗೂ ಪುಟ 22 ರಲ್ಲಿ ಚರ್ಚಿಸಲಾಗಿರುವಂತೆ, ಈ ಹಂತಗಳಿಗೆ ಸಂಬಂಧಿಸಿದ ಪ್ರಶ್ನೆಗಳು ಬಹಳ ಪ್ರಸ್ತುತ.

ನೀವು ಮಕ್ಕಳಿಗೆ ಕಥೆಗಳು, ನಿಯತಕಾಲಿಕೆಗಳು ಅಥವಾ ಪುಸ್ತಕಗಳನ್ನು ಹಂಚುವಾಗ ಪುಟ 22 ರಲ್ಲಿ ಸೂಚಿಸಲಾಗಿರುವಂತೆ ನಿಮ್ಮ ಪ್ರಶ್ನೆಗಳನ್ನು ಸಿದ್ಧಪಡಿಸಿಟ್ಟುಕೊಳ್ಳಿ. ಮಕ್ಕಳು ಓದು ಮುಗಿಸಿದ ಮೇಲೆ ಅಥವಾ ಮುಗಿಸಿ ಸ್ವಲ್ಪ ಹೊತ್ತಾದ ಮೇಲೆ ನೀವು ಮಕ್ಕಳ ಪ್ರತಿಕ್ರಿಯೆಗಳ ಆಧಾರದ ಮೇಲೆ ಚರ್ಚೆಗಳನ್ನು ನಡೆಸಲು ಆ ಪ್ರಶ್ನೆಗಳನ್ನು ಬಳಸಿಕೊಳ್ಳಬಹುದು. ಆದರೆ ಪ್ರತಿ ಸಲ ಅವರು ಏನನ್ನಾದರೂ ಓದಿದಾಗಲೆಲ್ಲ ಇದನ್ನು ನೀವು ಮಾಡಬಾರದು. ಒಂದು ವಾರದಲ್ಲಿ ಏನನ್ನು ಓದಿದೆವು ಎಂದು ಮಕ್ಕಳು ಚರ್ಚೆ ಮಾಡಲು ನೀವು ಪ್ರಾಯಶಃ ವಾರದಲ್ಲಿ ಒಂದು ದಿವಸವನ್ನು ಆಯ್ಕೆ ಮಾಡಿಕೊಳ್ಳಬಹುದು. ಕಥೆಗಳು ಹಾಗೂ ಪದ್ಯಗಳಿಗೆ ಮಕ್ಕಳು ನೀಡುವ ಪ್ರತಿಕ್ರಿಯೆಗಳನ್ನು ಮೌಲ್ಯ ಮಾಪನ ಮಾಡಬಾರದು ಅಥವಾ ಅವರ ಪ್ರತಿಕ್ರಿಯೆ 'ತಪ್ಪು' ಎಂದು ಎಂದಿಗೂ ಹೇಳಬಾರದು. ಒಂದು ಮಗು ತಾನು ಓದಿದ್ದರ ವಸ್ತುವನ್ನು ವಿರೂಪಗೊಳಿಸಿ ನೀಡುವ ಪ್ರತಿಕ್ರಿಯೆಯನ್ನೂ ಒಳಗೊಂಡಂತೆ ಪ್ರತಿಯೊಂದು ಪ್ರತಿಕ್ರಿಯೆಗೂ ಬೆಲೆ ಇದೆ. ಒಂದು ಪಠ್ಯದ ವಸ್ತುವನ್ನು ಮಗು ಗ್ರಹಿಸುವ ರೀತಿಯನ್ನು ಅದರ ಪ್ರತಿಕ್ರಿಯೆ ಸೂಚಿಸುತ್ತದೆ. ಮಕ್ಕಳನ್ನು ಅವರಿಗೆ ಇಷ್ಟಬಂದಂತೆ ಅಭಿಪ್ರಾಯ ಹೇಳಲು ಬಿಡಬೇಕು. ಮುಂದೊಂದು ದಿನ ಮಗು ತಾನು ಓದಿದ್ದನ್ನು ಭಿನ್ನವಾಗಿ ಬಹುಶಃ ಇನ್ನೂ ಹೆಚ್ಚು 'ಖಚಿತವಾಗಿ' ಗ್ರಹಿಸಲು ಸಾಧ್ಯವಾಗಬಹುದು.

### ಪ್ರಾರಂಭಿಸಿದ ನಂತರ

ಇಲ್ಲಿ ವಿವರಿಸಲಾಗಿರುವ ಚಟುವಟಿಕೆಗಳು ಹೊಸ ಚಟುವಟಿಕೆಗಳಿಗೆ ಆರಂಭಿಕ ಬಿಂದುವಾಗಬಲ್ಲವು. ಹೊಸ ಚಟುವಟಿಕೆಗಳ ಆಧಾರದ ಮೇಲೆ ಹೊಸ ಸಾಮಗ್ರಿಗಳು ಸಿದ್ಧವಾಗುತ್ತವೆ. ಇಲ್ಲಿ ಸೂಚಿಸಲಾದ ಮಾರ್ಗದಲ್ಲಿ ಓದುವುದನ್ನು ಪ್ರಾರಂಭಿಸಿದ ಮಗುವು ಯಾವುದೇ ಓದುವ ಸಾಮಗ್ರಿಯನ್ನು ಗ್ರಹಿಕೆಗೆ ಯೋಗ್ಯವಾದುದು ಎಂದು ಕಂಡುಕೊಳ್ಳುವುದನ್ನು ಒಬ್ಬ ಶಿಕ್ಷಕರಾಗಿ ನೀವು ಆದಷ್ಟು ಬೇಗನೆ ಗುರುತಿಸುವಿರಿ. ಹಳೆಯ ಸುದ್ದಿ ಪತ್ರಿಕೆಗಳ ಒಂದು ಚೂರೂ ಸಹ ಒಂದು ಓದಿನ ಆಟಕ್ಕೆ ಬಳಕೆಯಾಗಬಹುದು. ಆ ಸುದ್ದಿಪತ್ರಿಕೆಯ ಚೂರನ್ನು ಸಣ್ಣ ಸಣ್ಣದಾಗಿ ಹರಿದು/ಕತ್ತರಿಸಿ ಅದರಲ್ಲಿ ಮುದ್ರಿತವಾಗಿರುವ ವಾಕ್ಯಗಳನ್ನು ಮರುಜೋಡಣೆ ಮಾಡಲು ಮಕ್ಕಳಿಗೆ ಹೇಳಬಹುದು. ಒಬ್ಬ ಒಳ್ಳೆಯ ಓದುಗನಾಗಲು ಅಗತ್ಯವಿರುವ ಕೌಶಲಗಳ ಅಭಿವೃದ್ಧಿಗೆ ರದ್ದಿ ಕಾಗದವನ್ನೂ ಸಹ ಒಂದು ಸಾಧನವನ್ನಾಗಿ ಬಳಸಿಕೊಳ್ಳಬಹುದು. ಆ ಕೌಶಲಗಳು ಈ ರೀತಿ ಇರುತ್ತವೆ: ಜಾಣ್ಮೆಯ ಊಹೆ, ಪಠ್ಯಕ್ಕೆ ಅರ್ಥವನ್ನು ಹೊಂದಿಸುವುದು, ಒಬ್ಬರ ಊಹೆ ಸರಿ ಇದೆಯೇ ಇಲ್ಲವೇ ತೀರ್ಮಾನಿಸುವುದು.

ಮಗು ಓದುವುದನ್ನು ಕಲಿತ ಮೇಲೆ, ಮಗು ವಿವಿಧ ಉದ್ದೇಶಗಳಿಗಾಗಿ ಓದುವುದನ್ನು ಖಾತರಿ ಪಡಿಸಿಕೊಳ್ಳುವುದು ಶಿಕ್ಷಕರ ಕೆಲಸವಾಗಿದೆ. ನಮ್ಮ ಬಹುತೇಕ ಪ್ರಾಥಮಿಕ ಶಾಲೆಗಳು ಓದನ್ನು ವಿವಿಧ ಉದ್ದೇಶಗಳಿಗಾಗಿ ಓದಲು ಪ್ರೋತ್ಸಾಹ

ನೀಡುವುದಿಲ್ಲ. ಪಠ್ಯಪುಸ್ತಕವನ್ನು ಓದುವುದು ಮತ್ತು ಪರೀಕ್ಷೆಗಳಿಗೆ ಸಿದ್ಧವಾಗುವುದಕ್ಕಷ್ಟೇ ಅವು ಸೀಮಿತವಾಗಲು ಬಯಸುತ್ತವೆ. ಹೊಸ ಮಾಹಿತಿ ಪಡೆಯಲು ಓದುವುದು, ವೈಯಕ್ತಿಕ ಆಸಕ್ತಿಯನ್ನು ಅಭಿವೃದ್ಧಿಪಡಿಸಿಕೊಳ್ಳಲು ಓದುವುದು, ಸುಮ್ಮನೆ ಖುಷಿಗಾಗಿ ಓದುವುದು ಇಂಥದನ್ನೆಲ್ಲ ನಿರ್ಲಕ್ಷಿಸಲಾಗಿದೆ. ಓದುವಿಕೆಯು ಮಗುವಿನ ವ್ಯಕ್ತಿತ್ವದ ಸರ್ವಾಂಗೀಣ ಬೆಳವಣಿಗೆಯ ಭಾಗವಾಗುವಲ್ಲಿ ವಿಫಲವಾಗಿದೆ. ಇದರ ಪರಿಣಾಮವಾಗಿ ಓದುವ ಸಾಮರ್ಥ್ಯವಿರುವ ಮಗುವು ಒಬ್ಬ ಒಳ್ಳೆಯ ಓದುಗನಾಗಲು ವಿಫಲವಾಗುತ್ತದೆ. ಇದು ನಿಜಕ್ಕೂ ಬಹುದೊಡ್ಡ ವೈಫಲ್ಯವೇ ಆಗಿದೆ. ಆದರೆ ಇದನ್ನು ಯಾವ ಶಿಕ್ಷಕರು ಬೇಕಾದರೂ ಸರಿಪಡಿಸಬಹುದಾಗಿದೆ

---

**ಅಧ್ಯಾಯ ೪**

**ಬರವಣಿಗೆ**

ಬರವಣಿಗೆಯೂ ಒಂದು ರೀತಿಯ ಮಾತೇ ಆಗಿದೆ. ನಾವು ಬರೆಯುವುದು ಇನ್ನೊಬ್ಬರೊಂದಿಗೆ ಸಂವಹನ ನಡೆಸಲಾಗಿರುತ್ತದೆ, ಅವರು ನಮ್ಮೆದುರು ಇಲ್ಲದಿರಬಹುದು. ಆದರೆ ನಾವು ಬರೆಯುವಾಗ ಮತ್ತೊಬ್ಬರೊಂದಿಗೆ ಸಂವಹನ ನಡೆಸುತ್ತಿರುತ್ತೇವೆ. ಅದೇ ರೀತಿ ಏನನ್ನಾದರೂ, ಅದು ಒಂದು ಚೂರು ಮಾಹಿತಿ ಆಗಿರಬಹುದು, ಒಂದು ಆಲೋಚನೆ ಇರಬಹುದು ಅಥವಾ ಒಂದು ನೆನಪಿರಬಹುದು, ಅದನ್ನು ಸಂರಕ್ಷಿಸಿಡಲು ನಾವು ಬಹಳಷ್ಟು ಬರೆಯುತ್ತೇವೆ. ಆದರೆ ಇದೂ ಕೂಡ ಒಂದು ರೀತಿಯಲ್ಲಿ ಮಾತೇ ಆಗಿರುತ್ತದೆ, ಒಬ್ಬ ವ್ಯಕ್ತಿ ತನ್ನೊಂದಿಗೇ ತಾನೇ ಮಾತನಾಡಿಕೊಳ್ಳುತ್ತಿರುವುದು ಎಂಬಂತೆ. ನಾನು ನನ್ನ ಒಂದು ದಿನದ ಅನುಭವಗಳನ್ನು ಒಂದು ಡೈರಿಯಲ್ಲಿ ಬರೆದುಕೊಂಡರೆ ನಾನು ಈ ನೆನಪುಗಳನ್ನು ಸಂರಕ್ಷಿಸಿಟ್ಟುಕೊಂಡಿರುತ್ತೇನೆ. ಅದು, ಬಹುಶಃ ಮುಂದೊಂದು ದಿನ ಆ ಅನುಭವಗಳನ್ನು ನಾನೇ ಸ್ವತಃ ಓದಿಕೊಳ್ಳಬಹುದು ಎಂಬ ನಿರೀಕ್ಷೆಯಿಂದಲೂ ನಾನು ಬರೆಯುತ್ತಿರಬಹುದು.

ಶಿಕ್ಷಕರಾಗಿ ನಾವು, ಚಿಕ್ಕ ಮಕ್ಕಳಿಗೆ ಬರವಣಿಗೆಯನ್ನು ಮಾತುಕತೆಯ ಒಂದು ರೂಪ ಎಂಬಂತೆ ಪರಿಚಯಿಸಿಕೊಡಬೇಕಾಗುತ್ತದೆ. ಮಕ್ಕಳು ಶಾಲೆಗೆ ಮೊದಲ ಸಲ ಬರುವ ವೇಳೆಗಾಗಲೇ ಹಲವಾರು ತರಹದ

ಜನರೊಂದಿಗೆ, ಹಲವಾರು ವಿಷಯಗಳ ಬಗೆಗೆ ಧೈರ್ಯವಾಗಿ ಮಾತನಾಡುವ ಸಾಮರ್ಥ್ಯ ಗಳಿಸಿಕೊಂಡಿರುತ್ತಾರೆ. ಅವರ 'ಕೇಳುಗ ಸಂವೇದನೆ' ''sense of audience' (ಮಕ್ಕಳು ತಮ್ಮ ಜ್ಞಾನವನ್ನು ಇತರರು ಅರ್ಥಮಾಡಿಕೊಳ್ಳುವಂತೆ ಹೇಳಬಲ್ಲವರಾಗಿರುತ್ತಾರೆ) ಅದಾಗಲೇ ಬೆಳೆಯಲಾರಂಭಿಸಿರುತ್ತದೆ. ಈ ಸಂವೇದನೆಯು ಬರೆಯುವುದನ್ನು ಕಲಿಯಲು ಬಹಳ ಉಪಯುಕ್ತ. ಆದರೆ ಈ ಸಂವೇದನೆಯನ್ನು ಯಾವಾಗಲೂ ಎದುರಿಗಿರಲಾಗದ ಕೇಳುಗರಿಗೆ ಅನ್ವಯಿಸಬೇಕಾಗುತ್ತದೆ. ಕೆಲವು ಬಗೆಯ ಕೇಳುಗರು ಎದುರಿಗಿರಬಹುದು, ಉದಾಹರಣೆಗೆ, ಶಿಕ್ಷಕರು ಅಥವಾ ಇತರ ಮಕ್ಕಳು ಅಥವಾ ಬರೆಯುತ್ತಿರುವ ಮಕ್ಕಳೆ ಸ್ವತಃ ಓದುತ್ತಿರುವುದು. ಬರವಣಿಗೆಯನ್ನು ಮಗುವು ಮತ್ತೊಬ್ಬರೊಂದಿಗೆ ಮಾತನಾಡುವ ಒಂದು ಕ್ರಿಯೆಯಾಗಿ ನೋಡುತ್ತಿದೆ ಎಂಬುದನ್ನು ಖಾತರಿಪಡಿಸಿಕೊಳ್ಳುವುದು ಶಿಕ್ಷಕರ ಕರ್ತವ್ಯವಾಗಿದೆ.

ಸದ್ಯಕ್ಕೆ ಏನಾಗುತ್ತಿದೆಯೋ ಅದಕ್ಕಿಂತ ಭಿನ್ನವಾದುದೇನೋ ಬೇಕು ಎಂಬುದರ ಬಗ್ಗೆ ನಾವು ಸ್ಪಷ್ಟವಾಗಿರಬೇಕಾಗಿದೆ. ಬರವಣಿಗೆ ಒಂದು ಯಾಂತ್ರಿಕವಾದ ಕೌಶಲ ಎಂಬಂತೆ ಲಕ್ಷಾಂತರ ಚಿಕ್ಕ ಮಕ್ಕಳಿಗೆ ಹೇಳಿಕೊಡಲಾಗುತ್ತಿದೆ. ವರ್ಣಮಾಲೆಯ ಅಕ್ಷರಗಳ ಆಕಾರಗಳನ್ನು ಕಲಿಸುವ ಮೂಲಕ ಇದು ಪ್ರಾರಂಭವಾಗುತ್ತದೆ. ಪ್ರತಿ ಅಕ್ಷರವನ್ನೂ ಹತ್ತು ಹಲವು ಬಾರಿ ನಕಲು ಮಾಡುವಂತೆ ಮಕ್ಕಳಿಗೆ ಹೇಳಲಾಗುತ್ತದೆ. ಬಳಿಕ ಮಕ್ಕಳು ಬರೆದ ಅಕ್ಷರಗಳ ಆಕೃತಿಯನ್ನು ಶಿಕ್ಷಕರು ಪರಿಶೀಲಿಸುತ್ತಾರೆ. ಈ ರೀತಿ ವರ್ಣಮಾಲೆಯ ಎಲ್ಲಾ ಅಕ್ಷರಗಳನ್ನೂ ಪೂರ್ಣಗೊಳಿಸಲು ಅನೇಕ ಶಾಲೆಗಳು ಹಲವು ವಾರಗಳನ್ನು ತೆಗೆದುಕೊಳ್ಳುತ್ತವೆ. ಈ ದೀರ್ಘಾವಧಿಯಲ್ಲಿ ಮಗುವಿನ ದೃಷ್ಟಿಯಲ್ಲಿ ಬರವಣಿಗೆಯ ಕಲಿಕೆ ತನ್ನೆಲ್ಲ ಉದ್ದೇಶವನ್ನೂ ಕಳೆದುಕೊಂಡುಬಿಡುತ್ತದೆ. ಆಮೇಲೆ ಪದಗಳನ್ನು ಬರೆಯಿರಿ ಎಂದು ಮಕ್ಕಳಿಗೆ ಹೇಳಿದಾಗ, ಮತ್ತೆ ಮುಂದುವರಿದು , ವಾಕ್ಯಗಳನ್ನು ರಚಿಸಿರಿ ಎಂದಾಗ ಮಕ್ಕಳು ಏನು ಬರೆಯಬೇಕೆಂದು ಶಿಕ್ಷಕರೇ ಹೇಳಲೆಂದು ಅವರತ್ತ ನೋಡುತ್ತಾರೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಬರವಣಿಗೆ ಏನನ್ನಾದರೂ ಹೇಳಲು ಇರುವ ಒಂದು ಮಾರ್ಗ ಎಂಬುದು ಅವರಿಗೆ ಅರ್ಥವಾಗಿರುವುದಿಲ್ಲ. ಅವರು ಬರವಣಿಗೆಯನ್ನು ಶಿಕ್ಷಕರು ತಮಗೆ ಕಲಿಸಿಕೊಟ್ಟಿರುವ ಒಂದು ಸಂಪ್ರದಾಯದಂತೆ, ಒಂದು ಕಸರತ್ತಿನಂತೆ ಕಾಣುತ್ತಾರೆ. ಇಂತಹ ಪರಿಸ್ಥಿತಿಯಿಂದ ಹೊರಬರಬೇಕೆಂದರೆ ನಾವು ಬರವಣಿಗೆಯನ್ನು ಮಾತಿನ ಒಂದು ವಿಸ್ತರಣೆಯಾಗಿ ಪ್ರಸ್ತುತಡಿಸಬೇಕಾಗುತ್ತದೆ. ಆದ್ದರಿಂದ ಬರವಣಿಗೆಯ ಚಟುವಟಿಕೆಯನ್ನು ಆಯೋಜಿಸಲು 'ಮಾತು' ಅಧ್ಯಾಯದಲ್ಲಿ (2 ನೇ ಅಧ್ಯಾಯದಲ್ಲಿ) ನೀಡಲಾದ ಚಟುವಟಿಕೆಗಳು ಬಹಳ ಉಪಯುಕ್ತವಾಗಿವೆ. ಮಾತು ಕೇಳುಗರಿಗೆ ಹಲವಾರು ಸಮಸ್ಯೆಗಳನ್ನು ಇತ್ಯರ್ಥಪಡಿಸಿಕೊಳ್ಳಲು ಅವಕಾಶ ನೀಡುತ್ತದೆ. ಆದ್ದರಿಂದಲೇ ಬರವಣಿಗೆಯನ್ನು ಕಲಿಸುವುದು ಬಹಳ ಮುಖ್ಯವಾಗಿದೆ

**ಮಾತು ಮತ್ತು ಬರಹದ ನಡುವೆ**

ಇಲ್ಲಿ ಮೊದಲನೆಯದಾಗಿ ನೆನಪಿಡಬೇಕಾದ ವಿಷಯವೆಂದರೆ, ಒಂದು ಮಕ್ಕಳ ಗುಂಪಿಗೆ ಬರವಣಿಗೆಯನ್ನು ಪರಿಚಯಿಸುವ ಮೊದಲು ಅವರು ತಮ್ಮ ಬದುಕಿನ ಬಗೆಗೆ ಮತ್ತು ತಮ್ಮ ಸುತ್ತಲೂ ನಡೆಯುತ್ತಿರುವ ಸಂಗತಿಗಳ ಬಗೆಗೆ ಧೈರ್ಯವಾಗಿ ಮಾತನಾಡಬಲ್ಲರು ಎಂಬುದನ್ನು ಖಾತರಿಪಡಿಸಿಕೊಳ್ಳಬೇಕಾಗುತ್ತದೆ. ಅಂದರೆ ಇದರರ್ಥ ಅಂತಹ ಮಕ್ಕಳಿಗೆ,

1. ತಮ್ಮ ಅನುಭವ ಹಾಗೂ ಗ್ರಹಿಕೆಗಳನ್ನು ಇತರರೊಂದಿಗೆ ಹಂಚಿಕೊಳ್ಳುವ ಬಯಕೆ ಇರಬೇಕು

2. ತಮ್ಮ ಅನುಭವ ಅಥವಾ ಅಭಿಪ್ರಾಯವನ್ನು ನಿರೂಪಿಸುವ ಸಾಮರ್ಥ್ಯ ಇರಬೇಕು.

ಇಂತಹ ಮಕ್ಕಳು ಬರವಣಿಗೆ ಕಲಿಯಲು ಸಿದ್ಧರಾಗಿರುತ್ತಾರೆ. ಆದಾಗ್ಯೂ ಅವರು ಪದಗಳು ಹಾಗೂ ವಾಕ್ಯಗಳನ್ನು ಬರೆಯುವ ಮೊದಲು ತುಂಬಾ ಸಿದ್ಧತೆ ಮಾಡಬೇಕಾದ ಅವಶ್ಯಕತೆ ಇದೆ.

ಯಾವುದೇ ಭಾಷೆಯಲ್ಲಿ ಬರೆಯುವುದೆಂದರೆ ಹಾಳೆಯ ಮೇಲೆ ಜಟಿಲವಾದ ಆಕಾರಗಳನ್ನು ರಚಿಸುವುದಾಗಿದೆ. ಇದಕ್ಕೆ ಖಚಿತವಾಗಿ ಗ್ರಹಿಸುವುದು ಮತ್ತು ವರ್ಣಮಾಲೆಯ ಪ್ರತಿ ಅಕ್ಷರದ ಆಕಾರದಲ್ಲಿರುವ ಸೂಕ್ಷ್ಮ ವ್ಯತ್ಯಾಸಗಳನ್ನು ನೆನಪಿಟ್ಟುಕೊಳ್ಳುವುದು ಅತ್ಯಗತ್ಯ. ಆಲೋಚನೆಗಳು ಹಾಗೂ ಭಾವನೆಗಳನ್ನು ಸಂವಹಿಸಲು 'ಅಮೂರ್ತ ಸಂಕೇತಗಳ' abstract symbols ಬಳಕೆಯ ಸಾಮರ್ಥ್ಯವೂ ಸಹ ಅತ್ಯಗತ್ಯ. ಅವು ಸಂವಹಿಸುವ ಧ್ವನಿಗೂ ಚಿತ್ರರೂಪಕ್ಕೂ ಸಾಮ್ಯತೆ ಇರುವುದಿಲ್ಲವಾದ ಕಾರಣ ಅವು ಅಮೂರ್ತ ಸಂಕೇತಗಳಾಗಿವೆ. ಉದಾಹರಣೆಗೆ 'ಎ' ಎಂಬ ಅಕ್ಷರ 'ಎ' ಎಂಬ ಧ್ವನಿ ಮೌಲ್ಯ ಹೊಂದಿದೆ ಎಂಬುದಕ್ಕೆ ಯಾವುದೇ ನಿರ್ದಿಷ್ಟ ಕಾರಣವಿರುವುದಿಲ್ಲ. ನಾವು ಅದನ್ನು ಸುಮ್ಮನೆ 'ಎ' ಎಂದು ಒಪ್ಪಿಕೊಳ್ಳುತ್ತೇವೆ ಅಷ್ಟೇ. ಇಂಗ್ಲೀಷ್ ಬರೆಯಲು ಬಯಸುವ ಮಗು 'ಎ' ಅನ್ನು 'ಎ' ಎಂದು ಒಪ್ಪಿಕೊಳ್ಳಬೇಕು ಮತ್ತು ಎಲ್ಲೆಲ್ಲಿ 'ಎ' ಎಂಬುದು ಸ್ವತಂತ್ರವಾಗಿ (ಅಂದರೆ 'ಒಂದು' ಎಂಬ ಅರ್ಥದಲ್ಲಿ) ಅಥವಾ ಮತ್ತೊಂದು ಅಕ್ಷರದೊಂದಿಗೆ ಸೂಕ್ತ ಎನಿಸುತ್ತದೆಯೋ ಅಲ್ಲೆಲ್ಲ ಅದನ್ನು ಬಳಸಬೇಕು. ಸರಳವಾಗಿ ಹೇಳುವುದಾದರೆ ಇಂತಹ ಹಲವಾರು ಯಾದೃಚ್ಛಿಕ ಸಂಕೇತಗಳು ಮಗುವಿಗೆ ಪೂರ್ತಿಯಾಗಿ ರೂಢಿಯಾಗಬೇಕಾಗುತ್ತದೆ.

ಮೇಲೆ ತಿಳಿಸಲಾದ ಸಾಮರ್ಥ್ಯಗಳು ಒಂದೇ ದಿನದಲ್ಲಿ ಬೆಳೆದುಬಿಡುವುದಿಲ್ಲ. ಮಕ್ಕಳಿಗೆ ನಿಯಮಿತವಾಗಿ ಬಣ್ಣ ಹಚ್ಚುವ ಅಭ್ಯಾಸ ಮಾಡಿಸುವ ಮೂಲಕ ಮತ್ತು ತಮ್ಮಿಷ್ಟ ಬಂದಂತೆ ಬರೆಯುವ ಅವಕಾಶ ಕಲ್ಪಿಸುವ ಮುಖಾಂತರ ಇದನ್ನು ಬೆಳೆಸುವುದು ಅತ್ಯುತ್ತಮ ವಿಧಾನವಾಗಿದೆ. ಎಲ್ಲೋ ಕೆಲವು ಶಾಲೆಗಳಲ್ಲಿ ಎಲ್ಲಾ ಮಕ್ಕಳಿಗೂ ಚಿತ್ರ ಬಿಡಿಸುವ ಕಾಗದ ಮತ್ತು ಬಣ್ಣಗಳನ್ನು ಖರೀದಿಸಲು ಖರ್ಚು ಮಾಡುವಷ್ಟು ಹಣ ಇರುತ್ತದೆ. ಆದರೆ ಹಲವಾರು ಶಾಲೆಗಳು ಈ ಕೆಳಗಿನ ಸಾಮಗ್ರಿಗಳ ನೆರವಿನಿಂದ ಬಣ್ಣ ಹಚ್ಚುವ, ಚಿತ್ರ ಬಿಡಿಸುವ ಚಟುವಟಿಕೆಯನ್ನು ಆಯೋಜಿಸಬಹುದು.

- ಒಂದು ತುಂಡು ಇದ್ದಿಲು, ಸೀಮೆಸುಣ್ಣ, ಸ್ಲೇಟು ಬಳಪ ಮತ್ತು ಬೆಣಚು ಕಲ್ಲು, ಇಟ್ಟಿಗೆ ಚೂರು;
- ಸ್ಥಳೀಯವಾಗಿ ಲಭ್ಯವಿರುವ ಇತರ ವಿಧದ ಬಣ್ಣಗಳು; ಬೀಟ್ ರೂಟ್,
- ಹಳೆಯ ಸುದ್ದಿ ಪತ್ರಿಕೆ, ಬಳಸಿರುವ ಹಾಳೆಗಳು, ಹಳೆಯ ಕಾಪಿ ಪುಸ್ತಕ ಅಥವಾ ಯಾವುದೇ ಇತರ ಕಾಗದ;
- ಪ್ಲಾಸ್ಟಿಕ್ ಅಥವಾ ತಗಡಿನ ಲೋಟಗಳು ಅಥವಾ ಪೆಟ್ಟಿಗೆಗಳು

ಇಂತಹ ಬಹುತೇಕ ಸಾಮಗ್ರಿಗಳನ್ನು ಕ್ರಮೇಣ ಸಂಗ್ರಹಿಸಬಹುದು. ಕೆಲವು ವರ್ಷಗಳಲ್ಲಿ ಈ ರೀತಿಯ ಅಗತ್ಯವಿರುವ ಎಲ್ಲ ಸಾಮಗ್ರಿಗಳನ್ನು ಶಿಕ್ಷಕರು ಸಂಚಯಿಸಿಕೊಳ್ಳಬಹುದು. ಈ ಪಟ್ಟಿಯಲ್ಲಿ ಒಂದು ವಸ್ತು ಕಾಣೆಯಾಗಿದೆ, ಅದುವೆ ಬ್ರಷ್ .

ಮಕ್ಕಳು ಒಣಗಿದ ಬಣ್ಣಗಳನ್ನು ಬಳಸುವುದಾದಲ್ಲಿ ನಮಗೆ ಬ್ರಷ್‌ಗಳ ಅವಶ್ಯಕತೆ ಇರುವುದಿಲ್ಲ. ಒಂದು ವೇಳೆ ಶಿಕ್ಷಕರಿಗೆ ಬೇಕೆನಿಸಿದರೆ ಮಕ್ಕಳು ಬಣ್ಣಗಳನ್ನು ನೀರಿನಲ್ಲಿ ಬೆರೆಸಬಹುದಾಗಿದೆ. ಆಗ ಶಿಕ್ಷಕರು ದಪ್ಪನಾದ ಬ್ರಷ್‌ಗಳನ್ನು ಸಂಗ್ರಹಿಸುವ ಮಾರ್ಗಗಳನ್ನು ಹುಡುಕಿಕೊಳ್ಳಬೇಕಾಗುತ್ತದೆ. ತುಂಬ ಚಿಕ್ಕ ಮಕ್ಕಳಿಗೆ ಹತ್ತಿಯಿಂದ ಉಣ್ಣೆಯಿಂದ ಬ್ರಷ್‌ಗಳನ್ನು ಮಾಡಲು ಸಾಧ್ಯವಿದೆ. ಆದರೆ ಅಂತಹ ಬ್ರಷ್‌ಗಳನ್ನು ನಿರ್ವಹಿಸುವುದಾಗಲಿ, ಬಳಸುವುದಾಗಲಿ ಬಹಳ ತ್ರಾಸದಾಯಕ ಕೆಲಸವಾಗಿದೆ. ಹಾಗಲ್ಲದೆ ಯೋಗ್ಯವಾದ ಬ್ರಷ್‌ಗಳನ್ನು ಒಮ್ಮೆ ಖರೀದಿಸಿ ಪ್ರತಿ ಸಲ ಬಳಸಿದ ಮೇಲೂ ಅವನ್ನು ಜಾಗರೂಕತೆಯಿಂದ ತೊಳೆದು  ಇರಿಸಿಕೊಂಡಾಗ  ಆ ಬ್ರಷ್‌ಗಳು ಬಹಳ ಕಾಲದವರೆಗೆ ಬಾಳಿಕೆ ಬರುತ್ತವೆ.

ಈ ಚಿತ್ರ ಬಿಡಿಸುವುದು, ಗೆರೆ ಎಳೆಯುವುದು ಇವಕ್ಕೆಲ್ಲ  ವ್ಯವಸ್ಥೆ ಮಾಡುವವರಾರು? ಹಾಳೆಗಳನ್ನು ಹಂಚುವುದು, ಬಣ್ಣಗಳನ್ನು ಬೆರೆಸುವುದು,  ಲೋಟದ ನೀರು ಚೆಲ್ಲಿದರೆ ಅದನ್ನು ಒರೆಸುವುದು ಇಂತಹ ಕೆಲಸಗಳನ್ನು ಮಾಡುವವರಾರು? ಈ ಎಲ್ಲ ಹೊಣೆಗಾರಿಕೆಗಳನ್ನು ಹೊತ್ತುಕೊಂಡು, ಇದನ್ನೆಲ್ಲ ಏರ್ಪಾಟು ಮಾಡಿಕೊಳ್ಳಲು ಮಕ್ಕಳ ನೆರವನ್ನು ಪಡೆಯದೇ ಎಲ್ಲವನ್ನೂ ಆಮೇಲೆ ತಾವೇ  ಮಾಡುವ ಶಿಕ್ಷಕರು  ಬೇಗ ಆಯಾಸಗೊಳ್ಳುತ್ತಾರೆ, ಹತಾಶರಾದರೂ ಆಗಬಹುದು. ಇಂತಹ ಚಟುವಟಿಕೆಗಳ ಗೊಡವೆಯೇ ಬೇಡವೆಂದು ಅದನ್ನು ನಿಲ್ಲಿಸಬಹುದು. ಹಾಗೇನಾದರೂ ಮಾಡಿದರೆ ಅದು ನಿಜಕ್ಕೂ ದುರದೃಷ್ಟಕರ ನಿರ್ಧಾರವಾಗುತ್ತದೆ. ಇಂತಹ ಸಾಧ್ಯತೆಯನ್ನು ನಿವಾರಿಸಲು ಪ್ರತಿಯೊಬ್ಬ ಶಿಕ್ಷಕರೂ ಹಾಳೆಗಳನ್ನು ಹಂಚುವ, ಬಣ್ಣ ನೀರನ್ನು ಬೆರೆಸುವ, ಚಿತ್ರಗಳನ್ನು ಚೊಕ್ಕವಾಗಿ ಸಂಗ್ರಹಿಸಿಡುವ, ಬ್ರಷ್‌ಗಳನ್ನು ತೊಳೆದಿಡುವ ಕೆಲಸಗಳನ್ನು ಮಕ್ಕಳಿಂದ  ಮಾಡಿಸಬೇಕಾಗುತ್ತದೆ. ಮಕ್ಕಳಿಗೆ ನೀಡುವ ಈ ತರಬೇತಿ ಅವರ ಕಲಿಕೆಯ ಒಂದು ಭಾಗವಾಗಿದೆ.

ಮಕ್ಕಳು ತಮ್ಮ ಚಿತ್ರದಲ್ಲಿ ಏನನ್ನು  ಬಿಡಿಸುತ್ತಾರೆ? ಇದೊಂದು ಸಂವಹನ  ಮಾಡುವ ಹಾಗೂ ಅಭಿವ್ಯಕ್ತಿಸುವ ಬಯಕೆಯನ್ನು ಮೂಡಿಸುವಲ್ಲಿ  ಪ್ರಮುಖ  ಪ್ರಶ್ನೆಯಾಗಿದೆ. ನಾವು ಮತ್ತೊಮ್ಮೆ  ವರ್ತಮಾನದ  ಪರಿಸ್ಥಿತಿಯತ್ತ ಗಮನ ಹರಿಸಿ  ಅದರಿಂದ ಪ್ರಜ್ಞಾಪೂರ್ವಕವಾಗಿ ದೂರ ಸರಿಯಬೇಕಾಗುತ್ತದೆ. ಯಾವುದೇ ತರಹದ ಚಿತ್ರ ಬಿಡಿಸುವ ಚಟುವಟಿಕೆ ಮಾಡಿಸುವ ಬಹುತೇಕ ಶಾಲೆಗಳಲ್ಲಿ ಯಾವುದೋ ಸಿದ್ಧ ಮಾದರಿಯ ವಿಷಯದ ಅಥವಾ ವಸ್ತುವಿನ ಮೇಲೆ ಚಿತ್ರ ಬರೆಯಲು ಸೂಚಿಸುತ್ತಾರೆ. ಉದಾಹರಣೆಗೆ ತಾವರೆ ಹೂವು, ಗಾಳಿಪಟ, ಬಾಳೆ ಹಣ್ಣು ಇತ್ಯಾದಿ. ನಿಜ, ತಾವರೆ ಹೂವಿನ ಚಿತ್ರ ಬರೆಯುವುದು ತಪ್ಪೇನೂ ಅಲ್ಲ. ಆದರೆ ಶಿಕ್ಷಕರಾದವರು  ಐದು ವರ್ಷದ ಮಗುವಿಗೆ ನೀನು ಇಂಥದೇ ಚಿತ್ರ ಬಿಡಿಸಬೇಕು ಎಂದು ಹೇಳುವುದಿದೆಯಲ್ಲ, ಅದು ತಪ್ಪಾಗುತ್ತದೆ.

ತಾನು ಅಧಿಕಾರಯುತ ಸ್ಥಾನದಲ್ಲಿದ್ದೇನೆ ಎಂಬುದು ಶಿಕ್ಷಕರಿಗೆ ಗೊತ್ತೇ ಇರುತ್ತದೆ. ಮಗುವಿಗೆ ಅವರು ಇಂಥದನ್ನು ಮಾಡಬೇಕು ಎಂದು ಹೇಳಿದರೆ ಅದನ್ನು ಮಗು ಒಂದು ಆದೇಶದಂತೆ ಭಾವಿಸುತ್ತದೆ. ಶಿಕ್ಷಕರು ಮಗುವಿಗೆ ಬಾಳೆಹಣ್ಣಿನಂತಹ ಒಂದು ನಿರ್ದಿಷ್ಟ ಚಿತ್ರವನ್ನೇ ಬರೆಯಬೇಕು ಎಂದು ಹೇಳಿದಾಗ ಮಗು ಅದನ್ನು ಒಂದು ಆದೇಶದಂತೆ ಸ್ವೀಕರಿಸುತ್ತದೆ. ಈ ತರಹದ ಆದೇಶಗಳಿಂದ ಮಗು ಈ ಕೆಳಗಿನ ಅಂಶಗಳನ್ನು ಕಲಿಯುತ್ತದೆ:

- ನಾನು ನನ್ನ ಚಿತ್ರದಲ್ಲಿ ಏನನ್ನು  ಬಿಡಿಸಬೇಕು ಎಂಬುದು ಶಿಕ್ಷಕರಿಗೆ ಗೊತ್ತಿದೆ;
- ನನ್ನನ್ನು ನಾನು ಅಭಿವ್ಯಕ್ತಿಸಿಕೊಳ್ಳಲು ಚಿತ್ರಕಲೆ ಒಂದು ಮಾಧ್ಯಮವಲ್ಲ;
- ನಾನು ಯಾವುದನ್ನು ಬಾಳೆಹಣ್ಣು ಎಂದು ತಿಳಿದು  ಬಿಡಿಸುತ್ತೇನೋ ಅದು ಶಿಕ್ಷಕರಿಂದ ಅನುಮೋದಿತವಾಗಬೇಕಾಗುತ್ತದೆ.

ಮಕ್ಕಳು ಕಷ್ಟಪಟ್ಟು ಸಣ್ಣ ಪೆನ್ಸಿಲ್ ಬಳಸುವುದು, ಶಿಕ್ಷಕರ ಆದೇಶದ ಮೇರೆಗೆ ಬಹಳ ಶ್ರದ್ಧೆಯಿಂದ ತಾವರೆಯ ಹೂವಿನ ಚಿತ್ರವನ್ನೋ, ಬಾಳೆಹಣ್ಣಿನ ಚಿತ್ರವನ್ನೋ  ಬಿಡಿಸುವುದು ಮತ್ತು ತಮಗೆ ತೃಪ್ತಿಯಾಗುವ ರೀತಿ  ಚಿತ್ರರಚನೆ ಮಾಡಲು ಸಾಧ್ಯವಾಗದೇ ಹೋಯಿತಲ್ಲ ಎಂಬ ಕಾರಣಕ್ಕೆ ಅಷ್ಟೇ ಹತಾಶೆ ಪಡುವುದು ಶಿಶುವಿಹಾರ  ಮತ್ತು ಪ್ರಾಥಮಿಕ ಶಾಲೆಗಳಲ್ಲಿ ಒಂದು ಸಾಮಾನ್ಯ ದೃಶ್ಯವಾಗಿದೆ. ಪ್ರಾಥಮಿಕ ಶಾಲೆಗಳಲ್ಲಿ ಬ್ರಷ್‌ಗಳು ಇರದಿದ್ದರೇನಂತೆ, ಬಹುತೇಕ ಶಾಲೆಗಳು ಮಕ್ಕಳು ಎರೇಸರ್‌ಗಳನ್ನು ಇಟ್ಟುಕೊಳ್ಳಬೇಕು ಎಂದು ಒತ್ತಾಯಿಸುತ್ತವೆ. ಇನ್ನು ಮಕ್ಕಳು ಎರೇಸರ್‌ಗಳನ್ನು ಪರಿಪೂರ್ಣತೆಯನ್ನು ಸಾಧಿಸುವ ಒಂದು ಸಾಧನದಂತೆ ಬಳಸುತ್ತಾರೆ. ಒಂದು ಬಾಳೆಹಣ್ಣಿನ ಚಿತ್ರ ಬರೆಯುತ್ತಾರೆ, ಬಳಿಕ ಅದು ಚೆನ್ನಾಗಿಲ್ಲ ಅಂದುಕೊಂಡು ಅದನ್ನು ಎರೇಸರ್ ಮೂಲಕ ಅಳಿಸುತ್ತಾರೆ, ಆಮೇಲೆ ಮತ್ತೆ ಬರೆಯುತ್ತಾರೆ ಮತ್ತೆ ಅಳಿಸುತ್ತಾರೆ. ಕಾಗದ ಹರಿಯುವವರೆಗೂ ಶಿಕ್ಷಕರಿಗೆ ಕೊನೆಗೆ ಬೇಸತ್ತುವವರೆಗೂ ಹೀಗೇ ಮಾಡುತ್ತಿರುತ್ತಾರೆ. ಇಂತಹ ಅಭ್ಯಾಸ ಖಂಡಿತವಾಗಿ ಅವರ ಬೆರಳುಗಳ ಚಲನೆಗೆ ಸಾಕಷ್ಟು ಅವಕಾಶ ಮಾಡಿಕೊಡುತ್ತದೆ (ಬರಹಪೂರ್ವ ಸಿದ್ಧತೆಗೆ?) ಆದರೆ ಸಮರ್ಥವಾಗಿ ಸಂವಹನ  ನಡೆಸಿದೆ ಎಂಬ ತೃಪ್ತಿ ಇದರಿಂದ ಸಿಗುವುದಿಲ್ಲ. ಇದು ಈ ಇಡೀ ಚಟುವಟಿಕೆಯನ್ನು ವ್ಯರ್ಥವಾಗಿಸುತ್ತದೆ,  ವಿನಾಶಕಾರಿಯಾಗಿಸುತ್ತದೆ.

ಈ ಮಾಧ್ಯಮವನ್ನು ಮುಕ್ತವಾಗಿ ಶೋಧಿಸಿಕೊಳ್ಳಲು, ಮಗುವನ್ನು ಅದರ ಪಾಡಿಗೆ ಅದನ್ನು ಮುಕ್ತವಾಗಿ ಬಿಟ್ಟರೆ ಚಿತ್ರ ಬಿಡಿಸುವ ಮತ್ತು ರೇಖಾಚಿತ್ರ ರಚನೆಯ ಪ್ರಕ್ರಿಯೆಗಳು ಮಗುವಿನ ಸರ್ವಾಂಗೀಣ ಬೆಳವಣಿಗೆಗೆ ಸಾಕಷ್ಟು ಕೊಡುಗೆ ನೀಡುತ್ತವೆ,  ವಿಶೇಷವಾಗಿ ಭಾಷೆಯನ್ನು ಬಳಸುವುದರ ಮತ್ತು ಬರೆಯುವುದರ ಬೆಳವಣಿಗೆಗೆ.  ನೀವು ತುಂಬ ಚಿಕ್ಕ ಮಕ್ಕಳಿಗೆ (ಅಂದರೆ ಮೂರು ಅಥವಾ ನಾಲ್ಕು ವರ್ಷದ ಮಕ್ಕಳಿಗೆ) ಕಲಿಸುತ್ತಿದ್ದರೆ, ಮಗುವಿಗೆ ಸಾಕಷ್ಟು ಕಾಗದ ಮತ್ತು ಬಣ್ಣಗಳನ್ನು ಒದಗಿಸಿ ಮಗು ತನ್ನ ಕೆಲಸ ಪೂರ್ಣಗೊಳಿಸುವುದನ್ನು ತಾಳ್ಮೆಯಿಂದ ನೋಡುವುದು ಒಬ್ಬ ಶಿಕ್ಷಕರಾಗಿ ನಿಮ್ಮ ಕರ್ತವ್ಯವಾಗಿದೆ. ಶಾಲೆಗಳಲ್ಲಿ  ಎಲ್ಲವನ್ನೂ  ಶಿಕ್ಷಕರೇ ನಿರ್ದೇಶಿಸುವ ನಮ್ಮ ದೇಶದ ಶಿಕ್ಷಣ ವ್ಯವಸ್ಥೆಯನ್ನು ನೋಡುವುದಾದರೆ, ತಾವು ಏನನ್ನು ಬರೆಯಬೇಕು ಅಥವಾ ಹೇಗೆ ಬರೆಯಬೇಕು ಎಂಬುದನ್ನು ಶಿಕ್ಷಕರು  ಹೇಳಬೇಕು ಎಂದು ಬಹಳ ಮಕ್ಕಳು  ನಿರೀಕ್ಷಿಸುತ್ತಾರೆ. ನಮ್ಮ ಸ್ವಂತ ಆಲೋಚನೆಗಳನ್ನು ವ್ಯಕ್ತಪಡಿಸಲು ಇದನ್ನೊಂದು ಆನಂದದಾಯಕ ಮಾಧ್ಯಮವನ್ನಾಗಿ ಬಳಸುವ ಬದಲು ಶಿಕ್ಷಕರ ಮಾರ್ಗದರ್ಶನ ಕೇಳುವ ಈ ಅಭ್ಯಾಸವನ್ನು ಬಿಡಿಸುವುದು ಸುಲಭವಲ್ಲ. ಶಿಕ್ಷಕರು ಸಂಯಮಿಯೂ, ಪ್ರೋತ್ಸಾಹದಾಯಕರೂ ಆಗಿದ್ದು ತಮ್ಮ ಗುರಿ ಏನು ಎಂಬುದನ್ನು ಅರಿತಿದ್ದಾಗ ಈ ಅಭ್ಯಾಸವನ್ನು ಬಿಡಿಸಲು ಸಾಧ್ಯವಾಗುತ್ತದೆ.

ನಿಜ, ಮಗುವಿನ ಕೈಯ ಚಲನೆಯನ್ನು ಅಭಿವೃದ್ಧಿಪಡಿಸಲು ಬಣ್ಣಗಳೊಂದಿಗೆ ಚಿತ್ರ ಬಿಡಿಸುವುದೊಂದೇ ಮಾರ್ಗವಲ್ಲ. ಸಾಕಷ್ಟು ಇತರ ಚಟುವಟಿಕೆಗಳು ಇದನ್ನು ಅಭಿವೃದ್ಧಿ ಪಡಿಸಲು ನೆರವಾಗಬಲ್ಲವು. ಇಂತಹ ಚಟುವಟಿಕೆಗಳಲ್ಲಿ ಒಂದು ಪಾತ್ರೆಯಿಂದ ಇನ್ನೊಂದು ಪಾತ್ರೆಗೆ ನೀರು ಸುರಿಯುವುದು, ಬೀಜದಂತಹ ವಸ್ತುಗಳನ್ನು (ಇದಕ್ಕೆ ಅವರೆಕಾಳು, ಕಡಲೆಕಾಳು ಮುಂತಾದ ದೊಡ್ಡ ಧಾನ್ಯಗಳು ಉತ್ತಮ) ವಿಂಗಡಿಸುವುದು, ವಸ್ತುಗಳನ್ನು ಎತ್ತುವುದು ಮತ್ತು ಪುನಃ ಅಲ್ಲೇ ಇರಿಸುವುದು, ವಸ್ತುವಿನ ಆಕಾರಗಳನ್ನು ಸ್ಪರ್ಶಿಸುವುದು ಇವೇ ಮುಂತಾದವು ಉದಾಹರಣೆಗಳಾಗಿವೆ. ಇಂತಹ ಚಟುವಟಿಕೆಗಳು ಮನೆಗಳಲ್ಲಿ ಬಹಳ ಸಾಮಾನ್ಯವಾಗಿ ನಡೆದಿರುತ್ತವೆ ಎಂದು ನಿರೀಕ್ಷಿಸಬಹುದು. ಆದರೆ ದುರದೃಷ್ಟವಶಾತ್ ಅದು ನಿಜವಲ್ಲ.

ಬಹಳಷ್ಟು ಮನೆಗಳಲ್ಲಿ, ಬಡವರ ಮನೆ ಹಾಗೂ ಮಧ್ಯಮ ವರ್ಗದವರ ಮನೆಗಳೆರಡರಲ್ಲೂ, ಮಕ್ಕಳಿಗೆ ಯಾವುದೇ ವಸ್ತುವನ್ನು ಮುಟ್ಟಲು ಬಿಡುವುದಿಲ್ಲ. ಅದರಲ್ಲೂ ಸುಲಭವಾಗಿ ಒಡೆದುಹೋಗುವ ವಸ್ತುಗಳನ್ನು ಮುಟ್ಟಲಂತೂ ಬಿಡುವುದೇ ಇಲ್ಲ. ಅಂದರೆ ಇದರರ್ಥ, ವಸ್ತುಗಳನ್ನು ಹೇಗೆ ಜಾಗರೂಕತೆಯಿಂದ ಬಳಸಬೇಕು ಎಂಬುದನ್ನು ಕಲಿಯಲು ಮಗುವಿಗೆ ಸಹಾಯ ಮಾಡಬಲ್ಲ ಯಾವುದೋ ಒಂದನ್ನು ಮಗು ಕಲಿಯದಂತೆ ತಡೆ ಹಿಡಿಯಲಾಗಿದೆ. ತತ್ಪರಿಣಾಮವಾಗಿ ಬಹುತೇಕ ಮಕ್ಕಳು ತಾವು ಹೊಂದಬಹುದಾದ ಕೆಲವು ಮೂಲಭೂತ ಅನುಭವಗಳನ್ನು ಹೊಂದುವಲ್ಲಿ ವಂಚಿತರಾಗಿದ್ದಾರೆ. ಇಂತಹ ವಂಚನೆ ಮಗುವಿನ ಬರವಣಿಗೆಯ ಮೇಲೆ ಉಂಟು ಮಾಡುವ ಪರಿಣಾಮ ಪರೋಕ್ಷ ರೂಪದ್ದಾಗಿರಬಹುದು. ಆದರೆ ಈ ಪರಿಣಾಮ ಬಹಳ ಗಂಭೀರವಾದುದು. ಈ ಬಗೆಯ ವಂಚನೆಯಿಂದ ಹೊರಬರಲು ಮಗುವಿಗೆ ನೆರವಾಗಬಹುದಾದ ಇಂತಹ ಚಟುವಟಿಕೆಗಳನ್ನು ಒದಗಿಸುವುದನ್ನು ನಿರ್ಲಕ್ಷಿಸುವ ಶಿಕ್ಷಕರು ಮಗುವಿಗೆ ಬರವಣಿಗೆಯ ಕೌಶಲವನ್ನು ಕಲಿಸುವಲ್ಲಿ ಗಂಭೀರವಾದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಇಂತಹ ಸಮಸ್ಯೆಗಳನ್ನು ನಿವಾರಿಸಲು ಬಣ್ಣದಿಂದ ಚಿತ್ರ ಬಿಡಿಸುವುದು ಮತ್ತು ರೇಖಾಚಿತ್ರ ಬಿಡಿಸುವುದು ಅತ್ಯುತ್ತಮ ವಿಧಾನಗಳಾಗಿವೆ.

**ಬರೆಯಲು ಪ್ರಾರಂಭಿಸುವುದು**

ಯಾವ ಹಂತದಲ್ಲಿ ಅಥವಾ ಯಾವ ವಯಸ್ಸಿನಲ್ಲಿ ಮಗುವಿಗೆ ಬರವಣಿಗೆಯನ್ನು ಕಲಿಸಬೇಕು ಎಂಬುದನ್ನು ಪ್ರತಿಯೊಬ್ಬ ಶಿಕ್ಷಕರೂ ತಾನು ಕಲಿಸುತ್ತಿರುವ ಮಗುವಿನ ಮೌಲ್ಯಮಾಪನಕ್ಕೆ ಅನುಗುಣವಾಗಿ ನಿರ್ಧರಿಸಿಕೊಳ್ಳಬೇಕಾಗುತ್ತದೆ. ಚಿತ್ರ ಬಿಡಿಸುವುದು ಮತ್ತು ಇತರ ಚಟುವಟಿಕೆಗಳು ಮಕ್ಕಳ ಕೈ ಹಾಗೂ ಬೆರಳ ಚಲನೆ ಸಾಕಷ್ಟು ಮಟ್ಟಿಗೆ ನಮ್ಯತೆ, ನಿಯಂತ್ರಣಗಳನ್ನು ಸಾಧಿಸಿದೆ ಎಂದು ನಿರ್ಧರಿಸಲು ಒಂದು ಅತ್ಯುತ್ತಮ ಮಾನದಂಡವಾಗಿವೆ. ಪುಸ್ತಕ ಹಾಗೂ ಇತರ ರೂಪದ ಓದುವ ಸಾಮಗ್ರಿಗಳಿಗೆ (ಓದು ಅಧ್ಯಾಯವನ್ನು ನೋಡಿರಿ) ತೆರೆದುಕೊಂಡಿರುವ ಮಕ್ಕಳು ತಾವೇ ಸ್ವತಃ ಬರೆಯುವ ಅವಕಾಶಗಳಿಗೆ ಬೇಡಿಕೆ ಮುಂದಿಡಬಹುದು. ಇದು ಶಿಕ್ಷಕರ ಕೆಲಸವನ್ನು ಸುಲಭಗೊಳಿಸುತ್ತದೆ. ಮಕ್ಕಳು ಏನನ್ನಾದರೂ ಮಾಡಬೇಕು ಎಂದು ಕೇಳಿದಾಗ ಅವರು ಅದನ್ನು ಮಾಡಲು ಆ ಸಮಯದಲ್ಲಿ ತಯಾರಿದ್ದಾರೆ ಎಂಬುದರ ಸೂಚನೆಯಾಗಿದೆ. ಆ ಕೆಲಸ ತುಂಬ ಕಠಿಣ ಎಂದಾದಲ್ಲಿ ಸ್ವಲ್ಪ ಕಾಲದ ನಂತರ ಮಾಡಲೇಬೇಕು ಎಂಬ ಬೇಡಿಕೆ ಹಿಂದಕ್ಕೆ ಸರಿಯಬಹುದು. ಆದರೆ ಕೆಲದಿನಗಳ ನಂತರ ಆ ಬೇಡಿಕೆಯನ್ನು ಮತ್ತೆ ಮುಂದೆ ತರುತ್ತಾರೆ. ಮಕ್ಕಳು ಹಲವಾರು

ವಿಷಯಗಳಿಗೆ ಹೀಗೆಯೇ ಮುಖಾಮುಖಿಯಾಗುವುದು ಮತ್ತು ಹೀಗೆಯೇ ಅದರಲ್ಲಿ ಪ್ರಾವೀಣ್ಯ ಗಳಿಸುವುದು, ಬರವಣಿಗೆಯ ವಿಷಯವೂ ಇದಕ್ಕೆ ಹೊರತಲ್ಲ .

ಬರೆಯುವುದು ಹೇಗೆ ಎಂಬುದನ್ನು ಕಲಿಸಲು ಪ್ರಾರಂಭಿಸಬೇಕು ಎಂದು ನೀವು ನಿರ್ಧರಿಸಿದಾಗ ನೀವು ಮಾಡಬೇಕಾದ ಮೊದಲ ಕೆಲಸವೇನೆಂದರೆ ಅವರು ಯಾವ ವಿಷಯದ ಮೇಲೆ ಬರೆಯಬೇಕು ಬಯಸುತ್ತಾರೆ ಎಂದು ಮಕ್ಕಳನ್ನು ಕೇಳುವುದು. ಮಕ್ಕಳೊಂದಿಗೆ ನೀವು ಮಾತನಾಡುವಾಗ 'ಬರೆ' ಎಂಬ ಕ್ರಿಯಾಪದವನ್ನು ಬಳಸಿದಾಗ ನೀವು ಏನು ಹೇಳುತ್ತಿದ್ದೀರ ಎಂಬುದನ್ನು ಅರ್ಥ ಮಾಡಿಕೊಳ್ಳಲು ಅವರಿಗೆ ಕಷ್ಟವಾಗುವುದಿಲ್ಲ. ಏನು ಬರೆಯಬೇಕು ಎಂಬುದು ಮಗುವಿಗೆ ಗೊತ್ತಾಗದಿದ್ದಲ್ಲಿ ನೀವು ವಸ್ತುಗಳ ಹೆಸರುಗಳನ್ನು ಕೇಳುವ ಮೂಲಕ ಬೇರೊಂದು ಮಾರ್ಗದಲ್ಲಿ ಕಲಿಸಲು ಮುಂದಾಗಿ. ಉದಾಹರಣೆಗೆ, ಅವರು ಮೆಚ್ಚುವ ಪ್ರಾಣಿಗಳು, ಅವರು ಇಷ್ಟ ಪಡುವ ತಿನಿಸುಗಳು, ಅವರನ್ನು ಆಕರ್ಷಿಸುವ ವಸ್ತುಗಳು, ಅವರಲ್ಲಿ ಭಯ ಹುಟ್ಟಿಸುವ ವಸ್ತುಗಳು ಇತ್ಯಾದಿಗಳನ್ನು ವಿಚಾರಿಸಿರಿ. ನೀವು ಪ್ರತಿ ಮಗುವಿನ ಕಾಪಿ ಪುಸ್ತಕದಲ್ಲಿ ಅಥವಾ ನೆಲದ ಮೇಲೆ ಒಂದು ಪದ ಬರೆಯುವುದಾಗಿ ಹೇಳಿ ಮತ್ತು ಬರೆಯಲು ಪ್ರತಿಯೊಂದು ಮಗುವೂ ಬೇರೆ ಬೇರೆ ಪದಗಳನ್ನು ನೀಡಬೇಕೆಂದು ಹೇಳಿ. ನೀವು ಎಲ್ಲಿ ಬರೆದಿದ್ದೀರೋ ಅದರ ಕೆಳಗೇ ಆ ಪದವನ್ನು ನಕಲು ಮಾಡಿಕೊಳ್ಳಲು ಅಥವಾ ಪ್ರಾರಂಭದಲ್ಲಿ ಅದರ ಮೇಲೆಯೇ ಬರೆಯಲು ಮಗುವಿಗೆ ಹೇಳಿರಿ.

ಬರವಣಿಗೆಯ ಕಲಿಕೆಗೆ ಒಂದು ಸಂಪನ್ಮೂಲವಾಗಿ ನೆಲವು ಉತ್ಕೃಷ್ಟವಾದ ಸ್ಥಳವಾಗಿದೆ. ನೆಲದ ಮೇಲೆ ದೊಡ್ಡ ಗಾತ್ರದ ಅಕ್ಷರಗಳನ್ನು ಬರೆಯಲು ಸಾಧ್ಯವಾಗುತ್ತದೆ. ಸೀಮೆಸುಣ್ಣವನ್ನು ಅಥವಾ ಇದ್ದಲನ್ನು ಅಥವಾ ಸ್ಥಳೀಯವಾಗಿ ಸಿಗುವ ಯಾವುದೋ ಒಂದನ್ನು ಖರೀದಿಸಬೇಕಾದ ಕಾರಣ ಇದು ಬಹಳ ಅಗ್ಗದ ಸಾಧನವಾಗಿದೆ. ಒಂದೇ ಒಂದು ಸಮಸ್ಯೆ ಎಂದರೆ, ಚಟುವಟಿಕೆ ಮುಗಿದ ಮೇಲೆ ನೆಲವನ್ನು ಸ್ವಚ್ಛಗೊಳಿಸಬೇಕಾಗುತ್ತದೆ. ದಿನದ ಕೊನೆಗೆ ನೆಲವನ್ನು ಸ್ವಚ್ಛಗೊಳಿಸಲು ಮಕ್ಕಳನ್ನು ಬಳಸಿಕೊಳ್ಳಲು ನಿಮಗೆ ಸಾಧ್ಯವಾದಲ್ಲಿ ನೀವು ಬರವಣಿಗೆಯ ಕಲಿಕೆಯಲ್ಲಿ ಅತ್ಯುನ್ನತ ಮಟ್ಟದ ಉತ್ಸಾಹವನ್ನು ಉಂಟು ಮಾಡಬಲ್ಲಿರಿ. ಮಕ್ಕಳನ್ನು ನೆಲ ಸ್ವಚ್ಛಗೊಳಿಸುವ ಕಾಯಕದಲ್ಲಿ ತೊಡಗಿಸಿಕೊಂಡರೆ ಕೆಲವು ಪೋಷಕರು ಆಕ್ಷೇಪಿಸಬಹುದು. ಅಂತಹ ಆಕ್ಷೇಪಣೆಗಳಿಗೆ ಹೇಗೆ ಸ್ಪಂದಿಸಬೇಕು ಎಂದು ನೀವೇ ನಿರ್ಧರಿಸಬೇಕಾಗುತ್ತದೆ. ಪ್ರಾರಂಭಿಸಲು ಇದೇ ಏಕಮಾತ್ರ ಮಾರ್ಗವೇನಲ್ಲ. ಮಕ್ಕಳಿಗೆ ಕಲಿಸುವವರು ಹಲವಾರು ಮಾರ್ಗಗಳ ಬಗ್ಗೆ ಕೇಳಿರುತ್ತಾರೆ. ವರ್ಣಮಾಲೆಯ ಅಕ್ಷರಗಳನ್ನು ಹೇಗೆ ಬರೆಯಬೇಕು ಎಂದು ಕಲಿಸುವುದು ಪ್ರಾರಂಭದಲ್ಲಿ ಅತ್ಯಂತ ಸಾಮಾನ್ಯ ವಿಧಾನವಾಗಿದೆ. ಹಾಗೆ ಕಲಿಸಲು ಶಿಕ್ಷಕರು ಅಕ್ಷರಗಳನ್ನು ದೊಡ್ಡ ಗಾತ್ರದಲ್ಲಿ ಬರೆಯಲು ಕಪ್ಪು ಹಲಗೆಯನ್ನು ಬಳಸುತ್ತಾರೋ ಅಥವಾ ಅಕ್ಷರಗಳನ್ನು ಕಾರ್ಡ್ ಬೋರ್ಡುಗಳಲ್ಲಿ ಕತ್ತರಿಸುತ್ತಾರೋ ಅಥವಾ ವರ್ಣಮಾಲೆಯ ಪುಸ್ತಕವನ್ನು ನೋಡಿಕೊಂಡು ನಕಲು ಮಾಡಿಕೊಳ್ಳಲು ಹೇಳುತ್ತಾರೋ ಅದು ಮುಖ್ಯವಲ್ಲ. ಆದರೆ ಒಂದು ವಿಷಯ ನೆನಪಿಡಬೇಕು. ಅಕ್ಷರಗಳಿಗೆ ಅರ್ಥವಿರುವುದಿಲ್ಲ. ಆದ್ದರಿಂದ ವಿಪರೀತವಾಗಿ ಅಭ್ಯಾಸ ಮಾಡಿಸುವುದರಿಂದ ಅಥವಾ ಅದೊಂದನ್ನೇ ಅಭ್ಯಾಸ ಮಾಡಿಸುವುದರಿಂದ ಅರ್ಥಪೂರ್ಣವಾದ ಸಂವಹನಕ್ಕೆ ಬರವಣಿಗೆಯೂ ಒಂದು ಮಾಧ್ಯಮವಾಗಬಹುದು ಎಂಬುದನ್ನು ಕಾಣುವಲ್ಲಿ ಮಕ್ಕಳು ಉತ್ಸಾಹ ಕಳೆದುಕೊಳ್ಳಬಹುದು. ಆದಾಗ್ಯೂ, ಶಿಕ್ಷಕರು

ಪದಗಳು ಮತ್ತು ಅರ್ಥದ ನಡುವೆ ಒಂದು ಗಟ್ಟಿಯಾದ ಸಂಬಂಧವನ್ನು ಸ್ಥಾಪಿಸಿದ್ದಾಗ ಅಕ್ಷರಗಳನ್ನು ಕೂಡ ಅರ್ಥಪೂರ್ಣವಾಗಿ ಪರಿಚಯಿಸಬಹುದು.

ಪ್ರಾರಂಭಿಕ ಬರವಣಿಗೆಯಲ್ಲಿ ಅಕ್ಷರಗಳನ್ನು ಕಲಿಸಲು ಯಾಂತ್ರಿಕ ವಿಧಾನವಲ್ಲದೇ ಇನ್ನೂ ಹಲವಾರು ಮಾರ್ಗಗಳಿವೆ. ಉದಾಹರಣೆಗೆ, ಪದಗಳ ಉದ್ದವಾದ ಪಟ್ಟಿಯೊಂದನ್ನು ನೀವು ಇರಿಸಿಕೊಳ್ಳಬಹುದು. ಯಾವ ಅಕ್ಷರ ಕಲಿಸುತ್ತಿರುವಿರೋ ಆ ಅಕ್ಷರದಿಂದ ಪ್ರಾರಂಭವಾಗುವ ಪದಗಳ ಭಾಗವನ್ನು ಪರಿಚಯಿಸಬಹುದು. ಈ ಅಂಶದತ್ತ ಮಗುವಿನ ಗಮನ ಸೆಳೆದು ಬಳಿಕ ಅಂಥದೇ ಅಕ್ಷರಗಳನ್ನು ಹುಡುಕಿರಿ ಎಂದು ಅವರಿಗೆ ಸೂಚಿಸಬಹುದು. ಪ್ರತಿ ಸಲ ನೀವು ಇಂತಹ ಚಟುವಟಿಕೆಗಳನ್ನು ನಡೆಸಬೇಕು. ಕಳೆದ ಸಲ ನೋಡಿದ ಪದಗಳನ್ನು ಪರಿಶೀಲಿಸಲು ಮಕ್ಕಳಿಗೆ ಹೇಳಬಹುದು. ಸಾಮಾನ್ಯವಾಗಿ ಬಳಸುವ ಪದಗಳ ನಿಮ್ಮದೇ ಆದ ಒಂದು ಸಂಗ್ರಹವನ್ನು ನೀವು ಅಭಿವೃದ್ಧಿಪಡಿಸಿಕೊಂಡಲ್ಲಿ ವಿವಿಧ ಲಕ್ಷಣಗಳಿಗೆ (ಉದಾಹರಣೆಗೆ, ಪದಗಳ ಉದ್ದ, ನಾಮ ವಾಚಕ (part of speech) ವಿಷಯಾವಾರು ಇತ್ಯಾದಿ) ಅನುಗುಣವಾಗಿ ನೀವು ಅವನ್ನು ವಿಂಗಡಿಸಬಹುದು ಮತ್ತು ಒಂದು ವರ್ಗಕ್ಕೆ ಸೇರಿದ ಪದಗಳನ್ನು ಗೋಡೆಗೆ ಅಂಟಿಸಬಹುದು. ನಿಮಗಷ್ಟೇ ಸ್ಪಷ್ಟವಾಗಿ ಕಾಣಿಸುವಷ್ಟು ಎತ್ತರದಲ್ಲಿ ಅಂಟಿಸುವುದರಲ್ಲಿ ಅರ್ಥವಿಲ್ಲ. ನಾನು ಹಲವಾರು ಶಾಲೆಗಳಿಗೆ ಭೇಟಿ ನೀಡಿದ್ದೇನೆ. ಅಲ್ಲೆಲ್ಲ ಇಂತಹ ಚಿತ್ರಗಳನ್ನು ಮತ್ತು ಚಾರ್ಟುಗಳನ್ನು ಮಕ್ಕಳಿಗೆ ಕಾಣಿಸದಷ್ಟು ಎತ್ತರದಲ್ಲಿ ನೇತು ಹಾಕಿದ್ದರು. ಇಂಥದನ್ನೆಲ್ಲ ನೋಡದೇ ಹೋಗಿದ್ದರೆ ನಾನು ಈ ಮಾತುಗಳನ್ನು ಹೇಳುತ್ತಿರಲಿಲ್ಲ. ಯಾವುದೇ ವಸ್ತುವನ್ನು ಮಕ್ಕಳ ಕಣ್ಣಿಗೆ ಕಾಣಿಸದಷ್ಟು ಎತ್ತರದಲ್ಲಿ ಇಡುವುದರಿಂದ ಪ್ರಯೋಜನವಿಲ್ಲ ಮತ್ತು ಅದು ಮಕ್ಕಳನ್ನು ಅವಮಾನಿಸಿದಂತೆ.

**ಆರಂಭವನ್ನು ಮೀರಿ**

ಮಕ್ಕಳು ಬರವಣಿಗೆಗೆ ಅಗತ್ಯವಿರುವ ಮೂಲಭೂತ ಕೌಶಲಗಳನ್ನು ಕರಗತ ಮಾಡಿಕೊಂಡ ನಂತರವಷ್ಟೇ ಬರೆಯುವುದು ಹೇಗೆ ಎಂಬುದರ ಬೋಧನೆಯ ನಿಜವಾದ ಸವಾಲು ಪ್ರಾರಂಭವಾಗುತ್ತದೆ. ಮಕ್ಕಳಲ್ಲಿ ಈ ಕೆಳಗಿನ ಸಂಗತಿಗಳನ್ನು ಬೆಳೆಸುವುದು ಮುಖ್ಯ ಸವಾಲಾಗಿದೆ.

1. ಕೇಳುಗರಿರುವರೆಂಬ ಭಾವನೆ ಮತ್ತು

2. ಅಭಿವ್ಯಕ್ತಿಸಬೇಕೆಂಬ ಆಕಾಂಕ್ಷೆ

ಈ ಎರಡು ಉದ್ದೇಶಗಳನ್ನು ಸಾಧಿಸಬೇಕೆಂದರೆ ಪ್ರತಿಯೊಂದು ಸಣ್ಣ ಚಟುವಟಿಕೆಗಳನ್ನು ನಡೆಸುವಾಗಲೂ ಶಿಕ್ಷಕರಾದವರು ದೂರದೃಷ್ಟಿಯನ್ನು ಹೊಂದಿರಬೇಕಾಗುತ್ತದೆ. ಬರೆಯಲು ಮತ್ತು ಮಾತನಾಡಲು ಕೇಳುಗರು ಇರುವರೆಂಬ ಭಾವನೆ ಮತ್ತು ಅಭಿವ್ಯಕ್ತಿಸುವ ಆಕಾಂಕ್ಷೆಗಳೆರಡೂ ಮುಖ್ಯ ಎಂಬುದನ್ನು ಶಿಕ್ಷಕರು ಮನಗಾಣಬೇಕಾಗುತ್ತದೆ.

ಆದ್ದರಿಂದ ಬರವಣಿಗೆಯನ್ನು ಒಳಗೊಂಡ ಯಾವುದೇ ಚಟುವಟಿಕೆಯು ಮಾತನಾಡುವ ಅವಕಾಶದಿಂದಲೂ ಪ್ರಯೋಜನ ಪಡೆಯುತ್ತದೆ. ಹಾಗೆಯೇ ಮಾತನ್ನೊಳಗೊಂಡ ಚಟುವಟಿಕೆಯು ಬರವಣಿಗೆಯಿಂದಲೂ ಪ್ರಯೋಜನ ಪಡೆಯುತ್ತದೆ.

ಕೇಳುಗರು ಇರುವರೆಂಬ ಭಾವನೆ ಎಂದರೆ ನಾವು ಬರೆಯುವಾಗ ನಮ್ಮ ಮನಸ್ಸಿನಲ್ಲಿ ಒಬ್ಬ ನಿರ್ದಿಷ್ಟ ವ್ಯಕ್ತಿಯನ್ನು ಇರಿಸಿಕೊಳ್ಳುವುದು ಎಂದರ್ಥ. ಇನ್ನು ' ಅಭಿವ್ಯಕ್ತಿಸಬೇಕು ಎಂಬ ಆಕಾಂಕ್ಷೆ' ಎಂದರೆ, ನಾವು ಬರೆಯುವಾಗ ಒಂದು ನಿರ್ದಿಷ್ಟ ಉದ್ದೇಶ ಇರಿಸಿಕೊಳ್ಳುವುದು ಎಂದರ್ಥ. ಸಾಮಾನ್ಯವಾಗಿ ಮಕ್ಕಳು ಶಿಕ್ಷಕರು ಓದಲೆಂದು -ಅದು ಪದವಿರಲಿ ಅಥವಾ ವಾಕ್ಯವಿರಲಿ ಅಥವಾ ಇಡೀ ಕತೆ ಇರಲಿ- ಬರೆಯತ್ತಾರೆ. ಒಂದು ತರಗತಿಯ ಬರವಣಿಗೆಯ ಚಟುವಟಿಕೆಯಲ್ಲಿ ಕೇಳುಗರಿದ್ದಾರೆ ಎಂಬ ಮಗುವಿನ ಭಾವನೆಯನ್ನು ವಿಸ್ತರಿಸುವ ಸಲುವಾಗಿ ಶಿಕ್ಷಕರು ವಿವಿಧ ಚಟುವಟಿಕೆಗಳಿಗೆ ನಿರ್ದಿಷ್ಟ ಕೇಳುಗರನ್ನು ಗೊತ್ತುಪಡಿಸಬಹುದಾಗಿದೆ. ಆ ಕೇಳುಗರು ಪಕ್ಕದಲ್ಲಿ ಕುಳಿತ ಮತ್ತೊಂದು ಮಗುವಾಗಿರಬಹುದು, ಅಥವಾ ತರಗತಿಯ ಮತ್ತೊಬ್ಬ ಸಹಪಾಠಿ ಆಗಿರಬಹುದು, ಪಕ್ಕದ ತರಗತಿಯ ಮಗು ಆಗಿರಬಹುದು ಅಥವಾ ಪೋಷಕರೂ ಆಗಬಹುದು. ಊಟದ ವಿರಾಮದ ವೇಳೆಯಲ್ಲಿ ಶಾಲೆಗೆ ಭೇಟಿ ನೀಡುವ ನಾಯಿ, ಬಸ್ಸು ಅಥವಾ ಪಕ್ಕದ ಹಳ್ಳಿಯ ಅಥವಾ ಊರಿನ ಮಕ್ಕಳು ಮುಂತಾದ ಕಲ್ಪಿತ ಕೇಳುಗರು ಸಹ ಬರವಣಿಗೆಗೆ ಪ್ರೋತ್ಸಾಹಕರವಾದ ಅವಕಾಶಗಳನ್ನು ಒದಗಿಸಬಲ್ಲವು. ಮಗು ಬೆಳೆದಂತೆ ಅದರ ಕೇಳುಗರ ಗ್ರಹಿಕೆ ನಿಸ್ಸಂಶಯವಾಗಿ ಸಮಾಜದಲ್ಲಿ ನಿರ್ದಿಷ್ಟ ಪಾತ್ರಗಳನ್ನು ನಿರ್ವಹಿಸುವ ಹಲವು ವಯಸ್ಕರನ್ನು ಒಳಗೊಳ್ಳುವವರೆಗೆ ವಿಸ್ತರಿಸುತ್ತದೆ.

ನಿರ್ದಿಷ್ಟ ಕೇಳುಗರನ್ನು ತಲುಪುವ ಸಲುವಾಗಿ ಮಗು ಭಾಷೆಯನ್ನು ಒಂದು ವಿಶಿಷ್ಟ ತಂತ್ರವಾಗಿ ಬಳಸುವುದನ್ನು ಗಮನಿಸಿದಾಗ ಅಂತಹ ಬಳಕೆಯನ್ನು ಪ್ರೋತ್ಸಾಹಿಸುವುದು ಶಿಕ್ಷಕರ ಕರ್ತವ್ಯವಾಗಿದೆ. ಉದಾಹರಣೆಗೆ, ಒಂದು ಮಗುವಿಗೆ "ನೀನು ನಾಯಿಯನ್ನು ಏಕೆ ಇಷ್ಟ ಪಡುತ್ತೀ ಎಂದು ನಾಯಿಗೆ ವಿವರಿಸಿ ಹೇಳು" ಎಂದು ಸೂಚಿಸಿದಾಗ ನಾಯಿಗೂ ಅರ್ಥವಾಗುವಂತೆ ಮತ್ತು ನಾಯಿಯೂ ಮೆಚ್ಚುವಂತೆ ಮಗು ಏನನ್ನಾದರೂ ಹೇಳುವುದನ್ನು ನಾವು ಪ್ರೋತ್ಸಾಹಿಸಬೇಕಾಗುತ್ತದೆ. ಒಬ್ಬ ವ್ಯಕ್ತಿ ನಾಯಿಗೆ ಹೇಳುವ ಮಾತು ಮತ್ತು ಮಾತಿನ ಶೈಲಿಗೂ, ಒಬ್ಬ ವ್ಯಕ್ತಿ ತನ್ನ ಸ್ನೇಹಿತನಿಗೆ ಹೇಳುವ ಮಾತು, ಅದರ ಶೈಲಿಗೂ ವ್ಯತ್ಯಾಸ ಇರುತ್ತದೆ. ಆ ಮಗು ನಾಯಿಗೆ "ನೀನು ಒಳ್ಳೆಯ ನಾಯಿ, ಕುಳಿತುಕೋ" ಎನ್ನಬಹುದು. ಅದೇ ತನ್ನ ಗೆಳತಿಗೆ "ನಾನು ನಿನ್ನನ್ನು ಇಷ್ಟ ಪಡುತ್ತೇನೆ. ಏಕೆಂದರೆ ನೀನು ನನ್ನೊಂದಿಗೆ ಆಟವಾಡುವೆ" ಎನ್ನಬಹುದು. ಯಾವುದೇ ನಿರ್ದಿಷ್ಟ ಕೇಳುಗನಿಗೆ ಹೇಳುವ ವಿಷಯದ ಆಯ್ಕೆಯು ಪದಗಳು, ಪದಗುಚ್ಛಗಳು ಮತ್ತು ಇಡೀ ವಾಕ್ಯದ ರಚನೆಯನ್ನು ಪ್ರಭಾವಿಸುತ್ತವೆ. ಆದರೆ ಶಿಕ್ಷಕರು ಪದಗಳು ಹಾಗೂ ರಚನೆಗಳ ಕುರಿತು ಪ್ರತ್ಯೇಕವಾಗಿ ಕಲಿಸಬೇಕಾದ ಅಗತ್ಯವಿಲ್ಲ. ಮಕ್ಕಳಿಗೆ ವಿವಿಧ ರೀತಿಯ ಕೇಳುಗರಿಗೆ ಬರೆಯುವ ಅವಕಾಶ ದೊರೆತಾಗ ಅವರು ಕ್ರಮೇಣ ತಮ್ಮ ಆಯ್ಕೆಯ ಪರಿಣಾಮಗಳನ್ನು ಕಲಿಯುತ್ತ ಹೋಗುತ್ತಾರೆ

ಏನನ್ನಾದರೂ ಅಭಿವ್ಯಕ್ತಿಸುವುದು ಮಗುವಿನ ವ್ಯಕ್ತಿತ್ವದ ವಿವಿಧ ಆಯಾಮಗಳನ್ನು ಅವಲಂಬಿಸಿದೆ. ಮಗು ತನ್ನ ಗ್ರಹಿಕೆಯ ಬಗೆಗೆ ವಿಶ್ವಾಸ ಹೊಂದುವುದು ಪ್ರಾಯಶಃ ಅತಿ ಮುಖ್ಯವಾದ ಆಯಾಮವಾಗಿದೆ. ಒಂದು ಮಗುವಿಗೆ ತಾನು ನೋಡಿದ್ದರ ಬಗ್ಗೆ ಮಾತನಾಡುವ ಅವಕಾಶವೇ ಸಿಗದೇ ಹೋದಾಗ ಅಥವಾ ಏನನ್ನಾದರೂ ಹೇಳಿದಾಗ ಅದರ ಮಾತುಗಳನ್ನು

ಯಾವಾಗಲೂ ಟೀಕಿಸುತ್ತಿದ್ದರೆ  ಅಥವಾ ನಿರ್ಲಕ್ಷಿಸಿದರೆ ಅದು ತನ್ನ ಗ್ರಹಿಕೆಗಳ ಬಗೆಗೆ ವಿಶ್ವಾಸ ಬೆಳೆಸಿಕೊಳ್ಳುವ ಸಾಧ್ಯತೆಗಳು ಕಡಿಮೆ. ಅಂತಹ ಮಗು ಏನನ್ನಾದರೂ ಹೇಳುವ ವಿಷಯದಲ್ಲಿ ಉತ್ಸಾಹವನ್ನು ತೋರಿಸುವುದಿಲ್ಲ. ಏನನ್ನಾದರೂ ಹೇಳು ಅಥವಾ ಬರೆ ಎಂದು ಹೇಳಿದಾಗ ಅದರ ಸಾಮಾನ್ಯ ಪ್ರತಿಕ್ರಿಯೆಯು "ಹೇಳಲಿಕ್ಕೆ ನನಗೇನೂ ಇಲ್ಲ" ಎಂಬುದೇ ಆಗಿರುತ್ತದೆ. ಆ ಮಗು ಹೀಗೆ ನೇರವಾಗಿ ಹೇಳದಿರಬಹುದು. ಆದರೆ ಏನನ್ನು ಬರೆಯಬೇಕು ಎಂದು ಮಗು ಶಿಕ್ಷಕರನ್ನು ಕೇಳುವ ಮೂಲಕ ಅದು ಹೇಳಬೇಕಾದ ತನ್ನದೇ ಆದ ಮಾತುಗಳು ಯಾವುವೂ ಇಲ್ಲ ಎಂಬುದನ್ನು ಸೂಚಿಸುತ್ತಿರುತ್ತದೆ. ಅಂತಹ ಮಕ್ಕಳಿಗೆ ಕಲಿಸುವಾಗ ಶಿಕ್ಷಕರ ಸವಾಲು ದ್ವಿಗುಣಿತವಾಗುತ್ತದೆ. ಏಕೆಂದರೆ ಪ್ರಪಂಚದ ಕುರಿತು ಅದರ ದೃಷ್ಟಿಕೋನ ಸರಿಯಾಗಿದೆ ಎಂಬ ಆತ್ಮವಿಶ್ವಾಸವನ್ನೂ  ಆ ಮಗುವಿನಲ್ಲಿ ತುಂಬಬೇಕಾಗುತ್ತದೆ.

**ಶಿಕ್ಷಕರ ಪ್ರತಿಕ್ರಿಯೆ**

ಮಕ್ಕಳು ತಾವೇ ಸ್ವಂತವಾಗಿ ಬರೆಯಲಾರಂಭಿಸಿದ ಕೂಡಲೆ, ಅವರ ಬೆಳವಣಿಗೆ ಶಿಕ್ಷಕರ ಪ್ರತಿಕ್ರಿಯೆಯ ಮೇಲೆ ಅವಲಂಬಿತವಾಗತೊಡಗುತ್ತದೆ. ನಮ್ಮ ದೇಶದ ಹಲವಾರು ಶಾಲೆಗಳಲ್ಲಿ ಕಾಗುಣಿತ ಅಥವಾ ವ್ಯಾಕರಣವನ್ನು ತಿದ್ದುವುದಷ್ಟೇ ಶಿಕ್ಷಕರ ಪ್ರತಿಕ್ರಿಯೆ ಆಗಿರುತ್ತದೆ. ಮಕ್ಕಳ ಕಾಪಿ ಪುಸ್ತಕಗಳು ಶಿಕ್ಷಕರ ಕೆಂಪು ಶಾಯಿಯ ತಿದ್ದುಪಡಿಗಳಿಂದ ಗಲೀಜಾಗಿರುತ್ತವೆ. ಇಲ್ಲವೇ ಮಗು ಪ್ರತಿಯೊಂದನ್ನೂ 'ಸರಿಯಾಗಿ' ಬರೆದಿದ್ದರೆ ಶಿಕ್ಷಕರು ಸುಮ್ಮನೆ 'ಸರಿ' ಚಿಹ್ನೆಯನ್ನು ಹಾಕಿರುತ್ತಾರೆ. ಈ ಎರಡೂ ಬಗೆಯ ಪ್ರತಿಕ್ರಿಯೆಗಳು ಏಕಾಏಕಿ ವಿನಾಶಕಾರಿ ಅಲ್ಲದಿದ್ದರೂ ಬಹಳ ಅಪೂರ್ಣವಾದ ಪ್ರತಿಕ್ರಿಯೆಗಳಾಗಿವೆ.

ಮಕ್ಕಳ ತಪ್ಪುಗಳನ್ನು ತಿದ್ದಿ, ಅನುಮೋದಿಸಿ ಸಹಿ ಹಾಕುವುದರ ಜೊತೆಗೆ ಶಿಕ್ಷಕರು ಮಗುವಿನ ಬರವಣಿಗೆಗೆ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿ ಏನನ್ನಾದರೂ ಬರೆಯಬೇಕಾಗುತ್ತದೆ. ಇದು ನಿನಗೆ  ಏನನ್ನಾದರೂ ನೆನಪಿಸಿತೇ? ಇದು ನಿನಗೆ  ಏಕೆ ಒಳ್ಳೆಯ ಬರವಣಿಗೆ ಎನಿಸಿತು? ಇನ್ನೂ ಹೆಚ್ಚಿನದಾಗಿ  ಏನನ್ನು ಹೇಳಬಹುದು? ಬೇರೆ ಯಾರಾದರೂ ಇದಕ್ಕಿಂತ ಭಿನ್ನವಾಗಿ ಏನನ್ನಾದರೂ ಬರೆದಿರುವರೇ? ಒಂದು ಬರವಣಿಗೆಗೆ ಪ್ರತಿಕ್ರಿಯಿಸಲು ನೂರೆಂಟು ಮಾರ್ಗಗಳಿವೆ. ಪ್ರತಿ ಸಲ, ಒಬ್ಬ ಶಿಕ್ಷಕರಾಗಿ ನೀವು ಮಗು ಹೇಳಿರುವುದನ್ನು ವಿಸ್ತರಿಸಬೇಕಾಗುತ್ತದೆ. ನಿಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸುವ ಮೂಲಕ ಮಗುವಿನ ಮಾತುಗಳನ್ನು ವಿಸ್ತರಿಸುವ ಹಾಗೆ. ಮಗುವಿನ ಕಾಪಿ ಪುಸ್ತಕದ ಮೇಲೆ ಒಂದೋ ಅಥವಾ ಎರಡೋ ವಾಕ್ಯಗಳನ್ನು ಬರೆಯುವ ಮೂಲಕ ಬರವಣಿಗೆ ಒಂದು ಯಾಂತ್ರಿಕ ಅಭ್ಯಾಸವಲ್ಲ, ಅದೂ ಒಂದು ರೂಪದ ಮಾತುಕತೆ ಎಂದು ನೀವು ಮಗುವಿಗೆ ತೋರಿಸಿಕೊಡುತ್ತಿರುತ್ತೀರಿ. ನೀವು ವ್ಯಾಕರಣವನ್ನು  ಪರೀಕ್ಷಿಸುವಾಗಲೂ -ಇದು ಎಲ್ಲಾ ಶಿಕ್ಷಕರೂ ಪಾಲಿಸಲೇಬೇಕಾದ ಸಂಗತಿಯಾಗಿದೆ- ಕೊನೆಯಲ್ಲಿ ಸಂಕ್ಷಿಪ್ತವಾಗಿ ಏನಾದರೂ ಆಸಕ್ತಿಕರವಾದ, ವೈಯಕ್ತಿಕವಾದ ವಿಷಯವನ್ನು ನೀವು ಹೇಳಬಹುದು. ಅದು ಮಗುವಿನ ಪಾಲಿಗೆ ನಿಮ್ಮ ಸಹಿಗಿಂತಲೂ ಮುಖ್ಯವಾದುದು.

ತಪ್ಪುಗಳನ್ನು ತಿದ್ದುವಾಗ ಆ ತಪ್ಪುಗಳನ್ನು ಸುಮ್ಮನೆ ಪತ್ತೆ ಹಚ್ಚಿದರೆ ಸಾಲದು. ಸುಮ್ಮನೆ ಪತ್ತೆ ಹಚ್ಚಿ ಕೆಂಪು ಶಾಯಿಯಿಂದ ಅದರ ಮೇಲೆ ವೃತ್ತಾಕಾರವನ್ನೋ ಅಡ್ಡಗೆರೆಯನ್ನೋ ಬರೆದರೆ ನೀವು ಮಗುವಿನ ಅಸಾಮರ್ಥ್ಯಕ್ಕೆ ಉದಾಹರಣೆಗಳನ್ನು

ನೀಡುತ್ತಿರುತ್ತೀರಿ ಅಷ್ಟೇ. ಮಗು ಎಲ್ಲಿ ಕೌಶಲ ಸಾಧಿಸಿದೆಯೋ ಅದನ್ನು ಗುರುತಿಸುವುದು ಮತ್ತು ತಪ್ಪು ಮಾಡಿದ್ದಲ್ಲಿ ಅದಕ್ಕೆ ಸೂಕ್ತವಾದ ಪರ್ಯಾಯವನ್ನು ಸೂಚಿಸುವುದು, ಇನ್ನೂ ಬಹಳ ಮುಖ್ಯವಾದ ಸಂಗತಿಯಾಗಿದೆ. ಬರವಣಿಗೆಯಲ್ಲಿ ತಪ್ಪು ಮಾಡುವ ಮಗುವಿಗೆ ಸಹಾಯ ಮಾಡುವ ಇನ್ನೊಂದು ವಿಧಾನವೆಂದರೆ ಮಗುವಿನ ಕ್ರಿಯಾಶೀಲ ಗಮನವನ್ನು ತಪ್ಪುಗಳನ್ನು ಗುರುತಿಸುವುದರತ್ತ ತೊಡಗಿಸುವುದಾಗಿದೆ. ಉದಾಹರಣೆಗೆ, ಒಂದು ನಿರ್ದಿಷ್ಟ ಪದದ ಕಾಗುಣಿತ ದೋಷವನ್ನು ಸರಿಪಡಿಸಬೇಕೆಂದಿದ್ದರೆ ಅದರ ಸರಿಯಾದ ಕಾಗುಣಿತವನ್ನು ಬರೆಯಿರಿ ಬಳಿಕ ಅದೇ ಪದವನ್ನು ಮೂರು ವಿವಿಧ ಕಾಗುಣಿತಗಳೊಂದಿಗೆ ಬರೆಯಿರಿ. ನಂತರ ಸರಿಯಾದ ಕಾಗುಣಿತವನ್ನು ಗುರುತಿಸಲು ಮಗುವಿಗೆ ಹೇಳಿ. ತಪ್ಪನ್ನು ಗುರುತಿಸುವಲ್ಲಿ ನೀವು ಮಗುವನ್ನು ತೊಡಗಿಸಿಕೊಂಡರೆ ಮಗು ತನ್ನದೇ ಕೆಲಸವನ್ನು ವಿಮರ್ಶೆಯ ದೃಷ್ಟಿಯಿಂದ ನೋಡುವ ಸಾಮರ್ಥ್ಯ ಬೆಳೆಸಿಕೊಳ್ಳಲು ಅದಕ್ಕೆ ನೀವು ನೆರವಾಗುತ್ತಿರುತ್ತೀರಿ.

1. **ಪರಿಚಿತ ವಸ್ತುಗಳು**

ಮನೆಯಲ್ಲಿರುವ ವಸ್ತುಗಳ ಕುರಿತು ಮಾತನಾಡಿ ಅಥವಾ ಪರಿಚಿತ ವಸ್ತುಗಳು ಅಂದರೆ 'ಪಾತ್ರೆಗಳು', 'ಬಟ್ಟೆಗಳು', 'ಸಾಕು ಪ್ರಾಣಿಗಳು', 'ವಾಹನಗಳು' ಇತ್ಯಾದಿಗಳ ಕುರಿತು ಮಾತನಾಡಿ. ಒಂದು ವಸ್ತುವಿಷಯದ ಅಡಿಯಲ್ಲಿ ಬರುವ ವಿವಿಧ ವಸ್ತುಗಳನ್ನು ಹೆಸರಿಸಿ ಎಂದು ಮಗುವಿಗೆ ಹೇಳಿ (ಉದಾಹರಣೆಗೆ, ಚಮಚಗಳು, ಬಾಣಲೆಗಳು, ಲೋಟಗಳು 'ಪಾತ್ರೆ'ಗಳ ಅಡಿಯಲ್ಲಿ ಬರುತ್ತವೆ). ಒಂದು ಗುಂಪಿಗೆ ಸೇರುವ ಎಲ್ಲಾ ವಸ್ತುಗಳನ್ನು ಕಪ್ಪು ಹಲಗೆಯ ಮೇಲೆ ಬರೆಯಿರಿ.

ಮಕ್ಕಳನ್ನು ಎರಡು ಗುಂಪುಗಳನ್ನಾಗಿ ಮಾಡಿ. ಮೊದಲ ಗುಂಪಿನ ಎಲ್ಲಾ ಮಕ್ಕಳೂ ಪಟ್ಟಿಯಲ್ಲಿನ ಒಂದು ವಸ್ತುವಿನ ಹೆಸರನ್ನು ಕಾಪಿ ಮಾಡಿಕೊಳ್ಳುತ್ತಾರೆ. ಉದಾಹರಣೆಗೆ, ಒಂದು ಮಗು 'ಚಮಚ' ಪದವನ್ನು, ಮತ್ತೊಂದು ಮಗು 'ತಟ್ಟೆ' ಪದವನ್ನು ಬರೆದುಕೊಳ್ಳುತ್ತದೆ. ಈಗ ಎರಡನೆಯ ಗುಂಪಿನ ಮಕ್ಕಳು ಒಬ್ಬೊಬ್ಬರಾಗಿ ವಸ್ತುಗಳನ್ನು ಕೇಳುತ್ತಾರೆ. ಹಾಗೆ ಕೇಳಿದ ವಸ್ತುವಿನ ಹೆಸರನ್ನು ಮೊದಲ ಗುಂಪಿನ ಯಾವ ಮಗು ಬರೆದುಕೊಂಡಿರುತ್ತದೋ ಆ ಮಗು ಎದ್ದು ನಿಂತು ಹಾಗೆ ಕೇಳಿದ ತನ್ನ ಸಹಪಾಠಿಯ ಬಳಿಗೆ ಹೋಗಬೇಕು ಮತ್ತು ತಾನು ಬರೆದುಕೊಂಡಿದ್ದ ಆ ಪದವನ್ನು ಹೇಗೆ ಬರೆಯಬೇಕು ಎಂದು ತೋರಿಸಿಕೊಡಬೇಕು.

2. **ಚಿಹ್ನೆಗಳನ್ನು ಸಂಗ್ರಹಿಸುವುದು**

ನೀವು ಯಾವ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತಿದ್ದೀರೋ ಅದನ್ನಾಧರಿಸಿ ನೀವು ವಿವಿಧ ಬಗೆಯ ಸಂಕೇತಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಹಳ್ಳಿಗಳಲ್ಲಿ ಗೋಡೆಗಳ ಮೇಲೆ ಬರೆದ, ಪೋಸ್ಟರ್‌ಗಳ ಮೇಲೆ ಹಾಗೂ ಜಾಹಿರಾತುಗಳ ಮೇಲೆ ಬರೆಯಲಾದ ಘೋಷಣೆಗಳನ್ನು ಬಳಸಿಕೊಳ್ಳಬಹುದು. ಮಕ್ಕಳಿಗೆ ಶಾಲೆಗೆ ಬರುವ ಹಾದಿಯಲ್ಲಿ ಕಾಣುವ ಚಿಹ್ನೆಗಳನ್ನು ಬರೆದುಕೊಂಡು ಬರಲು ಹೇಳಿರಿ. ಎಲ್ಲ ಚಿಹ್ನೆಗಳನ್ನೂ ಕಪ್ಪು ಹಲಗೆಯ ಮೇಲೆ ಬರೆದು ಆ ಚಿಹ್ನೆಗಳು ಎಲ್ಲಿ ಕಂಡವು ಮತ್ತು ಅವುಗಳ ಅರ್ಥವೇನು ಎಂದು ಮಕ್ಕಳನ್ನು ಕೇಳಿರಿ.

### 3. ಪದಗಳನ್ನು ಪೂರ್ಣಗೊಳಿಸುವುದು

ಎಲ್ಲ ಮಕ್ಕಳನ್ನೂ ಇಬ್ಬಿಬ್ಬರಂತೆ ಜೋಡಿ ಮಾಡಿ. ಒಂದು ಮಗು ಒಂದು ಪದವನ್ನು ಪ್ರಾರಂಭಿಸಲಿ ಮತ್ತೊಂದು ಮಗು ಅಂತ್ಯಾಕ್ಷರದ ಅಥವಾ ಪ್ರಾಸ ಪದ ಹೇಳಿ ಅದನ್ನು ಪೂರ್ಣಗೊಳಿಸಲಿ. ಪ್ರತಿಯೊಂದು ಮಗುವೂ ಹತ್ತು ಪದಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸುವವರೆಗೂ ಸರದಿ ಮುಂದುವರಿಯುತ್ತಿರಲಿ.

### 4. ಕೇವಲ ಒಂದು ಪದ

ಒಂದು ಗುಂಪಿಗೆ ಐದು ಮಕ್ಕಳಿರುವಂತೆ ಮಕ್ಕಳನ್ನು ಗುಂಪು ಮಾಡಿ. ಪ್ರತಿಯೊಂದು ಗುಂಪಿನ ಬಳಿಯೂ ಬರೆಯಲು ಒಂದು ಕಾಗದದ ತುಂಡು ಅಥವಾ ಕಾಪಿ ಪುಸ್ತಕ ಇರಲಿ ಮತ್ತು ಬರೆಯಲು ಒಂದು ಪೆನ್ಸಿಲಾದರೂ ಇರಲಿ. ಪ್ರತಿ ಗುಂಪಿನಲ್ಲೂ 'ಪ್ರಾರಂಭಿಸುವವರು' ಎಂದು ಒಂದು ಮಗುವನ್ನು ಆಯ್ಕೆ ಮಾಡಿಕೊಳ್ಳಿ. ಪ್ರಾರಂಭಿಸುವ ಮಗು ಒಂದು ವಾಕ್ಯವನ್ನು ಯೋಚಿಸುತ್ತದೆ ಆದರೆ ಒಂದೇ ಒಂದು ಪದವನ್ನಷ್ಟೇ ಹಾಳೆಯ ಮೇಲೆ ಬರೆದು ಅದನ್ನು ತನ್ನ ಗುಂಪಿನ ಮತ್ತೊಬ್ಬಳು ಸಹಪಾಠಿಗೆ ನೀಡುತ್ತದೆ. ಆ ಮಗು ಈಗಾಗಲೇ ಬರೆಯಲಾಗಿರುವ ಮೊದಲ ಪದಕ್ಕೆ ಹೊಂದಾಣಿಕೆಯಾಗುವಂತೆ ಮತ್ತೊಂದು ಪದವನ್ನು ಬರೆಯುತ್ತದೆ. ವಾಕ್ಯ ಪೂರ್ಣಗೊಳ್ಳುವವರೆ ಹಾಳೆಯು ಹೀಗೇ ಒಬ್ಬರಿಂದ ಒಬ್ಬರಿಗೆ ಹಸ್ತಾಂತರವಾಗುತ್ತಿರುತ್ತದೆ. ಸರಿಯಾದ ವಾಕ್ಯ ರಚನೆಯಾಗುತ್ತಿಲ್ಲ ಆದ್ದರಿಂದ ವಾಕ್ಯವನ್ನು ಬಿಟ್ಟುಬಿಡಬೇಕು ಎಂದು ಯಾವುದೇ ಹಂತದಲ್ಲಿ ಯಾರಿಗಾದರೂ ಅನ್ನಿಸಬಹುದು. ಆಗ ಗುಂಪಿನವರೆಲ್ಲ ಒಪ್ಪಿದರೆ ಗುಂಪು ಹಾಳೆಯನ್ನು ಪ್ರಾರಂಭಿಸಿದವರಿಗೆ ಹಿಂದಿರುಗಿಸಿ ಈಗ ಬೇರೊಬ್ಬರು 'ಪ್ರಾರಂಭಿಸುವ'ವರನ್ನು ಆಯ್ಕೆ ಮಾಡಿ ಹೊಸ ಪದದೊಂದಿಗೆ ಮತ್ತೆ ಹೊಸದಾಗಿ ವಾಕ್ಯರಚನೆ ಪ್ರಾರಂಭಿಸಬಹುದು.

### 5. ನಕ್ಷೆ ರಚಿಸುವುದು

ಮನೆಗೆ ಹೋಗುವುದು ಹೇಗೆ ಎಂದು ಇಡೀ ತರಗತಿಗೆ ತಿಳಿಸಲು ಮಕ್ಕಳಿಗೆ ಸೂಚಿಸಿರಿ. ಮೊದಲಿಗೆ, ನೀವು ಹೇಗೆ ಮನೆಗೆ ಹೋಗುತ್ತೀರಿ ಎಂದು ಹೇಳಿರಿ. ನೀವು ಮನೆಗೆ ಹೋಗುವ ದಾರಿಯಲ್ಲಿ ನಿಮಗೆ ಕಾಣಿಸುವ ಎರಡು ಅಥವಾ ಮೂರು ವಸ್ತುಗಳನ್ನು ಸಂಕ್ಷಿಪ್ತವಾಗಿ ಆದರೆ ಸ್ಪಷ್ಟವಾಗಿ ವರ್ಣಿಸಿ ಹೇಳಿರಿ. ಆಮೇಲೆ ಎಲ್ಲಾ ಮಕ್ಕಳಿಗೂ ತಮ್ಮ ತಮ್ಮ ಮನೆಗೆ ಹೋಗುವ ದಾರಿಯನ್ನು ವರ್ಣಿಸಲು ತಿಳಿಸಿರಿ. ಹೀಗೆ ಹೇಳುವ ಅವಕಾಶ ಪ್ರತಿಯೊಂದು ಮಗುವಿಗೂ ದೊರೆತ ಮೇಲೆ ಈಗಷ್ಟೇ ವರ್ಣಿಸಿದ ದಾರಿಯನ್ನು ನಕ್ಷೆ ಬರೆದು ತೋರಿಸಿ ಎಂದು ಮಕ್ಕಳಿಗೆ ಸೂಚಿಸಿ. ಅವರಿಗೆ ಅನುಕೂಲವಾಗಲು, ನಿಮ್ಮ ಮಾರ್ಗವನ್ನು ತೋರಿಸುವ ನಕ್ಷೆಯನ್ನು ಕಪ್ಪು ಹಲಗೆಯ ಮೇಲೆ ನೀವು ಬರೆಯಿರಿ. ಮಕ್ಕಳು ನಕ್ಷೆ ರಚಿಸಲು ಪ್ರಾರಂಭಿಸಿದ ಮೇಲೆ ಪ್ರತಿಯೊಂದು ಮಗುವಿನ ಬಳಿಗೂ ಹೋಗಿ, ಮಗು ತನ್ನ ನಕ್ಷೆಯಲ್ಲಿ ತೋರಿಸಲು ಬಯಸುವ ಯಾವುದಾದರೂ ಒಂದು ವಸ್ತುವಿನ ಹೆಸರನ್ನು ಬರೆಯಿರಿ. ಉದಾಹರಣೆಗೆ 'ಮರ', 'ಅಂಗಡಿ', 'ಅಂಚೆಪೆಟ್ಟಿಗೆ' ಇತ್ಯಾದಿ. ನಕ್ಷೆಯ ಅಡಿಯಲ್ಲಿ ಪದವನ್ನು ನಕಲು ಮಾಡಿಕೊಳ್ಳಲು ಮಗುವಿಗೆ ಹೇಳಿರಿ. ಮುಂದಿನ ಸಲ ಬೇರೆ ಇತರ ಸ್ಥಳದ ಬಗ್ಗೆ ಮಾತನಾಡುತ್ತ ಈ ಚಟುವಟಿಕೆಯನ್ನು ಪ್ರಾರಂಭಿಸಿ. ಉದಾಹರಣೆಗೆ 'ನನ್ನ ಗೆಳೆಯನ ಮನೆ', 'ತರಕಾರಿ ಅಂಗಡಿ',

ದೇವಸ್ಥಾನ, ಆಸ್ಪತ್ರೆ ಇತ್ಯಾದಿ. ಪ್ರತಿ ಸಲ ಈ ಚಟುವಟಿಕೆ ನಡೆಸುವಾಗಲೂ ನಕ್ಷೆಯಲ್ಲಿನ ಪದಗಳ ಸಂಖ್ಯೆಯನ್ನು ಹೆಚ್ಚಿಸುತ್ತ ಹೋಗಿ.

**6. ನಮ್ಮ ಸುತ್ತಲಿನ ಸ್ಥಳಗಳು**

ಇದು ಮೇಲಿನ ಚಟುವಟಿಕೆಯ ವಿಸ್ತರಣೆಯಾಗಿದೆ, ಆದರೆ ಈ ಸಲ ನಾವು ಮಕ್ಕಳಿಗೆ ಒಂದು ಸ್ಥಳವನ್ನು ಹೇಗೆ ತಲುಪುವುದು ಎಂಬುದಕ್ಕಿಂತ ಆ ಸ್ಥಳದ ನಕ್ಷೆ ಬರೆಯಲು ಸೂಚಿಸಬೇಕು. ಉದಾಹರಣೆಗೆ, ಶಾಲೆಯ ಹಿಂಬದಿಯ ಮೈದಾನ, ತರಗತಿಯ ಕೋಣೆ, ಸಮೀಪದ ಕೆರೆ ಅಥವಾ ನದಿ. ನಕ್ಷೆಯಲ್ಲಿ ತೋರಿಸಿರುವ ಯಾವುದಾದರೂ ಒಂದು ವಸ್ತುವಿನ ಹೆಸರನ್ನು ಸೂಕ್ತ ಜಾಗದಲ್ಲಿ ಬರೆಯಿರಿ. ಅದೇ ನಕ್ಷೆಯನ್ನು ಮತ್ತೆ ತಯಾರಿಸಲು ಮಕ್ಕಳಿಗೆ ಹೇಳಿರಿ. ಈ ಸಲ ಅವರು ವಸ್ತು, ನಕ್ಷೆಯ ಯಾವ ಭಾಗಕ್ಕೆ ಸೇರುತ್ತದೋ ಆ ಭಾಗದಲ್ಲಿ ಅದರ ಹೆಸರು ಬರೆಯಲಿ.

**7. ಒಂದು ಸ್ಥಳಕ್ಕೆ ಹೋಗಿ ತಲುಪುವುದು**

ಮಕ್ಕಳಿಗೆ ತಮ್ಮ ಹಿರಿಯರನ್ನು ಕೇಳಿ ಸಮೀಪದ ಹಳ್ಳಿ ಅಥವಾ ನಗರದ ಹೆಸರುಗಳನ್ನು ತಿಳಿದುಕೊಂಡು ಬರಲು ಹೇಳಿರಿ. ಆ ಹೆಸರುಗಳನ್ನು ಕಪ್ಪು ಹಲಗೆಯ ಮೇಲೆ ಬರೆಯಿರಿ. ಮಕ್ಕಳಿಗೆ ಅದನ್ನು ಕಾಪಿ ಮಾಡಿಕೊಳ್ಳಲು ಸೂಚಿಸಿ. ಕಪ್ಪು ಹಲಗೆಯ ಮೇಲೆ ಒಂದು ಸರಳವಾದ ನಕ್ಷೆಯನ್ನು ರಚಿಸಿ ದಿಕ್ಕಿಗೆ ಅನುಗುಣವಾಗಿ ಹೆಸರುಗಳನ್ನು ಜೋಡಿಸಿರಿ. ಹೆಸರುಗಳನ್ನು ಮಕ್ಕಳಿಗೆ ಹಂಚಿ ನಕ್ಷೆಗೆ ಅನುಗುಣವಾಗಿ ಮಕ್ಕಳನ್ನು ನಿಲ್ಲಿಸಿ. ಪ್ರತಿಯೊಂದು ಸ್ಥಳವಿರುವ ದಿಕ್ಕಿನ ಆಧಾರದ ಮೇಲೆ ಒಂದು ಪುಟ್ಟ ಸಂಭಾಷಣೆಯನ್ನು ರಚಿಸಿ. ಉದಾಹರಣೆಗೆ,

‘ಎಲ್ಲಿಗೆ ಹೋಗುತ್ತಿರುವೆ?’

‘ನಾನು ಬೆಂಗಳೂರಿಗೆ ಹೋಗುತ್ತಿದ್ದೇನೆ’ (ಇದು ಶಾಲೆಗೆ ಹತ್ತಿರದ ಯಾವುದಾದರೂ ಊರಾಗಬಹುದು)

‘ಅದು ಎಲ್ಲಿದೆ?’

‘ಅದು ಉತ್ತರದಲ್ಲಿದೆ’

‘ಎಷ್ಟು ದೂರ..’

ದಿಕ್ಕು ಮತ್ತು ದೂರಕ್ಕೆ ಲಿಖಿತ ಪದಗಳನ್ನು ಬರೆಯಿರಿ.

**8. ಚಿತ್ರಗಳ ಬಗೆಗೆ ಬರೆಯುವುದು**

‘ಮಾತು’ ಅಧ್ಯಾಯದಲ್ಲಿನ ಚಟುವಟಿಕೆ ಸಂಖ್ಯೆ 8 ನ್ನು ನೋಡಿ. ನಿಮ್ಮ ಪ್ರಶ್ನೆಗಳಿಗೆ ಉತ್ತರ ಬರೆಯಲು ಹೇಳಿರಿ. ದೊಡ್ಡ ಮಕ್ಕಳೊಂದಿಗೆ ಅದನ್ನು ಮಾಡಿರಿ. ಮಕ್ಕಳ ಸ್ವಂತ ಚಿತ್ರಗಳನ್ನು, ಜೊತೆಗೆ ಜಾಹಿರಾತು, ನಿಯತಕಾಲಿಕೆ ಇತ್ಯಾದಿಗಳನ್ನು ಬಳಸಿರಿ. ಅವರ ಚಿತ್ರವನ್ನು ವರ್ಣಿಸಲು ಮಕ್ಕಳಿಗೆ ಹೇಳುವ ಮೂಲಕ ಪ್ರಾರಂಭಿಸಿ. ಬಳಿಕ ಇನ್ನೂ ಜಟಿಲವಾದ ಪ್ರಶ್ನೆಗಳತ್ತ ಮುಂದುವರಿಯಿರಿ.

**9. ಪದಗಳನ್ನು ಪಟ್ಟಿ ಮಾಡುವುದು**

ಈ ಚಟುವಟಿಕೆಯನ್ನು ಮೊದಲ ಸಲ ಮಾಡಲು ಈಗಾಗಲೇ ಬರೆಯುವುದನ್ನು ತಿಳಿದಿರುವ ನಾಲ್ಕು ಅಥವಾ ಐದು ಹಿರಿಯ ಮಕ್ಕಳನ್ನು ಇದಕ್ಕೆ ಸೇರಿಸಿಕೊಳ್ಳಿ. ಅವರು 'ದಾಖಲೆಗಾರ'ರಾಗಿ ಕಾರ್ಯ ನಿರ್ವಹಿಸುತ್ತಾರೆ. ಮಕ್ಕಳನ್ನು ಐದು ಅಥವಾ ಆರು ಸದಸ್ಯರ ಗುಂಪುಗಳಾಗಿ ವಿಂಗಡಿಸಿ. ಪ್ರತಿಯೊಂದು ಗುಂಪೂ ತನ್ನ ಗುಂಪಿನ ಸದಸ್ಯರು ಗುರುತಿಸಬಲ್ಲ ಎಲ್ಲಾ ಸದ್ದುಗಳ ಒಂದು ಪಟ್ಟಿಯನ್ನು ಸಿದ್ಧಪಡಿಸಬೇಕು. ಪ್ರತಿಯೊಂದು ಗುಂಪೂ ಸುತ್ತ ಮುತ್ತ ಒಂದಷ್ಟು ಅಡ್ಡಾಡಲಿ. ಶಾಲಾ ಗೇಟಿನ ಬಳಿ ಹೋಗಿ ಕೆಲ ನಿಮಿಷಗಳ ಕಾಲ ನಿಂತು ಹಿಂದಿರುಗಿ ಬರಲಿ. ಯಾವುದೇ ಮಗು ಒಂದು ಹೊಸ ಶಬ್ದ ಗುರುತಿಸಿದರೆ (ಉದಾಹರಣೆಗೆ, ಬಾಗಿಲು ತೆರೆವ ಶಬ್ದ, ಎಲೆಗಳು ಅಲ್ಲಾಡುವ ಶಬ್ದ) ಆ ಮಗು ಆ ಸದ್ದುಗಳನ್ನು ಬರೆದುಕೊಳ್ಳುತ್ತಿರುವ 'ದಾಖಲಿಸುವ'ವರಿಗೆ ಹೇಳಲಿ. ಗುಂಪು ಪುನಃ ಬಂದು ಸೇರಿದ ಮೇಲೆ ದಾಖಲಿಸುವವರು ತಮ್ಮ ಪಟ್ಟಿಯನ್ನು ಓದುತ್ತಾರೆ. ಸದಸ್ಯರು ತಾವು ಹೇಳಿದ ಪದಗಳನ್ನು ಪಟ್ಟಿಯಲ್ಲಿ ಗುರುತಿಸಿ ಕಾಪಿ ಮಾಡಿಕೊಳ್ಳಲಿ

**10. ಪದ್ಯ ರಚನೆ**

ಒಂದು ಗುಂಪಿಗೆ ಐದು ಮಕ್ಕಳಿರುವಂತೆ ಗುಂಪುಗಳನ್ನು ರಚಿಸಿರಿ. ಪ್ರತಿ ಗುಂಪಿಗೂ ನಾಲ್ಕು ಸಾಲಿನ ಪದ್ಯ ನೀಡಿ ಅದಕ್ಕೆ ಇನ್ನೂ ನಾಲ್ಕು ಸಾಲುಗಳನ್ನು ಸೇರಿಸಲು ಹೇಳಿ. ಪ್ರತಿಯೊಂದು ಗುಂಪೂ ಹದಿನೈದಿಪ್ಪತ್ತು ನಿಮಿಷಗಳ ಕಾಲ ಚರ್ಚಿಸುವ ಸಲುವಾಗಿ ಸ್ವಲ್ಪ ದೂರಕ್ಕೆ ಹೋಗಿ ಕುಳಿತುಕೊಳ್ಳಲಿ.

---

## ಅಧ್ಯಾಯ 5

### ಪಠ್ಯಪುಸ್ತಕಗಳು, ಸ್ಥಳಾವಕಾಶಗಳು ಹಾಗೂ ಪರೀಕ್ಷೆಗಳು

ಈ ಕೊನೆಯ ಅಧ್ಯಾಯವು ಪ್ರಾಥಮಿಕ ಶಾಲಾ ಬದುಕಿನ ವಾಸ್ತವ ಚಿತ್ರಣ ಕುರಿತಾದದ್ದು. ಇದರಲ್ಲಿ ಎತ್ತಿಕೊಳ್ಳಲಾಗಿರುವ ಪ್ರಶ್ನೆ:

"ಈ ಕೈಪಿಡಿಯಲ್ಲಿ ನೀಡಲಾಗಿರುವ ಸಲಹೆಗಳನ್ನು ಅನುಸರಿಸುವುದರ ಜೊತೆಗೆ ಸಾಮಾನ್ಯ ಪ್ರಾಥಮಿಕ ಶಾಲೆಯ ದೈನಂದಿನ ಅಗತ್ಯಗಳನ್ನೂ ಪೂರೈಸಿಕೊಳ್ಳಲು ಸಾಧ್ಯವೇ?"

ಖಂಡಿತವಾಗಿ, ಈ ಪುಸ್ತಕವನ್ನು ಓದುವ ಅಸಂಖ್ಯ ಶಿಕ್ಷಕರನ್ನು ಈ ಪ್ರಶ್ನೆ ಕಾಡುತ್ತದೆ. ಮತ್ತು ಈ ಪುಸ್ತಕವನ್ನು ಶಿಕ್ಷಕರ ತರಬೇತಿಯ ಒಂದು ಕೈಪಿಡಿಯನ್ನಾಗಿ ಬಳಸಲು ಬಯಸುವವರಿಗೂ ಸಹ ಇದು ಬಹಳ ಮುಖ್ಯವಾದ ಪ್ರಶ್ನೆಯಾಗಿದೆ.

ಶಾಲಾ ಬದುಕಿನ ವಾಸ್ತವಗಳ ಬಗೆಗೆ ಶಿಕ್ಷಕರಿಗಿಂತ ಮಿಗಿಲಾದ ಅರಿವು ಬೇರೆಯವರಿಗಿರಲು ಸಾಧ್ಯವಿಲ್ಲ. ಆದ್ದರಿಂದ ಈ ಪುಸ್ತಕವನ್ನು ಶಾಲಾ ಬದುಕಿನ ವಾಸ್ತವತೆಯನ್ನು ಗುರುತಿಸಿಯೇ ರಚಿಸಲಾಗಿದೆ ಎಂದು ಶಿಕ್ಷಕರಿಗೆ ಮನವರಿಕೆ ಮಾಡಿಕೊಡಲಾರದೇ ಹೋದರೆ ಇದಕ್ಕೆ ಯಾವುದೇ ಅರ್ಥ ಇರುವುದಿಲ್ಲ.

**ಬಾಲಬೋಧೆಗಳು ಮತ್ತು ನಿಗದಿತ ಪಠ್ಯಪುಸ್ತಕಗಳು**

ಎಲ್ಲಾ ಶಿಕ್ಷಕರೂ ಪಠ್ಯಪುಸ್ತಕವನ್ನು 'ಪೂರ್ತಿಯಾಗಿ' ಪಾಠ ಮಾಡಬೇಕು ಎಂಬ ನಂಬಿಕೆ ನಮ್ಮ ದೇಶದಲ್ಲಿದೆ. ಅಂದರೆ ಶಿಕ್ಷಕರು ಪಠ್ಯಪುಸ್ತಕದಲ್ಲಿ ನೀಡಲಾಗಿರುವ ಎಲ್ಲಾ ಪಾಠಗಳನ್ನೂ ಒಂದೊಂದಾಗಿ, ಪೂರ್ತಿಯಾಗಿ ಮಾಡಿ ಮುಗಿಸಬೇಕು, ಅದರಲ್ಲಿ ನೀಡಲಾದ ಅಭ್ಯಾಸಗಳನ್ನು ಮಾಡಿಸಬೇಕು, ಸಂಬಂಧ ಪಟ್ಟ ಪಾಠಗಳ ಹೋಮ್‌ವರ್ಕ್ ನೀಡಬೇಕು, ಪ್ರತಿ ಪಾಠದಲ್ಲಿರುವ ವಿಷಯಗಳನ್ನು ಮಗು ಕರಗತ ಮಾಡಿಕೊಂಡಿದೆ ಎಂದು ಖಾತರಿಪಡಿಸಿಕೊಳ್ಳಬೇಕು. ಭಾಷಾ ಕಲಿಕೆಯ ಮಟ್ಟಿಗೆ ಈ ತರಹದ ನಿರೀಕ್ಷೆಗಳು ನಿಸ್ಸಂಶಯವಾಗಿ ಒಂದು ಅಡಚಣೆಯಾಗಿವೆ. ನಿಗದಿತ ಪಠ್ಯಪುಸ್ತಕದಲ್ಲಿರುವ ಪಾಠಗಳನ್ನು ಒಂದು ಬೌದ್ಧಿಕ ಚೂರ್ಣದ ರೀತಿಯಲ್ಲಿ ಸಿದ್ಧಪಡಿಸಿ ಆ ಚೂರ್ಣವನ್ನು ನಿತ್ಯವೂ ಸ್ವಲ್ಪ ಸ್ವಲ್ಪವಾಗಿ ತಿನ್ನಬೇಕು ಎಂದು ಮಗುವಿನ ಮನವೊಲಿಸುವ ಕೆಲಸವಿದೆಯಲ್ಲ, ಅದು ಖಂಡಿತವಾಗಿ ಸಂತೋಷದಾಯಕವಾದ, ಉತ್ತೇಜನಕಾರಿಯಾದ ಅನುಭವವಾಗುವುದಿಲ್ಲ. ಆದಾಗ್ಯೂ ಶಿಕ್ಷಕರಾದ ನಾವು ಇದನ್ನೇ ಅನಿವಾರ್ಯವಾಗಿ ಮಾಡಬೇಕಾಗಿದೆ.

ಇಂತಹ ಸನ್ನಿವೇಶದಲ್ಲಿ ಪ್ರಪಂಚದ ಯಾವ ಪಠ್ಯಪುಸ್ತಕವೂ ಮಗುವಿನ ಶಾಲಾ ಬದುಕನ್ನು ಸಂತೋಷದಾಯಕವಾಗಿ, ಅರ್ಥಪೂರ್ಣವಾಗಿ ಮಾಡಲು ಅಗತ್ಯವಿರುವ ಎಲ್ಲಾ ಸಾಮಗ್ರಿಗಳನ್ನು ಒದಗಿಸಲಾರದು ಎಂಬುದನ್ನು ನಾವು ಮೊದಲು ಗುರುತಿಸಬೇಕಾಗುತ್ತದೆ. ಅತ್ಯುತ್ತಮವೆನಿಸಿದ ಪಠ್ಯಪುಸ್ತಕವೂ ಕೂಡ ಅಲ್ಪ ಸ್ವಲ್ಪ ಒಳ್ಳೆಯ ಸಾಮಗ್ರಿ ಹಾಗೂ ಮಾರ್ಗದರ್ಶನವನ್ನಷ್ಟೇ ನೀಡಬಲ್ಲದು. ಉಳಿದುದು ಶಿಕ್ಷಕರ ಸಂಪನ್ಮೂಲತೆ ಹಾಗೂ ಅವರ ಪರಿಶ್ರಮದಿಂದಷ್ಟೇ ಬರಬೇಕಾಗುತ್ತದೆ. ಈ ನಿಲುವನ್ನು ನಾವು ಒಪ್ಪುವುದಾದಲ್ಲಿ ಒಂದು ನಿಗದಿತ ಪಠ್ಯಪುಸ್ತಕದ ಅಗತ್ಯಗಳೊಂದಿಗೆ ಈ ಕೈಪಿಡಿ ಎಷ್ಟರ ಮಟ್ಟಿಗೆ ಸಮರ್ಥವಾಗಿದೆ ಎಂಬುದನ್ನು ಅರಿಯಲು ಪ್ರಾರಂಭಿಸುತ್ತೇವೆ. ಈ ಪುಸ್ತಕ ಎತ್ತುವ ಪ್ರಮುಖ ಪ್ರಶ್ನೆಯ ಕಡೆಗೊಮ್ಮೆ ನೋಡೋಣ: " ಭಾಷಾ ತರಗತಿಯಲ್ಲಿ ನಾವು ಏನನ್ನು ಕಲಿಸುತ್ತಿದ್ದೇವೆ?"

ಭಾಷಾ ಬೋಧನೆಯು ಮಗುವಿನ ಮನಸ್ಸಿನ ಬೆಳವಣಿಗೆಗೆ ಸಂಬಂಧಿಸಿದ ವೈವಿಧ್ಯಮಯ ಅನುಭವಗಳನ್ನು ಒಳಗೊಂಡಿರುತ್ತದೆ ಎನ್ನುವ ಮೂಲಕ ಈ ಪುಸ್ತಕವು ಆ ಪ್ರಶ್ನೆಗೆ ಉತ್ತರಿಸುತ್ತದೆ. ಭಾಷಾ ತರಗತಿಯು ನಾವು ಮಕ್ಕಳೊಂದಿಗೆ ಸ್ವತಂತ್ರವಾಗಿ, ಸೃಜನಶೀಲವಾಗಿ, ಸಂತೋಷಮಯವಾಗಿ ಒಡನಾಡುವ ಅವಕಾಶ ಕಲ್ಪಿಸಿಕೊಡುವ ಒಂದು ಮಾಧ್ಯಮವಾಗಿದೆ. ಈ ಮಾಧ್ಯಮದ ಒಂದು ವಿಶೇಷವೆಂದರೆ ಮಕ್ಕಳು ಶಾಲೆಗೆ ಬರುವ ವೇಳೆಗಾಗಲೇ ಭಾಷೆಯ ಪರಿಚಯವಿರುತ್ತದೆ. ಅವರು ವಿವಿಧ ಬಗೆಯ ಸನ್ನಿವೇಶಗಳಲ್ಲಿ ವಿವಿಧ ಸನ್ನಿವೇಶಗಳಿಗೆ ಅಗತ್ಯವಿರುವ ಹಾಗೆ ಹೊಂದಿಸಿಕೊಂಡು ಅದನ್ನು ಬಳಸುತ್ತಿರುತ್ತಾರೆ. ಭಾಷಾ ಶಿಕ್ಷಕರು ಮಕ್ಕಳಿಗೆ ಏನನ್ನೋ ಹೊಸದು ಕಲಿಸುತ್ತಿರುವುದಿಲ್ಲ.

ಅವರು ಮಗು ಈಗಾಗಲೇ ಬಳಸುತ್ತಿರುವ ಮಾಧ್ಯಮದ ತನ್ನ ಕೌಶಲವನ್ನು ಅದು ಇನ್ನಷ್ಟು ಹೆಚ್ಚಿಸಿಕೊಳ್ಳಲು, ತನ್ನ ಕಲಿಯುವ ಸಾಮರ್ಥ್ಯಗಳನ್ನು ಇನ್ನಷ್ಟು ಸೂಕ್ಷ್ಮಗೊಳಿಸಿಕೊಂಡು ಸನ್ನಿವೇಶಕ್ಕೆ ಪ್ರತಿಕ್ರಿಯಿಸಲು, ಹೊಸ ಕೌಶಲಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು, ಅಂದರೆ ಓದುವುದು ಮತ್ತು ಬರೆಯುವುದು, ಮತ್ತು ಆ ಕೌಶಲಗಳನ್ನು ಬಳಸಿಕೊಳ್ಳಲು ಅಗತ್ಯವಿರುವ ಸನ್ನಿವೇಶವನ್ನು ಸೃಷ್ಟಿಸಿಕೊಡಬಲ್ಲರು.

ಈ ಹಿನ್ನೆಲೆಯಲ್ಲಿ ಯಾವುದೇ ಪುಸ್ತಕ ಒಂದು ಸಂಪನ್ಮೂಲವಾಗಿಯಷ್ಟೇ ಬಳಕೆಯಾಗುತ್ತದೆ ಮತ್ತು ಪಠ್ಯಪುಸ್ತಕಗಳೂ ಇದಕ್ಕೆ ಹೊರತಲ್ಲ. ಪಠ್ಯಪುಸ್ತಕ ಉತ್ತಮ ಗುಣಮಟ್ಟದ್ದಾಗಿದ್ದರೆ ಅದು ಇತರ ಪುಸ್ತಕಗಳಿಗಿಂತಲೂ ಹೆಚ್ಚಾಗಿ ಬಳಕೆಯಾಗುತ್ತದೆ. ಅದರಲ್ಲಿ ನೀಡಲಾಗಿರುವ ಅಭ್ಯಾಸಗಳನ್ನು, ಈ ಕೈಪಿಡಿಯಲ್ಲಿ ಚರ್ಚಿಸಲಾಗಿರುವ ಉದ್ದೇಶಗಳಿಗೆ ಅನುರೂಪವಾಗಿ ಅವು ನಿರ್ಮಾಣಗೊಂಡಿದ್ದಲ್ಲಿ, ತರಗತಿಯೊಳಗಿನ ಸಂವಾದಕ್ಕೆ ಹಾಗೂ ಬರವಣಿಗೆಗೆ ತಳಹದಿಯನ್ನಾಗಿ ಬಳಸಿಕೊಳ್ಳಬಹುದು. ಅದೇನೇ ಇರಲಿ, ಒಂದಾದ ಮೇಲೊಂದರಂತೆ ಪಠ್ಯಪುಸ್ತಕದ ಪಾಠಗಳನ್ನು ಮುಗಿಸುವುದಕ್ಕಿಂತಲೂ ಹೆಚ್ಚಾಗಿ ಮಗುವಿನ ಭಾಷಾ ಬಳಕೆಯ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು ಶಿಕ್ಷಕರಾದವರ ಮುಖ್ಯ ಉದ್ದೇಶವಾಗಿರಬೇಕು. ಒಂದು ವೇಳೆ ಪಠ್ಯಪುಸ್ತಕ ಬೋಧನೆ ಮಾತ್ರ ತರಗತಿಯ ಆದ್ಯತೆಯಾಗಿದ್ದರೆ (ಉದಾಹರಣೆಗೆ, ಶಿಕ್ಷಕರು ಇತರ ಸಾಮಗ್ರಿ ಸಂಪನ್ಮೂಲಗಳ ಬಳಕೆಯನ್ನು ನಿಲ್ಲಿಸಿಬಿಟ್ಟಿದ್ದರೆ ) ಅದು ನಿಜಕ್ಕೂ ಚಿಂತಿಸಬೇಕಾದ ವಿಷಯವಾಗಿದೆ.

ಅಲ್ಲದೆ ಇಲ್ಲಿ ಗಮನಿಸಬೇಕಾದ ಮತ್ತೊಂದು ಸಂಗತಿ ಇದೆ. ಈ ಕೈಪಿಡಿಯಲ್ಲಿ ನೀಡಲಾಗಿರುವ ಚಟುವಟಿಕೆಗಳು ಹಾಗೂ ವಿಧಾನಗಳು ಪಠ್ಯಪುಸ್ತಕ ಅಥವಾ ಬಾಲಬೋಧೆಗಳೊಂದಿಗೆ ಚೆನ್ನಾಗಿಯೇ ಹೊಂದಿಕೊಳ್ಳುತ್ತವೆ. ಯಾವುದೇ ಶಿಕ್ಷಕರು ಇಲ್ಲಿ ಶಿಫಾರಸು ಮಾಡಲಾದ ಚಟುವಟಿಕೆಗಳೊಂದಿಗೆ ಪಠ್ಯಪುಸ್ತಕ ಆಧಾರಿತ ಚಟುವಟಿಕೆಗಳನ್ನು ಸಂಯೋಜಿಸಬಹುದು. ಭಾಷೆಯನ್ನು ವಿವಿಧ ಬಗೆಯ ಸೃಜನಶೀಲವಾದ ಚಟುವಟಿಕೆಗಳ ಮೂಲಕ ಕಲಿತು ಬಳಸುವ ಅವಕಾಶ ದೊರೆತಾಗ ಮಕ್ಕಳಿಗೆ ಪಠ್ಯ ಪುಸ್ತಕವನ್ನು ಅರ್ಥಮಾಡಿಕೊಳ್ಳಲು ಅಷ್ಟು ಸಮಸ್ಯೆ ಆಗುವುದಿಲ್ಲ ಎಂದು ಅಂತಹ ಶಿಕ್ಷಕರು ಭರವಸೆ ಹೊಂದಬಹುದು. ಅಂತಹ ಮಕ್ಕಳು ಕೂಡ ತರಗತಿಯಲ್ಲಿ ಪಠ್ಯಪುಸ್ತಕವನ್ನು ಪೂರ್ತಿಯಾಗಿ ಅವಲಂಬಿಸಿ ಭಾಷಾ ತರಬೇತಿ ಪಡೆಯುವ ಇತರ ಮಕ್ಕಳಿಗಿಂತ ಹೆಚ್ಚು ತ್ವರಿತವಾಗಿ ನಿಗದಿತ ಪಠ್ಯಪುಸ್ತಕವನ್ನು ಕರಗತ ಮಾಡಿಕೊಳ್ಳಬಲ್ಲರು.

ಈ ಪುಸ್ತಕದಲ್ಲಿ ವಿವರಿಸಲಾಗಿರುವ ಹಲವಾರು ಚಟುವಟಿಕೆಗಳಲ್ಲಿ ಪಠ್ಯ ಪುಸ್ತಕವನ್ನು ಒಂದು ಸಂಪನ್ಮೂಲವಾಗಿ ಒಂದು ಮುದ್ರಿತ ಸಾಮಗ್ರಿಯಂತೆ, ಚಿತ್ರಗಳಿಗಾಗಿ, ಸಂಭಾಷಣೆ ನಡೆಸಲು ಬಳಸಬಹುದು. ಪಠ್ಯಪುಸ್ತಕವನ್ನು ಇತರ ಸಂಪನ್ಮೂಲಗಳೊಂದಿಗೆ ಸಂಯೋಜಿಸಿ ಬಳಸುವುದು ಒಳ್ಳೆಯದು. ಇಲ್ಲವಾದಲ್ಲಿ ಎಲ್ಲವೂ ಪರಿಚಿತ ಎಂದೆನಿಸಿ ಇದರಲ್ಲಿನ ಚಟುವಟಿಕೆಗಳು ಹೊಸದನ್ನು ಮಾಡುವಾಗ ಉಂಟಾಗುವ ಕೌತುಕವನ್ನು ಮೂಡಿಸಲಾರವು. ಎಲ್ಲಾ ಶಿಕ್ಷಕರೂ ವ್ಯಾಪಕವಾದ ಕಾರ್ಯಕ್ರಮಗಳಲ್ಲಿ ವಿವಿಧ ಸಂಪನ್ಮೂಲಗಳನ್ನು ಬಳಸುವಾಗ ಪಠ್ಯಾಧಾರಿತ ಚಟುವಟಿಕೆಗಳ ಸರಿಯಾದ ಪ್ರಮಾಣವನ್ನು ನಿರ್ಧರಿಸಬೇಕಾಗುತ್ತದೆ. ಒಂದು ನೆನಪಿಡಬೇಕಾದ ಸಂಗತಿ ಎಂದರೆ ದಿನದಿನವೂ ಒಂದೇ ಪಠ್ಯಪುಸ್ತಕವನ್ನು ಓದಿಸುವುದರ ಮೂಲಕ ಪಠ್ಯಪುಸ್ತಕವನ್ನು ದಿನ ನಿತ್ಯ ತಿನ್ನಿಸಬೇಕಾದ ಔಷಧಿಯಂತೆ ಬಳಸದೆಯೂ

(ಶಾಲೆಯ ಬೇಡಿಕೆಯಂತೆ) ಪಠ್ಯಕ್ರಮವನ್ನು ಪೂರ್ಣಗೊಳಿಸಬಹುದು ಎಂಬ ವಿಶ್ವಾಸ ಶಿಕ್ಷಕರಿಗೆ ಇರಬೇಕಾದುದು ಅತ್ಯಗತ್ಯ.

**ಸ್ಥಳಾವಕಾಶವನ್ನು ಬಳಸಿಕೊಳ್ಳುವುದು ಹೇಗೆ**

ಭಾರತದ ಎಲ್ಲಾ ಪ್ರಾಥಮಿಕ ಶಾಲೆಗಳೂ ಅನುಭವಿಸುತ್ತಿರುವ ಒಂದು ಗಂಭೀರವಾದ ಸಮಸ್ಯೆ ಎಂದರೆ ಸ್ಥಳಾವಕಾಶದ್ದು. ಈ ಸಮಸ್ಯೆಗೆ ಎರಡು ಮುಖಗಳಿವೆ. ಒಂದು, ಚೆನ್ನಾಗಿಯೇ ಗೊತ್ತಿರುವಂಥದ್ದು. ಆದರೆ ಮತ್ತೊಂದನ್ನು ಯಾರೂ ಹೆಚ್ಚಿಗೆ ಚರ್ಚಿಸುವುದಿಲ್ಲ. ಮೊದಲನೆಯದು ತರಗತಿಯಲಿರುವ ಮಕ್ಕಳ ಸಂಖ್ಯೆ, ಎರಡನೆಯದು ಸ್ಥಳಾವಕಾಶದ ಆಯೋಜನೆಗೆ ಸಂಬಂಧಿಸಿದ್ದು.

ಶಾಲೆಗೆ ನೋಂದಾಯಿಸಿಕೊಂಡ ಎಲ್ಲಾ ಮಕ್ಕಳೂ ಪ್ರತಿದಿನವೂ ತಪ್ಪದೇ ಬರಲಾರಂಭಿಸಿದರೆ ಆ ದಟ್ಟಣೆಯನ್ನು ನಿರ್ವಹಿಸುವುದು ಅಸಾಧ್ಯದ ಕೆಲಸ ಎಂದು ಹೇಳಲು ಸಾಕಷ್ಟು ಪುರಾವೆಗಳುಂಟು. ಒಂದು ತರಗತಿಯಲ್ಲಿ 50 ಮಕ್ಕಳನ್ನು ನೋಡಿಕೊಳ್ಳಬೇಕಾದ ಶಿಕ್ಷಕರು ಈ ಪುಸ್ತಕದಲ್ಲಿ ಪ್ರಸ್ತಾಪಿಸಲಾದ ವಿಧಾನಗಳು ಹಾಗೂ ಚಟುವಟಿಕೆಗಳಿಗೆ ನ್ಯಾಯ ಒದಗಿಸಿಕೊಡಲು ಸಾಧ್ಯವಾಗುವುದಿಲ್ಲ. ಅದೇ ರೀತಿ ಏಕ ಶಿಕ್ಷಕ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರಿಗೆ ಈ ಕೈಪಿಡಿಯಲ್ಲಿ ತಿಳಿಸಲಾದ ಚಟುವಟಿಕೆಗಳನ್ನು ಬಳಸಿಕೊಳ್ಳಲು ಕಷ್ಟವಾಗುತ್ತದೆ. ವಾರದಲ್ಲಿ ಒಂದೋ ಎರಡೋ ದಿವಸಗಳಲ್ಲಿ ಇದರಲ್ಲಿರುವ ಚಟುವಟಿಕೆಗಳನ್ನು ಮಾಡಲು ಪ್ರಯತ್ನಿಸಿದರೂ ಕೂಡ ಅದು ಅವರಿಗೆ ಒಂದಷ್ಟು ತೃಪ್ತಿ ತರಬಹುದು.

ಇನ್ನು ಸಮಸ್ಯೆಯ ಎರಡನೆಯ ಮುಖವಾದ ಸ್ಥಳಾವಕಾಶವು ಎಲ್ಲಾ ಶಿಕ್ಷಕರಿಗೂ -ಅಂದರೆ ಒಂದು ತರಗತಿಯಲ್ಲಿ 30 ಅಥವಾ 40 ಮಕ್ಕಳಿಗೆ ಕಲಿಸಬಲ್ಲ ಅದೃಷ್ಟವಂತ ಶಿಕ್ಷಕರಿಗೂ ಹಾಗೆಯೇ ಹೆಚ್ಚು ಮಕ್ಕಳಿರುವ ಶಾಲೆಗಳ ಶಿಕ್ಷಕರಿಗೂ- ಅತ್ಯಂತ ಪ್ರಸ್ತುತವಾದುದು. ಶಾಲೆಯಲ್ಲಿ ಲಭ್ಯವಿರುವ ಸ್ಥಳಾವಕಾಶವನ್ನು ಮಕ್ಕಳ ಭಾಷಾ ಕಲಿಕೆಯ ಬೆಳವಣಿಗೆಗೆ ಪೂರಕವಾದ ವಾತಾವರಣವಾಗಿ ಒದಗಿ ಬರುವಂತೆ ಯೋಜಿಸುವುದು ಇಲ್ಲಿ ಸವಾಲಾಗಿದೆ. ನಮ್ಮ ಬಹುತೇಕ ಪ್ರಾಥಮಿಕ ಶಾಲೆಗಳಲ್ಲಿ ಅಂತಹ ವಾತಾವರಣವಿಲ್ಲ ಎಂಬುದನ್ನು ಪ್ರಾಯಶಃ ಯಾರೂ ಒಪ್ಪಲಾರರು. ಇಲ್ಲಿ ಗೋಡೆಗಳು ಖಾಲಿಯಿರುತ್ತವೆ, ಎಷ್ಟೋ ಸಲ ನೋಡಲು ಕೊಳಕಾಗಿರುತವೆ. ಅಲ್ಲಿ ಬೀರು, ಕಪಾಟುಗಳಿರುವುದಿಲ್ಲ, ಇದ್ದರೂ ಅವನ್ನು ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ಬಳಸುತ್ತಿರುವುದಿಲ್ಲ. ನಾವಿಲ್ಲಿ ಗೋಡೆಗಳೇ ಇಲ್ಲದ ಶಾಲೆಗಳನ್ನಾಗಲಿ ಅಥವಾ ಯಾವ ಕ್ಷಣದಲ್ಲಾದರೂ ಬಿದ್ದುಹೋಗಬಹುದಾದ ಗೋಡೆಗಳಿರುವ ಶಾಲೆಗಳನ್ನಾಗಲಿ ಪರಿಗಣಿಸುತ್ತಿಲ್ಲ. ಇಂತಹ ಶಾಲೆಗಳಲ್ಲಿ ಏನನ್ನು ಸಾಧಿಸಬಹುದು ಎಂಬುದು ನಮ್ಮ ಪರಿಶೀಲನೆಗೆ ನಿಲುಕದ ಸಂಗತಿಯಾಗಿದೆ.

ಗೋಡೆಗಳು ಸರಿಯಾಗಿ ಸುಸ್ಥಿರವಾಗಿ ಇರುವ ಶಾಲೆಗಳಲ್ಲಿ ಅವನ್ನು ಈ ಪುಸ್ತಕದಲ್ಲಿ ಸೂಚಿಸಿರುವಂತೆ ಅರ್ಥಪೂರ್ಣವಾದ ವಿವಿಧ ಉದ್ದೇಶಗಳಿಗೆ ಬಳಸಿಕೊಳ್ಳಲು ಸಾಧ್ಯವಿದೆ. ಮಕ್ಕಳಿಗೆ ತಮ್ಮನ್ನು ತಾವು ಅಭಿವ್ಯಕ್ತಿಸಿಕೊಳ್ಳಲು, ಚಿತ್ರಕಲೆಯನ್ನೂ ಒಳಗೊಂಡಂತೆ, ವಿವಿಧ ಬಗೆಯ ಮಾಧ್ಯಮಗಳನ್ನು ಬಳಸುವ ಅವಕಾಶ ನೀಡಬೇಕಾದ ಮಹತ್ವವನ್ನು ನಾವು

ಪ್ರತಿಪಾದಿಸಿದ್ದೇವೆ. ಮಕ್ಕಳು ಮಾಡಿರುವ ಚಿತ್ರಗಳು ಹಾಗೂ ಶಿಕ್ಷಕರು ಸಂಪಾದಿಸಿರುವ ಚಿತ್ರಗಳನ್ನು ಸಂರಕ್ಷಿಸಲು ಗೋಡೆಗಳು ಉತ್ತಮ ಮಾಧ್ಯಮವಾಗಿವೆ. ಮಾತು ಮತ್ತು ಬರವಣಿಗೆಯ ಚಟುವಟಿಕೆಗಳನ್ನು ಮಾಡಲು ಎರಡೂ ಬಗೆಯ ಚಿತ್ರಗಳನ್ನು ಬಳಸಿಕೊಳ್ಳಬಹುದಾಗಿದೆ. ಚಿತ್ರಗಳನ್ನು ಗೋಡೆಯ ಮೇಲೆ ಅತಿ ಎತ್ತರಕ್ಕೆ ಹಾಕಬಾರದು.

ಮಕ್ಕಳಿಗೆ ಕ್ರಮೇಣ ಗೋಡೆಯ ಮೇಲಿನ ಚಿತ್ರಗಳನ್ನು ಗೌರವದಿಂದ ಕಾಣುವಂತೆ ತರಬೇತಿ ನೀಡಬೇಕಾಗುತ್ತದೆ. ನೀವು ಓರ್ವ ಶಿಕ್ಷಕರಾಗಿ ಖಾಲಿ ಗೋಡೆಯ (ಬರೆಯುವ ಮುನ್ನ ಪೆನ್ನಿನ ಇಂಕನ್ನು ಗೋಡೆಯ ಮೇಲೆ ಚೆಲ್ಲುವ, ಬರೆಯುವ ಮಕ್ಕಳಿರುವ) ತರಗತಿಯಿಂದ ಚಿತ್ರಮಯವಾದ ಗೋಡೆಯಿರುವ ತರಗತಿಗೆ ಹೋಗುವಾಗ ಒಂದೇ ದಿನದಲ್ಲಿ ಅಥವಾ ಒಂದೇ ವಾರದಲ್ಲಿ ಅಥವಾ ಒಂದೇ ತಿಂಗಳಿನಲ್ಲಿ ಯಶಸ್ಸು ಗಳಿಸಬಲ್ಲೆನೆಂಬ ನಿರೀಕ್ಷೆಯನ್ನು ಇಟ್ಟುಕೊಳ್ಳಬಾರದು. ಖಾಲಿ ಇದ್ದ ಅಥವಾ ಗಲೀಜಾದ ಗೋಡೆಗಷ್ಟೇ ಪರಿಚಿತರಾದ ಮಕ್ಕಳಿಗೆ ಉತ್ತಮವಾದ ಚಿತ್ರಗಳ ಪರಿಚಯ ಮಾಡಿಕೊಳ್ಳಲು ಸ್ವಲ್ಪ ಸಮಯ ಬೇಕಾಗುತ್ತದೆ. ಆ ಸಮಯ ಬರುತ್ತದೆ.

ಅನೇಕ ಶಾಲೆಗಳಲ್ಲಿ ನೀತಿ ವಾಕ್ಯಗಳನ್ನು ಅಂಟಿಸುವ, ಬರೆಯುವ ಉದ್ದೇಶಕ್ಕೆ ಗೋಡೆಯನ್ನು ಬ¼ಸಲಾಗುತ್ತದೆ. ಈ ವಾಕ್ಯಗಳಿಂದ ನೈತಿಕ ಉದ್ದೇಶವಾಗಲಿ, ಭಾಷಾ ಕಲಿಕೆಯ ಉದ್ದೇಶವಾಗಲಿ ಈಡೇರುವುದಿಲ್ಲ. ಬದಲಿಗೆ ಬರೀ ಸಂಪ್ರದಾಯ ಉಳಿಯಬಹುದಷ್ಟೇ. ಇಂತಹ ಘೋಷಣೆಗಳು, ವಾಕ್ಯಗಳು ಭಾಷೆಯ ಬಹಳ ಕಟ್ಟುನಿಟ್ಟಾದ ರೂಢಿಗತವಾದ ಶೈಲಿಯನ್ನು ಬಳಸಿರುತ್ತವೆ ಎಂಬುದನ್ನು ಈ ಕೈಪಿಡಿಯನ್ನೋದುವ, ಇದರಲ್ಲಿ ಸೂಚಿಸಿರುವಂತೆ ಪ್ರಯೋಗ ಮಾಡುವ ಶಿಕ್ಷಕರು ಆದಷ್ಟು ಬೇಗನೆ ಕಂಡುಕೊಳ್ಳುವರು. ಒಂದು ಘೋಷಣಾ ವಾಕ್ಯದಲ್ಲಿ ತಿಳಿಸಲಾದ ಆದರ್ಶಕ್ಕೆ ಅನುಗುಣವಾಗಿ ಯಾರೂ ಕಟ್ಟುನಿಟ್ಟಾಗಿ ಜೀವನ ಮಾಡುವುದಿಲ್ಲವಾದ ಕಾರಣ ಮಕ್ಕಳಿಗೆ ಇಂತಹ ಘೋಷಣಾ ವಾಕ್ಯಗಳು ಭಾಷೆಯ ಅರ್ಥಹೀನ ಬಳಕೆಯಂತೆ ತೋರುತ್ತವೆ. ತರಗತಿಯು ಎಲ್ಲೆಡೆ ನೀತಿ ಬೋಧಿಸುವ ಘೋಷವಾಕ್ಯಗಳಿಂದಲೇ ಅಲಂಕೃತವಾಗಿದ್ದರೆ ಭಾಷೆಯನ್ನು ಅರ್ಥದೊಂದಿಗೆ ಜೋಡಿಸಲು, ಮಕ್ಕಳಿಗೇಕೆ ಕಷ್ಟವಾಗುತ್ತದೆ ಎಂಬುದನ್ನು ಯಾರೂ ಬೇಕಾದರೂ ಅರ್ಥಮಾಡಿಕೊಳ್ಳಬಹುದು. ನಮ್ಮ ಉದ್ದೇಶವೇ ಭಾಷೆಯನ್ನು ಅರ್ಥದೊಂದಿಗೆ ಕಲಿಸುವುದಲ್ಲವೇ?

ನೀತಿ ಬೋಧಿಸುವ ಘೋಷವಾಕ್ಯಗಳ ಜಾಗದಲ್ಲಿ ದೊಡ್ಡ ಅಕ್ಷರಗಳಲ್ಲಿ ಚಿತ್ರಗಳೊಂದಿಗೆ ಬರೆಯಲಾದ ಪದ್ಯಗಳ ಪೋಸ್ಟರುಗಳನ್ನು ಹಾಕಬಹುದು. ಹಿರಿಯ ವಿದ್ಯಾರ್ಥಿಗಳು ಪದ್ಯ ಬರೆಯಲು ನಿಮಗೆ ನೆರವಾಗಬಲ್ಲರು ಮತ್ತು ಚಿಕ್ಕಮಕ್ಕಳು ಚಿತ್ರಗಳನ್ನು ಬರೆಯಬಲ್ಲರು. ನೀವು ಆಯ್ಕೆ ಮಾಡುವ ಪದ್ಯಗಳಲ್ಲಿ ಉಪದೇಶ, ತಾತ್ವಿಕತೆಗಳಿಗಿಂತಲೂ ಉತ್ತೇಜನಕಾರಿಯಾದ, ಆನಂದದಾಯಕವಾದ ಗುಣ ಇರುವುದನ್ನು ಖಾತರಿಪಡಿಸಿಕೊಳ್ಳಿ. ಮಕ್ಕಳು ಯಾವ ಪದ್ಯಗಳನ್ನು ಆನಂದಿಸುತ್ತಾರೋ, ಗೋಡೆಯ ಮೇಲೆ ಹಾಕಲು ಬಯಸುತ್ತಾರೋ ಅಂತಹ ಪದ್ಯಗಳನ್ನು ಆಯ್ಕೆ ಮಾಡಿಕೊಳ್ಳುವುದು ಸೂಕ್ತ. ಅಂತಹ ಪೋಸ್ಟರುಗಳನ್ನು ಆಗಾಗ್ಗೆ ಮಾಡುತ್ತಿರಬೇಕಾಗುತ್ತದೆ. ಹಾಗೆ ಮಾಡುತ್ತಿದ್ದರೆ ಆಗಾಗ ಅದನ್ನು ಬದಲಾಯಿಸಲು ಸಾಧ್ಯವಾಗುತ್ತದೆ.

**ಪರೀಕ್ಷೆಗಳು**

ಈ ಪುಸ್ತಕವನ್ನು ಬಳಸುವ ಶಿಕ್ಷಕರು ಅಂತಿಮವಾಗಿ ಪರೀಕ್ಷಾ ಪದ್ಧತಿಯ ಬೇಡಿಕೆಗಳನ್ನು ಪೂರೈಸಬೇಕಾಗುತ್ತದೆ. ಈ ಬೇಡಿಕೆಗಳು ಬಹು ಬೇಗನೆಯೇ ಶುರುವಾಗುತ್ತವೆ. ಖಾಸಗಿ ಶಾಲೆಗಳಲ್ಲಿ (ಶ್ರೀಮಂತ ಶಾಲೆಗಳೇ ಆಗಬೇಕಿಲ್ಲ) ನರ್ಸರಿ ಹಾಗೂ ಒಂದನೇ ತರಗತಿಯ ಪ್ರವೇಶಕ್ಕೂ ಪರೀಕ್ಷೆಗಳಿವೆ! ಮುಂದೆ ಪ್ರತಿ ವರ್ಷ, ಪ್ರಾರಂಭಿಕ ಹಂತದಲ್ಲಿ ಮುಂದಿನ ತರಗತಿಗೆ ಬಡ್ತಿ ನೀಡುವ ದೇಶದ ಕೆಲವು ಭಾಗಗಳನ್ನು ಹೊರತುಪಡಿಸಿ, ಉಳಿದ ಭಾಗದ ಮಕ್ಕಳು ವಾರ್ಷಿಕ ಪರೀಕ್ಷೆಗಳನ್ನು ಎದುರಿಸಬೇಕಾಗುತ್ತದೆ. ಅದೇನೇ ಇರಲಿ, ದೇಶದ ಹಲವು ಭಾಗಗಳಲ್ಲಿ, ಐದನೆಯ ತರಗತಿಯ ಪರೀಕ್ಷೆಗಳು ಬಹಳ ಮಹತ್ವದ ಪಾತ್ರ ವಹಿಸುತ್ತವೆ. ಮತ್ತು ಇದರ ನಂತರದ ಇನ್ನೂ ಹಲವಾರು ಪರೀಕ್ಷೆಗಳು ಪೋಷಕರಲ್ಲಿ, ಶಿಕ್ಷಕರಲ್ಲಿ ಮತ್ತು ಮಕ್ಕಳಲ್ಲಿ ಸಮಾನವಾದ ಆತಂಕಗಳನ್ನು ಸೃಷ್ಟಿಸುತ್ತವೆ. ದೀಪಾವಳಿ ಹಬ್ಬದ ಸಂಭ್ರಮ ಹೇಗೋ ಹಾಗೇ ಈ ತರಹದ ಆತಂಕಗಳು ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿವೆ. ಪರೀಕ್ಷೆಯ ವಿಷಯದಲ್ಲಿ ತಲೆಕೆಡಿಸಿಕೊಳ್ಳದ ಭಾರತೀಯ ಮಗುವನ್ನು ಕಲ್ಪಿಸಿಕೊಳ್ಳುವುದೂ ಅಸಾಧ್ಯ!

ಮಕ್ಕಳಿಗೆ ಭಾಷೆಯನ್ನು ಬೋಧಿಸುವ ವಿಷಯದಲ್ಲಿ ಈ ಪುಸ್ತಕವನ್ನು ತಾತ್ವಿಕ ಹಾಗೂ ಪ್ರಾಯೋಗಿಕ ಮಾರ್ಗದರ್ಶಿಯಂತೆ ಬಳಸಿಕೊಂಡಲ್ಲಿ ಪರೀಕ್ಷಾ ವಿಷಯದಲ್ಲಿ ಮಕ್ಕಳು ಬೆಳೆಸಿಕೊಂಡಿರುವ ಧೋರಣೆಯ ಮೇಲೆ ಇದು ಸ್ವಲ್ಪವಾದರೂ ಪರಿಣಾಮ ಬೀರಬಲ್ಲದು. ಪರೀಕ್ಷಾ ಭೀತಿ ಸ್ವಲ್ಪಮಟ್ಟಿಗೆ ನಮ್ಮ ಮಕ್ಕಳ ಸ್ವಾವಲಂಬನೆಯ ಕೊರತೆಯ ಪ್ರತಿಫಲವಾಗಿದೆ. ಯಾವುದಾದರೂ ಒಂದು ಚಟುವಟಿಕೆಯನ್ನು ಶಿಕ್ಷಕರ ನೆರವಿಲ್ಲದೆಯೇ ಯಶಸ್ವಿಯಾಗಿ ನೆರವೇರಿಸುವ ಅವಕಾಶ ಇಲ್ಲದಿರುವುದೂ ಸಹ ಪರೀಕ್ಷೆಯಲ್ಲಿ ಅದೃಷ್ಟವನ್ನು ನಂಬುವ ಧೋರಣೆಯೊಂದಿಗೆ ಸಂಬಂಧ ಹೊಂದಿದೆ. ನಮ್ಮ ಶಾಲೆಗಳಲ್ಲಿ ಅಂತಹ ಅವಕಾಶಗಳ ಕೊರತೆಯೂ ಇದೆ. ನಾವು, ಭಾಷೆಯನ್ನೂ ಒಳಗೊಂಡಂತೆ, ಎಲ್ಲಾ ವಿಷಯಗಳ ಕ್ರಿಯಾತ್ಮಕ ಕೌಶಲ ಕಲಿಸುವ ಬದಲು ಜ್ಞಾನವನ್ನು ಬೋಧಿಸುತ್ತೇವೆ. ಯಾವ ಕೌಶಲ ಕಲಿಸಬೇಕೋ ಅದು ಆಕಸ್ಮಿಕವಾಗಿ ಸಂಭವಿಸುತ್ತದೆ. ಈ ಪುಸ್ತಕವನ್ನು ಶಾಲಾಪೂರ್ವ ಹಾಗೂ ಪ್ರಾಥಮಿಕ ಶಾಲಾ ವರ್ಷಗಳಲ್ಲಿ ಸರಿಯಾಗಿ, ನಿರಂತರವಾಗಿ ಅನುಸರಿಸಿದಲ್ಲಿ, ಮಕ್ಕಳಲ್ಲಿ ಆತ್ಮವಿಶ್ವಾಸ ಬೆಳೆಸುವ ವಿಷಯದಲ್ಲಿ ಭರವಸೆ ನೀಡುತ್ತದೆ. ಆತ್ಮವಿಶ್ವಾಸ, ಪರೀಕ್ಷೆಯನ್ನೂ ಒಳಗೊಂಡಂತೆ, ಮಕ್ಕಳ ಸರ್ವಾಂಗೀಣ ಸಾಧನೆಯ ಮೇಲೆ ಖಂಡಿತವಾಗಿಯೂ ಮಹತ್ವದ ಪರಿಣಾಮ ಬೀರಬಲ್ಲದು.

---

**ಅನುಬಂಧ ೧**

**ಮಕ್ಕಳಿಗಾಗಿ ಕೆಲವು ಉತ್ತಮ ಪುಸ್ತಕಗಳು**[i]

1. ಕಂದನ ಕಾವ್ಯಮಾಲೆ (ಜಿ.ಪಿ.ರಾಜರತ್ನಂ, ಸಪ್ನ ಬುಕ್ ಹೌಸ್)
2. ತಟ್ಟು ಚಪ್ಪಾಳೆ ಪುಟ್ಟ ಮಗು (ಸಂಪಾದಕರು: ಬೊಳುವಾರು ಮಹಮದ್ ಕುಂಞ್, ದಿವ್ಯಾ ಪ್ರಕಾಶನ)
3. ನವ ಕರ್ನಾಟಕ ಪುಟಾಣಿ ಪುಸ್ತಕಗಳು: ವರ್ಣರಂಜಿತ ಚಿತ್ರಮಾಹಿತಿ ಪುಟಾಣಿ ಪುಸ್ತಕಗಳು, ನವಕರ್ನಾಟಕ ಪ್ರಕಾಶನ
4. ಬಣ್ಣದ ಚಿತ್ರ ಮತ್ತು ಬಾ ಅಳಿಲೆ ಬಾ (ಬಿ.ಕೆ. ತಿರುಮಲಮ್ಮ, ನವಕರ್ನಾಟಕ ಪ್ರಕಾಶನ)
5. ಕಥೆಗಳ ತೋರಣ (ಕಥೆ ಓದಿ+ಬಣ್ಣ ತುಂಬಿ), ಭಾಗ 1,2,3,4 (ಶಾಲಿನಿ ಮೂರ್ತಿ, ನವಕರ್ನಾಟಕ ಪ್ರಕಾಶನ)
6. ಮರವೇ ಮರ್ಮರವೇ (ಚಂದ್ರಶೇಖರ ಕಂಬಾರ, ಅಂಕಿತ ಪ್ರಕಾಶನ)
7. ನರಿಗಳೇಕೆ ಕೋಡಿಲ್ಲ ಮತ್ತು ಕಿಂದರಿಜೋಗಿ (ಕುವೆಂಪು, ಉದಯರವಿ ಪ್ರಕಾಶನ)
8. ಈಸೋಫನ ಲೋಕನೀತಿ ಕಥೆಗಳು (ಸಂಗ್ರಹ, ರೂಪಾಂತರ: ಆನಂದ, ನವಕರ್ನಾಟಕ ಪ್ರಕಾಶನ)
9. ಚಿವ್ ಚಿವ್ ಗುಬ್ಬಿ-ಶಿಶು ಗೀತೆಗಳು (ಎಸ್. ಮಂಜುನಾಥ, ನವಕರ್ನಾಟಕ ಪ್ರಕಾಶನ)
10. ಕಿಂಡರ್ ಕಥಾ ಮಾಲಿಕೆ ಸರಣಿ ಪುಸ್ತಕಗಳು, ನವಕರ್ನಾಟಕ ಪ್ರಕಾಶನ
11. ಪರಾಗ್ ಉಪಕ್ರಮ ಮಾಲಿಕೆ ಸರಣಿ ಪುಸ್ತಕಗಳು, ನವಕರ್ನಾಟಕ ಪ್ರಕಾಶನ
12. ದಿನಕ್ಕೊಂದು ಕಥೆ, 12 ಪುಸ್ತಕಗಳು (ಅನುಪಮಾ ನಿರಂಜನ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು)
13. ಬಾಳ ಒಳ್ಳೇವ್ರು ನಮ್ ಮಿಸ್ಸು (ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್, ಅಂಕಿತ ಪ್ರಕಾಶನ)
14. ಮಕ್ಕಳಿಗಾಗಿ ಸಣ್ಣಕಥೆಗಳು (ಸುಧಾ ಮೂರ್ತಿ, ಸಪ್ನಾ ಬುಕ್ ಹೌಸ್)
15. ಪಂಚತಂತ್ರದ ಕಥೆಗಳು, ಸರಣಿ (ವಾಸನ್ಸ್ ಪಬ್ಲಿಕೇಷನ್ಸ್)

---

[i] ಮೂಲ ಕೃತಿಯಲ್ಲಿದ್ದ ಮಕ್ಕಳ ಹಿಂದಿ ಪುಸ್ತಕಗಳಿಗೆ ಬದಲಾಗಿ ಮಕ್ಕಳ ಕನ್ನಡ ಪುಸ್ತಕಗಳ ಪಟ್ಟಿ ನೀಡಲಾಗಿದೆ- ನಾಗಮಣಿ ಎಸ್. ಎನ್., ಕಾಪಿ ಎಡಿಟರ್